ಕೂಡ ಹೇಳಿದ್ದಾರೆ. ಇವತ್ತು ೨೦-೨೫ ಸಾವಿರ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳಲ್ಲಿ ಸಹಿತ ಅಲ್ಲಿರತಕ್ಕಂಥ ಒಂದೆರಡು ಕಾಲೇಜುಗಳಲ್ಲಿ ಪ್ರತಿಯೊಬ್ಬರೂ ತಮ್ಮಲ್ಲಿಯ ಸೆಕ್ಷನ್‌ಗಳನ್ನು ಹೆಚ್ಚಿಗೆ ಮಾಡಬೇಕೆಂಬುದನ್ನು ಸರಕಾರದ ಗಮನಕ್ಕೆ ತಂದಿದ್ದಾರೆ ಇದರಿಂದ ಬೆಂಗಳೂರು ನಗರದಲ್ಲಂತೂ ಭಾರಿ ದೊಡ್ಡ ತೊಂದರೆಯಾಗಿದೆ. ಅನೇಕ ಕಾಲೇಜುಗಳಲ್ಲಿ ೫೫-೬೦ ಪರ್‌ಸೆಂಟ್‌ನಷ್ಟು ಅಂಕಗಳನ್ನು ತೆಗೆದುಕೊಂಡವರಿಗೂ ಫ್ರೀ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಸಿಕ್ಕಿಲ್ಲ ಇದೊಂದು ಬಹಳ ದೊಡ್ಡ ಸಮಸ್ಯೆಯಾಗಿದೆ ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೀಟು ಸಿಗದೆ ನಿರಾಶರಾಗುವ ಸಂದರ್ಭ ಬಂದಿದೆ. ಆದುದರಿಂದ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪ್ರವೇಶ ದೊರಕಿಸಿಕೊಡುವಂಥ ಒಂದು ವಾತಾವರಣವನ್ನು ಕಲ್ಪಿಸಿಕೊಡಬೇಕು. ಈ ದಿಶೆಯಲ್ಲಿ ದಯಮಾಡಿ ಸರಕಾರದ ಆಜ್ಞೆಯನ್ನು ಹೊರಡಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿಯಲ್ಲಿ ಮಾನ್ಯ ಸಭಾನಾಯಕರು ಮೊನ್ನೆ ದಿವಸ ಮಾತನಾಡತಕ್ಕಂಥ ಸಂದರ್ಭದಲ್ಲಿ ಮತ್ತು ಅವರು ಇತ್ತೀಚೆಗೆ ದೆಹಲಿಗೆ ಹೋದಂಥ ಸಂದರ್ಭದಲ್ಲಿ ಕೊಂಕಣ ರೈಲ್ವೆ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ಆ ಬಗ್ಗೆ ಮಾನ್ಯರು ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳುವಂಥ ವಿಚಾರಗಳು ನನ್ನ ಗಮನಕ್ಕೆ ಬಂದಿದೆ. ಅವರು ೫೫-೬೦ ಪರ್‌ಸೆಂಟ್‌ನವರಿಗೆ ಸೀಟು ಸಿಗಲಿಲ್ಲ ಎಂದು ಹೇಳಿದ್ದಾರೆ. ಸುಮಾರು ೬೫-೭೦ ಪರ್‌ಸೆಂಟ್ ತೆಗೆದುಕೊಂಡಂತಹ ವಿದ್ಯಾರ್ಥಿಗಳಿಗೂ ಕೂಡ ನಗರದಲ್ಲಿ ಪಿಯುಸಿಗೆ ಸೀಟ್ ಸಿಗುತ್ತಾ ಇಲ್ಲ ಯಾವ ಕಾಲೇಜಿನವರು ಹೊಸದಾಗಿ ಹೆಚ್ಚಿಗೆ ಸೆಕ್ಷನ್‌ಗಳನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ ಅವರಿಗೆ ನಾವು ನಿರಾಕರಣೆ ಮಾಡುವುದಿಲ್ಲ ಕೊಡುತ್ತೇವೆ ಅಷ್ಟೇ ಅಲ್ಲ, ಯಾರಾದರೂ ಹೊಸದಾಗಿ ಕಾಲೇಜುಗಳನ್ನು ಮಾಡುವುದಕ್ಕೆ ಅರ್ಜಿಗಳನ್ನು ಹಾಕಿದ್ದರೆ ಆ ಭಾಗಗಳನ್ನು ನೋಡಿಕೊಂಡು ಅದನ್ನು ಕೂಡ ಸರಕಾರ ಪರಿಶೀಲನೆ ಮಾಡುತ್ತದೆ, ವಿಳಂಬವಿಲ್ಲದೆ ತತ್‌ಕ್ಷಣವೇ ಆ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ.

ಡಾ॥ ಜೀವರಾಜ ಆಳ್ವ.—ಖಾಸಗಿ ಶಿಕ್ಷಣ ಸಂಸ್ಥೆಗಳು ಬೆಂಗಳೂರಿನಲ್ಲಿ ಜಾಸ್ತಿ ಇವೆ. ಅವರು ಹೊಸ ತರಗತಿಗಳನ್ನು ಮಾಡುತ್ತೇವೆ ಎಂದು ನಿಮ್ಮನ್ನು ಕೇಳುವುದು ಕಡಿಮೆ, ಆದುದರಿಂದ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕರುಗಳನ್ನು ಕರೆಯಿಸಿಕೊಂಡು ಈ ಪರಿಸ್ಥಿತಿಯ ನಿವಾರಣೆಗಾಗಿ ಅವರು ಹೊಸ ತರಗತಿಗಳನ್ನು ತೆರೆಯುವಲ್ಲಿ ಒತ್ತಾಯವನ್ನು ತರಬೇಕಾಗುತ್ತದೆ. ಹೊಸ ತರಗತಿಗಳನ್ನು ತೆರೆಯಿಸಬೇಕಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಬೆಂಗಳೂರಿನ ಕೆಲವು ಪ್ರತಿಷ್ಠಿತ ಕಾಲೇಜುಗಳಲ್ಲಿ ಅದಕ್ಕಿಂತ ಕೆಳಗಡೆ ಅಂಕಗಳನ್ನು ಗಳಿಸಿದವರಿಗೆ ಕೊಡುತ್ತಾ ಇಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ೮೭ ಪರ್‌ಸೆಂಟ್‌ಗೆ ನಿಲ್ಲಿಸಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕೆಂಬ ವಿಚಾರ ಮಾಡಿ, ಖಾಸಗಿ ಸಂಸ್ಥೆಯವರನ್ನು ಮತ್ತು ಅಧಿಕಾರಿಗಳನ್ನು ಕರೆದು ಆ ಬಗ್ಗೆ ಸೂಕ್ತ ಚರ್ಚೆ ಮಾಡಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ನಿಯಮ ೬೮ರ ಮೇರೆಗೆ

ದೂರವಾಣಿ ಕದ್ದಾಲಿಕೆ ಬಗ್ಗೆ ಚರ್ಚೆ

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಟೆಲಿಫೋನ್ ಕದ್ದಾಲಿಕೆ ವಿಚಾರದಲ್ಲಿ ಒಂದು ಪ್ರಿವಿಲೇಜ್ ಮೋಷನ್‌ನನ್ನು ಕಳುಹಿಸಿದ್ದೇನೆ ತಾವುಗಳು ನಿಯಮ ೬೮ರ ಪ್ರಕಾರ ಚರ್ಚಿಸಲು ಈ ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಅದಕ್ಕೆ ಮೊದಲು ಈ ಪ್ರಿವಿಲೇಜ್ ಮೋಷನ್ ಬಗ್ಗೆ ತಾವು ತೀರ್ಮಾನ ಮಾಡಬೇಕಾಗಿದೆ. ‘‘It is under consideration’’ ಎಂದು ತಮ್ಮ ಕಚೇರಿಯಲ್ಲಿ ನನಗೆ ಹೇಳಿದ್ದಾರೆ. ಈಗ ಅದು ಯಾವ ಸ್ಟೇಜ್‌ನಲ್ಲಿದೆ ಎಂದು ದಯಮಾಡಿ ಹೇಳಬೇಕು ಈ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳಬೇಕು. ಇದು ಬಹಳ ಮಹತ್ತರವಾದಂಥ ವಿಚಾರ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ರಾಮಕೃಷ್ಣ ಹೆಗಡೆಯವರು ಟೆಲಿಫೋನ್ ಕದ್ದಾಲಿಕೆ ವಿಚಾರದಲ್ಲಿ......

ಶ್ರೀ ವಾಟಾಳ್ ನಾಗರಾಜ್.—ಈಗ ಚರ್ಚೆಗೆ ಒಂದು ಸೂಚನೆ ಇರುವಾಗ ಮತ್ತೊಂದು ಸೂಚನೆಯನ್ನು ತರಬಹುದೆ ?

ಅಧ್ಯಕ್ಷರು.—ತಾವುಗಳು ಹಕ್ಕುಬಾಧ್ಯತೆ ಸೂಚನೆಯನ್ನು ಏನು ಕೊಟ್ಟಿದ್ದೀರಿ ನಾನು ಅದರ ಬಗ್ಗೆ ಇನ್ನೂ ಯೋಚನೆ ಮಾಡುತ್ತಿದ್ದೇನೆ, ತೀರ್ಮಾನ ಮಾಡಿಲ್ಲ ಆ ಬಗ್ಗೆ ತೀರ್ಮಾನ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ತಾವುಗಳು ಪ್ರಿವಿಲೇಜ್ ಮೋಷನ್ ಮೊದಲು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ೩-೪ ದಿವಸಗಳಿಂದ ಪತ್ರಿಕೆಗಳಲ್ಲಿಯೂ ಎಲ್ಲಾ ಕಡೆಯೂ ಕೂಡ ಚರ್ಚೆಯಾಗುತ್ತಾ ಇದೆ. ಬಹಳ ಗಂಭೀರವಾದಂಥ ವಿಚಾರ ಇದಾಗಿದೆ. ಆದ್ದರಿಂದ ತಾವು ಇದರ ಬಗ್ಗೆ ಜರೂರು ತೀರ್ಮಾನ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ತಾವುಗಳು ಒಮ್ಮೆ ಹೇಳಿದ್ದೀರಿ......

ಅಧ್ಯಕ್ಷರು.—ಅವರು ಜರೂರು ತೀರ್ಮಾನ ಮಾಡಿ ಎಂದು ಹೇಳುತ್ತಾ ಇದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿ ಅದರ ಬಗ್ಗೆ ನಾನು ತೀರ್ಮಾನವನ್ನು ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಬೇರೆ ವಿಷಯಗಳೂ ಚರ್ಚೆಗೆ ಬರುತ್ತವೆ. ಇದು ಬಹಳ ಮುಖ್ಯ ಪ್ರಶ್ನೆಯಾದ್ದರಿಂದ ಈ ಸಭೆಯ ಅಧ್ಯಕ್ಷರಾದ ತಾವು ಹಾಲಿ ಸಭೆಯಲ್ಲಿ ಸದಸ್ಯರೂ, ಮಾಜಿ ಮುಖ್ಯಮಂತ್ರಿಗಳೂ ಆದ......

ಅಧ್ಯಕ್ಷರು.—ಹಕ್ಕುಬಾಧ್ಯತೆ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಸೂಚನಾ ಪತ್ರವನ್ನು ಕೊಡತಕ್ಕದ್ದು ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದರೆ ಸೂಚನಾಪತ್ರದೊಂದಿಗೆ ಸಂಬಂಧಪಟ್ಟ ದಸ್ತಾವೇಜು ಇರತಕ್ಕದ್ದು, ಇದು ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಸ್ಪಷ್ಟವಾಗಿದೆ. ನಿಮ್ಮ ಡಾಕ್ಯುಮೆಂಟ್ಸ್ ಏನು......

ಶ್ರೀ ಕೆ. ಲಕ್ಕಪ್ಪ.—ನಾನು ತಮಗೆ ಲಿಖಿತ ಮೂಲಕ ಕೊಟ್ಟಿರುವ ಪತ್ರದಲ್ಲಿ ಇರತಕ್ಕಂಥ ವಿಚಾರಗಳು ಮೇಲ್ನೋಟಕ್ಕೆ ಪ್ರೈಮಾಫೇಸಿ ಕೇಸಾಗಿರುವುದರಿಂದ ಪ್ರಿವಿಲೇಜ್ ಮೋಷನ್ ಅಡ್ಮಿಟ್ ಕೊಡುವುದಕ್ಕೆ ಅನೇಕ ಕಾರಣಗಳನ್ನು ನಾನು ಅದರಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದು ಪ್ರೈಮಾಫೇಸಿ ಕೇಸ್ ಆಗಿದೆಯೋ ಇಲ್ಲವೋ ಎನ್ನತಕ್ಕಂಥ ತೀರ್ಮಾನ ನಾನು ಕೊಡಬೇಕಾಗುತ್ತದೆ.

(ಗೊಂದಲ)

MR. SPEAKER.—No A Member is entitled to say that from his point of view prima facie there is a breach of privilege. He is entitled to say. ಅದನ್ನು ನಾನು ಯೋಚನೆ ಮಾಡುತ್ತಿದ್ದೇನೆ. ಅದರ ಬಗ್ಗೆ ನಾನು ತೀರ್ಮಾನ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ನಾನು ಕೊಟ್ಟು ೪ ದಿವಸವಾಯಿತು ಆದರೆ ನೀವು ಬೇರೆ ವಿಷಯಕ್ಕೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು.—ಇಷ್ಟು ದಿವಸದಲ್ಲೇ ತೀರ್ಮಾನ ಕೊಡಬೇಕು ಅಂತ......

ಶ್ರೀ ಕೆ. ಲಕ್ಕಪ್ಪ.—ಈ ವಿಚಾರದ ಬಗ್ಗೆ ತಾವು ಅನುಮತಿ ಬೇಗ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. SPEAKER.—Thank you.

ಶ್ರೀ ಡಿ. ಬಿ. ಚಂದ್ರೇಗೌಡ.—ಬಹಳ ಮಹತ್ವದ ಗಂಭೀರವಾದ ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಅಭಿನಂದನೆಗಳು. ಚರ್ಚೆಗೆ ಹೋಗುವ ಮುನ್ನ ಈ ಸದನದ ಸದಸ್ಯರ ಅಭಿಪ್ರಾಯ ಬಹಳ ಮುಖ್ಯವಾಗುತ್ತದೆ. ಇಂದು ಆ ಕಡೆ ಕುಳಿತಿರುವವರಾಗಲಿ ಈ ಕಡೆ ಕುಳಿತಿರುವವರಾಗಲಿ ಎಲ್ಲರದ್ದೂ ಒಂದೇ ಏಕಾಭಿಪ್ರಾಯ ಏನೆಂದರೆ, ಈ ಚರ್ಚೆ ತುಂಬಾ ವಿಸ್ತೃತವಾಗಿ ಮತ್ತು ಎಫೆಕ್ಟೀವ್ವಾಗಿ ಆಗಬೇಕು ಅಂದರೆ ಅದಕ್ಕೆ ಕೆಲವು ದಾಖಲೆಗಳು ಬೇಕಾಗುತ್ತದೆ. ಆದ್ದರಿಂದ ಅವನ್ನು ಒದಗಿಸಿ ಎಂದು ಕೇಳಿದ್ದಾರೆ. ಆ ಪಕ್ಷದ ಹಿರಿಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರ ಅಭಿಪ್ರಾಯವೂ ಕೂಡ ಅದೇ, ಹಾಗೆಯೇ ಮಾನ್ಯ ಖರ್ಗೆಯವರ ಅಭಿಪ್ರಾಯ ಸಹ ಅದೇ. ಇಂದು ಕಾನೂನು ಸಚಿವರೂ ಈ ಮನೆಯ ಹಿರಿಯ ಸಚಿವರೂ ಆದ ಶ್ರೀ ವೀರಪ್ಪ ಮೊಯ್ಲಿಯವರ ಅಭಿಪ್ರಾಯವೂ ಅದೇನೇ. ಎಲ್ಲರ ಅಭಿಪ್ರಾಯಗಳು ಸದನದ ಚರ್ಚೆಗೆ ಒಳ್ಳೆಯ ಆಯಾಮ ಸಿಗಬೇಕೆಂದರೆ ದಾಖಲೆಗಳು ಬೇಕೆಂದು ವಾದ ಮಾಡಿದ್ದಾರೆ. ಆ ವಾದ ಇವತ್ತಿಗೂ ವಾಸ್ತವವಾದದ್ದು

ಆದ್ದರಿಂದ ದಾಖಲಾತಿಗಳನ್ನು ಒದಗಿಸಬೇಕು ಮುಖ್ಯಮಂತ್ರಿಗಳು ಕೂಡ ಅದೇ ಅಭಿಪ್ರಾಯ ಹೊಂದಿದ್ದಾರೆ ಎಂದು ತಿಳಿದಿದ್ದೇನೆ. ತಮ್ಮ ಗಮನಕ್ಕೆ ಇನ್ನೊಂದು ವಿಷಯ ತರುತ್ತೇನೆ. ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರಾದ ಶ್ರೀ ವೀರಪ್ಪ ಮೊಯ್ಲಿಯವರ ಅಭಿಪ್ರಾಯ ಈ ವಿಚಾರದಲ್ಲಿ ಏನಿದೆ ಎಂಬುದನ್ನು ತೋರಲು ನಾನು ೫ನೇ ಅಕ್ಟೋಬರ್ ೧೯೮೮ರಲ್ಲಿ ನಡೆದ ಚರ್ಚೆಯ ನಡುವಳಿಕೆಗಳನ್ನು ದೀರ್ಘವಾಗಿ ಓದಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಅವರು ಹೇಳಿರುವ ೨-೩ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಪುಟ ೩೫೯, ಸಂಪುಟ ೧೧. ಶ್ರೀ ವೀರಪ್ಪ ಮೊಯ್ಲಿಯವರು ಆ ಕಾಲಕ್ಕೆ ಏನು ಹೇಳುತ್ತಾರೆ ಎಂದರೆ —

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಚರ್ಚೆಯಾದ ಮೇಲೆ ಬೇಕಾದರೆ ಅವರು ಉತ್ತರದಲ್ಲಿ ಹೇಳಬಹುದು.

ಶ್ರೀ ಡಿ ಬಿ. ಚಂದ್ರೇಗೌಡ.—ಚರ್ಚೆಗೆ ದಾಖಲೆಗಳು ಬೇಕು. ನೀವು ಚರ್ಚೆ ಪ್ರಾರಂಭ ಮಾಡಿ ದಾಖಲೆ ಇಲ್ಲದೆ ಇದ್ದರೆ ಏನು ಪ್ರಯೋಜನ. ಪುಟ ೩೫೯...

(ಗೊಂದಲ)

ಶ್ರೀ ಜಿ. ರಾಮಕೃಷ್ಣ.—ಚರ್ಚೆಯಾದ ಮೇಲೆ ರೆಫರೆನ್ಸ್ ಮಾಡಲಿ.

(ಗೊಂದಲ)

ಶ್ರೀ ಎಂ. ರಾಮಪ್ಪ.—ನಮ್ಮ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಹೇಳಿದಂತೆ, ನಾವೇ ಇಲ್ಲಿ ದಾಖಲೆಗಳನ್ನು ಕೊಡಲಿಕ್ಕೆ ರೆಡಿ ಇರುವಾಗ ನೀವು ಹೇಳಬೇಕಾದಂಥ ನೆಸೆಸಿಟಿ ಏನೂ ಇರುವುದಿಲ್ಲ. ನಾವೇ ದಾಖಲೆಗಳನ್ನು ಒದಗಿಸುತ್ತೇವೆ.

ಶ್ರೀ ಬಿ ಹೆಚ್. ಬನ್ನಿಕೋಡ್.—ಮಾನ್ಯ ರಾಮಪ್ಪನವರು ಹೇಳಿದಾತೆ ಅವರ ನಾಯಕರೇ ಹೇಳಿಬಿಟ್ಟರೆ ಈ ಪ್ರಶ್ನೆ ಉದ್ಭವವಾಗುವುದೇ ಇಲ್ಲ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.–ನಾನು ಏನು ಹೇಳಬೇಕೋ ಬಿಡಬೇಕೋ ಎನ್ನುವುದನ್ನು ನಾನು ರಾಮಪ್ಪನವರಿಂದ ಲೈಸೆನ್ಸ್ ತೆಗೆದುಕೊಂಡು ಮಾಡಬೇಕಾಗಿಲ್ಲ. ತಾವು ಅನುಮತಿಯನ್ನು ಕೊಟ್ಟರೆ ಸಾಕು. ಅವರ ಪಾಠವನ್ನೇ ಕೇಳಿ ಹೇಳಬೇಕು ಎಂದರೆ ಮುಂದೆ ಆ ತೀರ್ಮಾನ ಮಾಡುತ್ತೇನೆ. ಈಗ ಸಧ್ಯಕ್ಕೆ ಆ ಪ್ರಶ್ನೆಯಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರು...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ಅವರ ಅಭಿಪ್ರಾಯ ಈ ಕಾಲಕ್ಕೆ ಪ್ರಸ್ತುತ ವಾದದು. ಏಕೆಂದರೆ ಅವರೇ ಕಾನೂನು ಮಂತ್ರಿಗಳಿದ್ದಾರೆ. ಬರೀ ಕಾನೂನು ಮಂತ್ರಿ ಅಲ್ಲ, ಸಂಸದೀಯ ವ್ಯವಹಾರಗಳ ಮಂತ್ರಿಗಳು. ಆದ್ದರಿಂದ ಸಂಸದೀಯ ವ್ಯವಹಾರ ಮಂತ್ರಿಗಳ ಅಭಿಪ್ರಾಯವನ್ನು ಬಿಟ್ಟು ನಾವು ಚರ್ಚೆ ಮಾಡುವುದಕ್ಕೆ ಈಗ ಸಿದ್ಧರಿಲ್ಲ. ಅವರ ಅಭಿಪ್ರಾಯಕ್ಕೆ ನಾವು ಮನ್ನಣೆಯನ್ನು ಕೊಡಬೇಕು. Page 359 Date, 5-10-1988 ಸಂಪುಟ ೧೧ರಲ್ಲಿ ಶ್ರೀಮಾನ್ ವೊಯಿಲಿಯವರು ಆಗ ಏನು ಹೇಳುತ್ತಾರೆ ಎಂದರೆ, I quote.—

If you want to be out of suspicion kindly place all the files before the House. Let things be clear. Whether it is the Congress Party or the Janata Party, on facts we must come to the conclusion. The proposal to intercept arises first from the DIG, (Intelligence). He sends the proposal to the Chief Secretary through the Home Secretary. The Chief Secretary has an authority because he is the executive head of the Government. On the file he will obtain the signature of the Chief Minister or else he writes on the file

that the Chief Minister has approved. He may even obtain the approval of the Cheif Minister through the Secretary to the Chaif Minister. He will record saying that the approval of the Caief Minister is obtained. There will be some endorsement on the approval of either of them-the Chief Minister or his Secretary or the Chief-Secretary himself. These files are available with you. In the sense, these files are available in the Government."

He was talking to the then Chief Minister. So this is one circumstance. Umpteen number of times in the same debate the Hon. Minister for law and Parliamentary Affairs has conclusively said for a meaningful debate these documents are necessary and he has sought for the production. Now, this Government of which he is one of the responsible Ministers, is in possession of the documents. I want that these documents to be placed. Let me go through a few more observations of his. ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಅಭಿಪ್ರಾಯದಲ್ಲಿ ಭಿನ್ನತೆಯನ್ನು ಮಾಡಿಲ್ಲ. ಇಂದಿನ ಮುಖ್ಯಮಂತ್ರಿಗಳು, ಅಂದಿನ ಗೌರವಾನ್ವಿತ ಲೋಕಸಭೆಯ ಸದಸ್ಯರು ಮತ್ತು ಇಂದಿನ ಮುಖ್ಯಮಂತ್ರಿಗಳು ಆದಂಥ ಶ್ರೀ ಮಾನ್ ವೀರೇಂದ್ರ ಪಾಟೀಲರು, ಈ ವಿಚಾರದಲ್ಲಿ ಏನು ಹೇಳುತ್ತಾರೆ, ಅದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದು.

ಅಧ್ಯಕ್ಷರು.—ಈಗ ನೀವು...

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ವಿವರಗಳಿಗೆ ಹೋಗುತ್ತಿಲ್ಲ. placing of the documents ಬಗ್ಗೆ ನನ್ನ ಅಭಿಪ್ರಾಯಕ್ಕೆ ಅವರ ಸಹ ಮತ ಇದೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.— ಮಾನ್ಯ ಅಧ್ಯಕ್ಷರೆ, ಅವರು ಆರ್ಗ್ಯುಮೆಂಟ್ ಚಾಲೂ ಮಾಡಿದ್ದಾರೆಯೋ ಏನಿದು ಇದು ನಿಯಮಾವಳಿಗಳನ್ನು ಒಂದು ತರಹ ಬದಲು ಮಾಡಿದ ಹಾಗೆ ಆಗುತ್ತದೆ. ಗಾಡಿ ಮುಳುಗಿ ಹೋಗುತ್ತಿದೆ

ಶ್ರೀ ಡಿ. ಬಿ. ಚಂದ್ರೇಗೌಡ.— ಏನು ಪ್ರಿಲಿಮಿನರಿ ಡಾಕ್ಯುಮೆಂಟ್ಸ್ ಎಂದು ಹೇಳುತ್ತೇನೆ. Please allow me to submit.

MR. SPEAKER.— I am certainly allowing you. I am not...

SRI D.B. CHANDREGOWDA.— Sir, On 12-8-1988 ಶ್ರೀಮಾನ್ ವೀರೇಂದ್ರ ಪಾಟೀಲರು ಪತ್ರಿಕಾ ಹೇಳಿಕೆಯ ಒಳಗೆ ಒಂದು ಮಾತು ಹೇಳಿದ್ದಾರೆ. I will quote...

ಅಧ್ಯಕ್ಷರು — ಮಾನ್ಯ ವಿರೋಧ ಪಕ್ಷದ ನಾಯಕರು...

(ಗೊಂದಲ)

ಅಧ್ಯಕ್ಷರು.. — ನಾನು ರೆಗ್ಯುಲೇಟ್ ಮಾಡುತ್ತೇನೆ...

ಶ್ರೀ ಗೋಪಾಲ ಮುಕುಂದ ಕಾನಡೆ.— ಇವರು ಹೇಳುವುದು ನೋಡಿದರೆ ಚರ್ಚೆ ಶುರು ಆಗಿರುವ ಹಾಗೆ ಕಾಣುತ್ತದೆ. ಗಾಡಿ ಮುಂದೆ ಹೋಗುತ್ತಿದೆ; ಕುದುರೆ ಹಿಂದೆ ಓಡುತ್ತಾ ಇದೆಯಲ್ಲ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.— ನಾವು ಏನು ಹೇಳಬೇಕಾದ್ದನ್ನು ಹೇಳುತ್ತೇವೆ, ಆ ನಂತರ ಅವರು ಹೇಳಬಹುದು...

(ಗೊಂದಲ)

ಅಧ್ಯಕ್ಷರು.— ಈಗ ನಾನು ಹೇಳುತ್ತಿರುವುದು...

ಶ್ರೀ ಡಿ.ಬಿ. ಚಂದ್ರೇಗೌಡ.— ನನ್ನ ಬೇಡಿಕೆ ಏನು ಇದೆ, ಅಂದರೆ ದಾಖಲೆಗಳನ್ನು ಇಡಿ ಎನ್ನುವ ಬೇಡಿಕೆಗೆ ಮಾನ್ಯ ಮುಖ್ಯ ಮಂತ್ರಿಗಳ ಒಪ್ಪಿಗೆ ಇದೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯವರ ಒಪ್ಪಿಗೆ ಇದೆ. ದಾಖಲೆಗಳು ಈಗ ಅವರ ಸ್ವಾಧೀನದಲ್ಲಿವೆ. ಒಂದು ಸಣ್ಣ ಉದಾಹರಣೆ ಹೇಳುತ್ತೇನೆ, ನಾನು ಡೀಟೆಲ್ಸ್‌ಗೆ ಹೋಗುವುದಿಲ್ಲ. ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಯವರು ...

MR. SPEAKER.— You are initiating the debate instead of Mr. Kharge. Let us hear Mr. Kharge who has given notice under rule 68.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ ...

ಅಧ್ಯಕ್ಷರು.— ಮೊದಲು ಮಾನ್ಯ ಖರ್ಗೆಯವರು ೬೮ರ ನಿಯಮದ ಅಡಿಯಲ್ಲಿ ಪ್ರಸ್ತಾವನೆ ಮಾಡಬೇಕು ಎಂದು ನನಗೆ ಸೂಚನೆಯನ್ನು ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ.— ಹಾಗಿದ್ದರೆ ಕಾನೂನು ಮಂತ್ರಿಗಳು ಹೇಳಿದ್ದಾರಲ್ಲ.

ಅಧ್ಯಕ್ಷರು.— ಕಾನೂನು ಮಂತ್ರಿಗಳ ಬಗ್ಗೆ ಆ ಮೇಲೆ ಬರುತ್ತೇನೆ. ಈಗ ಬರುವುದಿಲ್ಲ. I am not going to call the Law Minister. Mr. Kharge as member of this august House, has raised the issue. ಅವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ಅಡ್ಮಿಟ್ ಮಾಡಿಕೊಂಡಿದ್ದೇನೆ. ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕು ಎಂದು ಅವರನ್ನು ನಾನು ಕರೆದಿದ್ದೇನೆ. ಮೊದಲು ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ.— ಚರ್ಚೆಗೆ ಸಹಾಯಕ ಆಗಲಿ ಎಂದು ಅವರೆಲ್ಲರೂ ಒಪ್ಪಿದ್ದನ್ನು ನಾನು ಹೇಳುತ್ತಿದ್ದೇನೆ, ಬೇರೆ ಹೇಳುತ್ತಿಲ್ಲ.

ಅಧ್ಯಕ್ಷರು.— ಅವರನ್ನು ಚರ್ಚೆಗೆ ಕರೆದಿದ್ದೇನೆ...

ಶ್ರೀ ಡಿ.ಬಿ. ಚಂದ್ರೇಗೌಡ.— ನಾನು ಚರ್ಚೆಗೆ ಅಡ್ಡಿಪಡಿಸುತ್ತಿದ್ದೇನೆಯೋ ?

ಅಧ್ಯಕ್ಷರು.— ನೀವು ಅಡ್ಡಿಪಡಿಸಿದಿರಿ ಎಂದು ನಾನು ಹೇಳಲಿಲ್ಲ...

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ.

ಅಧ್ಯಕ್ಷರು.— ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ನಾನು ಬರಲಿಲ್ಲ. ನನ್ನ ಗಮನ ಎಲ್ಲಾ ಈಗ ಈ ಸದನದ ಮಾನ್ಯ ಸದಸ್ಯರಾದ ಖರ್ಗೆಯವರ ಕಡೆಗೆ ಇದೆ, ಅವರು ಏನು ಹೇಳುತ್ತಾರೆ ಕೇಳೋಣ. ಅವರದು ಆದ ಮೇಲೆ ನೀವು ಹೇಳಿ...

ಶ್ರೀ ಡಿ. ಬಿ. ಚಂದ್ರೇಗೌಡ.— ಬಹಳ ಸಂತೋಷ ಅವರು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಪೂರಕವಾಗಿ ದಾಖಲೆಗಳು ಬೇಕಾಗುತ್ತವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಟೇಬಲ್ ಕುಟ್ಟುವುದು ಅತಿರೇಕ ಆಗುತ್ತದೆ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ದಾಖಲೆಗಳು ಬೇಡ ಅಂದರೆ ಆಮೇಲೆ ಬೇರೆ ಗಾಡಿ ಹೊಡೆಯುವುದೂ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ಗಾಳಿ ಗುದ್ದಿ ಮೈ ನೋಯಿಸಿಕೊಳ್ಳೋಣ ಅಂದರೆ ಅದನ್ನೂ ಮಾಡೋಣ. ಸರ್ಕಾರದಲ್ಲಿ ಯಾರು ಇದ್ದಾರೆ ಅವರೇ ಹೇಳಿದ್ದಾರೆ. ಅವರು ಹೇಳಿದ ದಾಖಲೆಗಳನ್ನು ಇಡಿ ಇವತ್ತು ಯಾವ ದಾಖಲೆಗಳೂ ಕಾನ್ಫಿಡೆನ್ಸಿಯಲ್ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ,...

ಶ್ರೀ ವಾಟಾಳ್ ನಾಗರಾಜ್.— ಸಂಬಂಧಪಟ್ಟ ಕಾಗದ ಪತ್ರಗಳನ್ನು ಇಡಬೇಕಲ್ಲ.

(ಗೊಂದಲ)

ಅಧ್ಯಕ್ಷರು.— ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಆಗುವುದಕ್ಕೆ ಮುನ್ನ ಪೂರ್ವಭಾವಿಯಾಗಿ ೧೯೮೮ನೇ ಇಸವಿಯಲ್ಲಿ ಈ ಮಾನ್ಯ ಸಭೆಯಲ್ಲಿ ನಡೆದಿರತಕ್ಕ ನಡವಳಿಕೆಗಳ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ಚರ್ಚೆಯಲ್ಲಿ ಪ್ರಧಾನವಾಗಿ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಏನು ಅಭಿಪ್ರಾಯಗಳನ್ನು ರೂಪಿಸುತ್ತಾರೋ. ಅದರ ಮೇಲೆ ಚರ್ಚೆಗೆ ಯಾವ ದಾಖಲೆಗಳು ಬೇಕು, ಯಾವ ಮಾಹಿತಿಗಳು ಬೇಕು, ಯಾವ ಮಾಹಿತಿಗಳು ಯಾರ ಹತ್ತಿರ ಇದೆ. ನಿಮ್ಮ ಹತ್ತಿರ ಎಷ್ಟು ಇದೆ ಅವರ ಹತ್ತಿರ ಎಷ್ಟು ಇದೆ ಎನ್ನತಕ್ಕಂಥ ವಿಚಾರ ನನಗೆ ಗೊತ್ತಾಗಬೇಕು. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸೂಚನೆ ಮಾಡುವುದು ಏನೆಂದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳುತ್ತಾರೋ ಅದನ್ನು ಕೇಳೋಣ. ಆ ನಂತರ ಯಾವ ಮಾಹಿತಿ ಬೇಕು, ಯಾವ ರೆಕಾರ್ಡ್ಸ್ ಬೇಕು, ಅದು ಯಾರ ಹತ್ತಿರ ಇದೆ ಎನ್ನತಕ್ಕದರ ಬಗ್ಗೆ ಆಮೇಲೆ ನಮ್ಮ ಮನಸ್ಸನ್ನು ಅಪ್ಲೈ ಮಾಡೋಣ...

(ಗೊಂದಲ)

ಅಧ್ಯಕ್ಷರು.—ನಾನು ಸಿಂಧ್ಯರವರನ್ನು ಕರೆದಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಯಾವ ಒಂದು ಚೌಕಟ್ಟಿನಲ್ಲಿ......

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಈಗ ಈ ವಿಷಯದ ಬಗ್ಗೆ ತಾವು ಚರ್ಚೆಗೆ ಅವಕಾಶವನ್ನು ಒದಗಿಸಿಕೊಟ್ಟಿದ್ದೀರಿ, ಮೊದಲನೆಯದಾಗಿ, ನಾವೆಲ್ಲರೂ ಅದನ್ನು ಸ್ವಾಗತ ಮಾಡಿದ್ದೇವೆ. ಎರಡನೆಯದಾಗಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೂಲ್ ೬೮ ಪ್ರಕಾರ ಏನು ಹೇಳಬೇಕು ಎಂದು ಇದ್ದಾರೆ, ಅದನ್ನು ಹೇಳಲಿ ನಾವು ಕೇಳೋಣ. ಏಕೆಂದರೆ ಅವರು ಸಹಿ ಹಾಕಿರತಕ್ಕವರು, ಮಾತನಾಡಲಿಕ್ಕೆ ಬಯಸತಕ್ಕವರು, ಎಲ್ಲರ ಮಾತೂ ಬೇಡ. ಆದರೆ ನಾವು ಹೇಳತಕ್ಕಂಥಾದ್ದು ಏನೆಂದರೆ, ಮೊನ್ನೆ ದಿನ ಈ ವಿಷಯ ಪ್ರಸ್ತಾಪ ಆಗತಕ್ಕಂಥ ಸಂದರ್ಭದಲ್ಲಿ ಈ ಟೆಲಿಫೋನ್ ಪ್ರಕರಣದ ಬಗ್ಗೆ ಚರ್ಚೆಗೆ ಅವಕಾಶವನ್ನು ಒದಗಿಸಿಕೊಡಬೇಕು ಎಂದು ಈ ಸದನದ ಮಾನ್ಯ ಸದಸ್ಯರು ಒತ್ತಾಯ ಮಾಡಿದಂಥ ಸಂದರ್ಭದಲ್ಲಿ ನಾವಾದರೂ ಏನು ಹೇಳಿದ್ದೇವು ಅಂದರೆ ಸ್ವಾಮಿ, ಈ ಚರ್ಚೆಗೆ ಅವಕಾಶ ಮಾಡಲಿಕ್ಕೆ ಮುಂಚೆ ಒಂದು ಪ್ಯಾರಾಮೀಟರನ್ನು ತಾವು ಫಿಕ್ಸ್ ಮಾಡತಕ್ಕಂಥದ್ದನ್ನು ಹೇಳಬೇಕು ಎಂದು. ಏಕೆಂದರೆ, ಈ ಸದನದ ಪ್ರತಿಯೊಬ್ಬ ಸದಸ್ಯರ ಗೌರವವನ್ನು, ಈ ಸದನದ ಗೌರವವನ್ನು ಎತ್ತಿ ಹಿಡಿಯತಕ್ಕಂಥಾದ್ದು ತಮ್ಮ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ತಾವು ಕೊಡತಕ್ಕಂಥ ತೀರ್ಮಾನವನ್ನು ನಾವು ಒಪ್ಪುತ್ತೇವೆ. ಮಾನ್ಯ ಚಂದ್ರೇಗೌಡರಾದರೂ ಹೇಳಿರತಕ್ಕದ್ದು ಏನೆಂದರೆ, ಹಿಂದೆ ಇದೇ ಸದನದಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಈ ಕಡೆ ಕುಳಿತುಕೊಂಡು ಏನು ಮಾತನಾಡಿದ್ದಾರೆ ಅದು ನಮಗೆ ಚರ್ಚೆಗೆ ಅನುಕೂಲವಾಗುತ್ತದೆ. ಅವರ ಬಾಯಿಯಿಂದ ಹೊರಟಿರತಕ್ಕ ಶಬ್ದಗಳು ಏನಿವೆ ಅದು ನಮ್ಮ ಚರ್ಚೆಗೆ ಉಪಯೋಗವಾಗುತ್ತದೆ ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ತೋರಿಸಿದ್ದಾರೆ. ನಾವಾದರೂ ಕೇಳುತ್ತಾ ಇರತಕ್ಕಂಥಾದ್ದು ಏನೆಂದರೆ ಈ ಚರ್ಚೆ ಏನು ಆಗಬೇಕು ? ಈಗ ಚರ್ಚೆ ಮಾಡಬೇಕು ಎಂದು ಹೇಳಿದಾಗ ಮಾನ್ಯ ಸದಸ್ಯರಾಗಿರಲಿ, ಮಾನ್ಯ ಖರ್ಗೆಯವರಾಗಿರಲಿ, ಮಾನ್ಯ ಲಕ್ಕಪ್ಪನವರಾಗಿರಲಿ, ಮತ್ತೊಬ್ಬರಾಗಿರಲಿ ಮಾತನಾಡಬೇಕಾದರೆ ವಿಷಯ ಏನು ? ಆ ಕಮಿಟಿ ಕೊಟ್ಟಿರತಕ್ಕಂಥ ರಿಪೋರ್ಟ್ ಬಗ್ಗೆ ಚರ್ಚೆ ಮಾಡಬೇಕೇ ಅಥವಾ ......

(ಗೊಂದಲ)

MR. SPEAKER —Order, order. I call the House to Order. ದಯಮಾಡಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಪಿ.ಜಿ ಆರ್. ಸಿಂಧ್ಯ.—ನಾನು ಇನ್ನೂ ಮುಗಿಸಿಲ್ಲ, ಮುಗಿಸುತ್ತೇನೆ.

ಅಧ್ಯಕ್ಷರು.—ಅವರು ಮುಗಿಸುತ್ತಾ ಇದ್ದಾರೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಾನು ಅವರನ್ನು ಕರೆದಿದ್ದೇನೆ, ಅವರನ್ನು ಗುರುತಿಸಿದ್ದೇನೆ. ಅವರು ನನಗೆ ನಿವೇದನೆ ಮಾಡುತ್ತಾ ಇದ್ದಾರೆ. ಅದನ್ನು ತಾವು ಪ್ರಶ್ನೆ ಮಾಡುತ್ತಿದ್ದೀರ ?

(ಗೊಂದಲ)

ಅಧ್ಯಕ್ಷರು.—ಕುಳಿತುಕೊಳ್ಳಿ. ಅವರಿಗೆ ಹೇಳಿದ್ದನ್ನೇ ನಿಮಗೂ ಹೇಳಬೇಕಾಗುತ್ತದೆ, ನಾನು ನಿಂತಿದ್ದೇನೆ, ನೀವು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾ ಇದ್ದಾರೆ ಅದನ್ನು ನಾನು ಕೇಳುತ್ತಾ ಇದ್ದೇನೆ, ತಾವೂ ಕೇಳಬೇಕು.

SRI K. LAKKAPPA.—They are invading on your rights of decision. How can they question the Speaker's decision ?

MR. SPEAKER.—They are not questioning the Speaker's decision.

SRI. K. LAKKAPPA.—They are questioning your decision.

MR. SPEAKER.—They are not questioning my decision.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೆ... ..

ಅಧ್ಯಕ್ಷರು.—ಮಾನ್ಯ ವೆಂಕಟಪ್ಪನವರೆ, It is a fact. ಅವತ್ತು ನಾನು ರೂಲಿಂಗ್ ಕೊಟ್ಟ ತತ್‌ಕ್ಷಣದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು, ಈ ಚರ್ಚೆ ನಡೆಯಂತಕ್ಕಂಥ ಕಾಲದಲ್ಲಿ ಒಂದು ಪ್ಯಾರಾ ಮೊಟರ್ಸ್ ನೀವು ಫಿಕ್ಸ್ ಮಾಡಬೇಕು ಎಂದು ಆಗಲೆ ನನ್ನ ಗಮನವನ್ನು ಸೆಳೆದರು. ಆದುದರಿಂದ ಇದು ಈಗ ಉದ್ಭವಿಸಿರತಕ್ಕಂಥ ಪ್ರಶ್ನೆ ಅಲ್ಲ. ಈ ಪ್ರಶ್ನೆ ಬಗ್ಗೆ ಆ ದಿವಸವೇ ಮಾನ್ಯ ವಿರೋಧಪಕ್ಷದ ನಾಯಕರು ನನ್ನ ಗಮನವನ್ನು, ಸದನದ ಗಮನವನ್ನು ಸೆಳೆದಿದ್ದಾರೆ. ಅದರ ಬಗ್ಗೆ ಅವರು ವಿಶ್ಲೇಷಣೆ ಮಾಡುತ್ತಾ ಇದ್ದಾರೆ, ಕೇಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೆ, ತಾವು ನನ್ನ ರಕ್ಷಣೆಗೆ ಮತ್ತು ಈ ಕಡೆ ಕುಳಿತುಕೊಂಡಿರತಕ್ಕಂಥ ಸದಸ್ಯರ ರಕ್ಷಣೆಗೆ ಬಂದಿದ್ದೀರಿ, ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತಿನ ಅಜೆಂಡಾದಲ್ಲಿ ಏನಿದೆ, ಅಂದರೆ "ದೂರವಾಣಿ ಕದ್ದಾಲಿಕೆಗಳ ಬಗ್ಗೆ ಚರ್ಚೆ ನಡೆಸುವುದು" ಎಂದು ಇದೆ. ದೂರವಾಣಿ ಕದ್ದಾಲಿಕೆಗಳ ಬಗ್ಗೆ ಚರ್ಚೆ ನಡೆಸುವುದು ಎಂದರೆ, ನಾನು ಅಂದುಕೊಂಡಿದ್ದೇನೆ, ನಾನು ದೇಶದ ವಿಷಯಗಳಿಗೆ ಹೋಗುವುದಿಲ್ಲ, ಹೋಗುತ್ತಾ ಇಲ್ಲ, ನಮ್ಮ ರಾಜ್ಯದ ವ್ಯಾಪ್ತಿಯಲ್ಲಿ ಯಾವತ್ತಿನಿಂದ ಅಂದರೆ, ನನಗೆ ಗೊತ್ತಿರುವ ಹಾಗೆ......

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ನಾನು ಮುಗಿಸಿಬಿಡುತ್ತಾ ಇದ್ದೇನೆ.

(ಗೊಂದಲ)

೧೨–೩೦ ಪಿ.ಎಂ.

ಅಧ್ಯಕ್ಷರು.—ನಾನು ಮಾನ್ಯ ಸಿಂಧ್ಯರವರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬಹಳ ಕಷ್ಟ ಪಡುತ್ತಿದ್ದೇನೆ ಏಕೆಂದರೆ, ಇನ್ನೂ ಚರ್ಚೆ ಪ್ರಾರಂಭವಾಗಿಲ್ಲ. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ೧೯೪೭ನೇ ಇಸವಿಯಿಂದ ಟೆಲಿಫೋನ್ ಕದ್ದಾಲಿಕೆ ವಿಚಾರದಲ್ಲಿ ಮಾತನಾಡುತ್ತಾರೋ ೧೯೫೮ನೇ ಇಸವಿಯಿಂದ ಪ್ರಾರಂಭ ಮಾಡುತ್ತಾರೋ ನನಗೆ ಗೊತ್ತಿಲ್ಲ. ಆದ್ದರಿಂದ ಮೊದಲು ಮಲ್ಲಿಕಾರ್ಜುನ ಖರ್ಗೆಯವರು ಏನು ಕೇಸನ್ನು ಸಭೆಗೆ ಪ್ರೆಸೆಂಟ್ ಮಾಡುತ್ತಾರೆ ಅದಕ್ಕೆ ಅವಕಾಶ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಅವಕಾಶ ಕೊಡುವ ಪ್ರಶ್ನೆ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಹೊಡೆಯಿರಿ, ಹೊಡೆಯಿರಿ. ಇನ್ನೂ ಜೋರಾಗಿ ಹೊಡೆಯಿರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ತಪ್ಪು ಹೇಳಲಿಲ್ಲ. ನನ್ನನ್ನು ಅರ್ಥ ಮಾಡಿಕೊಳ್ಳುವುದಕ್ಕೆ ತಮಗೆ ಏಕೆ ಕಷ್ಟವಾಗುತ್ತದೆ ಅಂದರೆ, ದೂರವಾಣಿ ಕದ್ದಾಲಿಕೆ ಬಗ್ಗೆ ತಮಗೆ ನೋಟೀಸ್ ಬಂದಿದೆಯಲ್ಲ; ಅದರಲ್ಲಿ ಸ್ಪೆಸಿಫಿಕ್ಕಾಗಿ ಅವರು ಏನು ಚರ್ಚೆ ಮಾಡಬೇಕೆಂದು ಹೇಳಿಲ್ಲ. ನಾವು ಈ ಚರ್ಚೆಗೆ ವಿರೋಧ ಇಲ್ಲ.

(ಗೊಂದಲ)

(ಹತ್ತಾರು ಜನ ಸದಸ್ಯರು ಒಟ್ಟಿಗೆ ನಿಂತು ಮಾತನಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ.— ನನಗೆ ಅವಕಾಶ ಇಲ್ಲ. ಕೊನೆಯ ಪಕ್ಷ ತಮ್ಮ ಕಿವಿಗೆ ಬೀಳುವುದಕ್ಕಾದರೂ ಹೇಳಬೇಕಾಗುತ್ತದೆ, ತಾವು ಅವತ್ತು ರೂಲಿಂಗ್ ಕೊಡತಕ್ಕ ಸಂದರ್ಭದಲ್ಲಿ ಪ್ಯಾರಾಮೀಟರ್ ಫಿಕ್ಸ್ ಮಾಡುತ್ತೇವೆಂದು ಹೇಳಿದ್ದೀರಿ. ಆ ಪ್ಯಾರಾಮೀಟರನ್ನು ತಾವು ಮುಂಚೆ ಫಿಕ್ಸ್ ಮಾಡಬೇಕು. ತಾವು ಫಿಕ್ಸ್ ಮಾಡಿದ ಮೇಲೆ ಅದರ ಇತಿಮಿತಿಯೊಳಗೆ ನಾವು ಚರ್ಚೆ ಮಾಡೋಣ ಎನ್ನತಕ್ಕ ವಿಷಯವನ್ನು ಹೇಳಿ ತಮ್ಮ ಮನವೊಲಿಸುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಉಪನಾಯಕರು ಮಾತನಾಡುವುದನ್ನು ತಡೆಹಿಡಿಯಬೇಕೆಂಬ ಉದ್ದೇಶ ನಮಗಿಲ್ಲ. ಸನ್ಮಾನ್ಯ ಸದಸ್ಯರು ನಿಯಮ 68 ರಲ್ಲಿ ಈ ವಿಚಾರ ಎತ್ತಿದ್ದಾರೆ, ಅದನ್ನು ತಾವು ಬಿಸಿನೆಸ್‌ನಲ್ಲಿ ಹಾಕಿದ್ದೀರಿ. ಈಗ ಇದರ ಚರ್ಚೆ ಬಿಸಿನೆಸ್ ಪ್ರಕಾರ ನಡೆಯಬೇಕಾಗಿದೆ. ಇದರ ವ್ಯಾಪ್ತಿ ಬಗ್ಗೆ ಚರ್ಚೆ ನಡೆಯುತ್ತಿದೆ. ಸನ್ಮಾನ್ಯ ಸದಸ್ಯರು ಯಾವ ಒಂದು ನೋಟೀಸನ್ನು ಕೊಟ್ಟಿದ್ದಾರೆ. ಬಹುಶಃ ಅದನ್ನು ಪರಾಂಭರಿಸಿದರೆ ಈ ಚರ್ಚೆ ಉದ್ಭವವಾಗುತ್ತಿರಲಿಲ್ಲ. ತಾವು ಅನುಮತಿ ಕೊಟ್ಟರೆ, ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

> "The notice of raising discussion under Rule 68 regarding the telephone tapping in Karnataka by the then Chief Minister Sri Ramakrishna Hegde"

I is not from 1947 or 1932. It is a matter of urgent public importance and current subject.

ಶ್ರೀ ಡಿ.ಬಿ. ಚಂದ್ರೇಗೌಡ.— ಈ ನೋಟೀಸ್ ಈಗ ಕೊಟ್ಟಿದ್ದಾರೆ? I want to put the record straight.

(ಗೊಂದಲ)

SRI M. VEERAPPA MOILY.— ಈಗ ಕೊಟ್ಟಿದ್ದಲ್ಲ. Sir, the notice reads like this: The matter is urgent, public importance and current subject.

> "Sri Ramakrishna Hegde has denied that he is unware of tapping of telephone Opposition and Rulling Party members of KLA and further, he has said if any one can show with evidence that it was done with my approval or my permission, he will quit public life." Hence this discussion is necessary on this matter.

The notice is signed by Mr. Kharge, Mr. Perikal Mallappa and three other members and if I am correct, it was received by your kind office on 15th June it is not a latest day at 10 00 A.M. I am just bringing it to your Kindself and to this House and take appropriate action.

SRI D.B. CHANDRE GOWDA.— There are two things. If Mr Ramakrishna Hegde, the hon. member of this House, has denied that he is unware there is no case. According to the notice itself there is no case. The second portion, is that the last paragraph of the same notice says, if there is an evidence, according to their own drafting, what is that evidence? My submission here is......

(Interruptions)

SRI D.B. CHANDRE GOWDA.— If you could place the evidence, place it before the House.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ಇದು ನನ್ನ ಭಾಷೆಯಲ್ಲ. ಮೊಯಿಲಿಯವರು ಏನು ಹೇಳುತ್ತಾರೆ ಅಂದರೆ,

''ಅವೊತ್ತು ರಾಜಕೀಯ ಪಕ್ಷಗಳ ನಾಯಕರುಗಳ ಹೆಸರನ್ನು ಪಟ್ಟಿಮಾಡಿ, ಅವರ ಟೆಲಿಫೋನುಗಳನ್ನು ಟ್ಯಾಪ್‌ಮಾಡಿ ಎಂದು ಹೇಳಿದ್ದು ಶ್ರೀಮಾನ್ ವೀರೇಂದ್ರ ಪಾಟೀಲರು''

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಇದು ೫ನೇ ಅಕ್ಟೋಬರ್ ೧೯೮೮ರ ನಡವಳಿಕೆಯಲ್ಲಿದೆ. ಪುಟ ೩೮.)

''ಅವೊತ್ತು ರಾಜಕೀಯ ಪಕ್ಷಗಳ ನಾಯಕರುಗಳ ಹೆಸರನ್ನು ಪಟ್ಟಿಮಾಡಿ, ಅವರ ಟೆಲಿಫೋನುಗಳನ್ನು ಟ್ಯಾಪ್ ಮಾಡಿ ಎಂದು ಹೇಳಿದ್ದು ಶ್ರೀಮಾನ್ ವೀರೇಂದ್ರ ಪಾಟೀಲರು ಎಂದು ಹೇಳಿದ್ದರು. Now he is Chief Minister.

(ಗೊಂದಲ)

ಅಧ್ಯಕ್ಷರು :—ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

† ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ, ಇವೊತ್ತು ನಾವು ಬಹಳ ಮುಖ್ಯವಾದಂಥ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ. ಮನುಷ್ಯ ಉಸಿರಾಡುವುದಕ್ಕೆ ಬೇಕಾಗಿರತಕ್ಕದ್ದು ಎಷ್ಟು ಮುಖ್ಯವೋ ಅದೇ ರೀತಿ ಮನುಷ್ಯ ಸ್ವತಂತ್ರವಾಗಿ ಇರಬೇಕಾದರೆ, ವಾಕ್ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಓಡಾಡತಕ್ಕ ಸ್ವಾತಂತ್ರ್ಯಗಳು ಮುಖ್ಯ ಈ ರೀತಿ ಮೂಲಭೂತ ಸ್ವಾತಂತ್ರ್ಯ ಏನಿದೆ. ಅದರ ವಿಚಾರ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಹಿಂದಿನ ಮುಖ್ಯಮಂತ್ರಿಗಳಾಗಲಿ ಅಥವಾ ಈಗಿರತಕ್ಕ ಮುಖ್ಯಮಂತ್ರಿಗಳಾಗಲಿ ಅಥವಾ ಇನ್ನು ಯಾರೇ ಆಗಿರಲಿ ಅದು ಇವೊತ್ತಿನ ದಿವಸ ಅಪ್ರಕೃತ ಈ ವಿಚಾರದ ಬಗ್ಗೆ ಚರ್ಚೆ ಮಾಡುವಾಗ ಇವರು ಮಾಡಿದ್ದಾರೆ, ಅವರು ಮಾಡಿದ್ದಾರೆ ಎಂದು ಹೇಳುವುದಕ್ಕೆ ಬದಲಾಗಿ ವಿಷಯ ಎಂಥಾದ್ದು ಅಂದರೆ ಇವೊತ್ತು ಮನುಷ್ಯನ ಮೂಲಭೂತ ಹಕ್ಕಿನ ಹರಣ ಆಗಿರತಕ್ಕಂಥ ವಿಷಯ ಅದರಲ್ಲಿ ಬರತಕ್ಕಂಥ ವ್ಯಕ್ತಿಗಳು ನಿಮಿತ್ತ ಮಾತ್ರವಾಗುತ್ತಾರೆಯೇ ವಿನಹ ನಾವು ಅದನ್ನು ದೊಡ್ಡದು ಮಾಡತಕ್ಕ ಪರಿಸ್ಥಿತಿಗೆ ಇವೊತ್ತಿನ ದಿವಸ ಹೋಗುತ್ತಿದ್ದೇವೆ. ಆದ್ದರಿಂದ, ಆ ಪ್ರಯತ್ನವನ್ನು ಇಲ್ಲಿ ಮಾಡತಕ್ಕಂಥಾದ್ದು ಸರಿಯಾದುದು ಅಲ್ಲ. ಅದು ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಆಗಿರಬಹುದು ಅಥವಾ ಈಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ವೀರೇಂದ್ರ ಪಾಟೀಲರು ಆಗಿರಬಹುದು ಅಥವಾ ಯಾರೇ ಆಗಿರಲಿ ಆದರೆ ವ್ಯಕ್ತಿಗಳು ಇಲ್ಲಿ ಅಪ್ರಕೃತ. ಆದರೆ, ಅಭಿಪ್ರಾಯ ಸ್ವಾತಂತ್ರ್ಯಕ್ಕೋಸ್ಕರ ಹಿಂದೆ ಎಂತೆಂಥ ಹೋರಾಟಗಳು ನಡೆದಿವೆ, ಎಂತೆಂಥ ಮಹನೀಯರುಗಳು ಪ್ರಾಣತ್ಯಾಗ ಮಾಡಿದ್ದಾರೆ. ಇದು ಚರಿತ್ರೆಯಲ್ಲಿ ಇದೆ. ಅದನ್ನೆಲ್ಲ ನಾನು ಇವೊತ್ತಿನ ದಿವಸ ಹೇಳುವುದಕ್ಕೆ ಹೋಗುವುದಿಲ್ಲ. ಅಭಿಪ್ರಾಯ ಸ್ವಾತಂತ್ರ್ಯಕ್ಕೋಸ್ಕರ ಸಾಕಷ್ಟು ಹೋರಾಟಗಳು ನಡೆದಿವೆ ಮತ್ತು ಸಾಕಷ್ಟು ಜನ ಪ್ರಾಣವನ್ನು ತೆತ್ತಿದ್ದಾರೆ. ಇದಕ್ಕೆ ಮಹಾತ್ಮರೂ ಕೂಡ ಏನೇನು ಹೇಳಿದ್ದಾರೆ ಎಂಬುದು ಚರಿತ್ರೆಯಲ್ಲಿ ಇದೆ. ಇಂತಹ ವಿಚಾರವನ್ನು ಚರ್ಚೆ ಮಾಡತಕ್ಕಂತಹ ಪರಿಸ್ಥಿತಿಯಲ್ಲಿ ನಾನೇ ಆಗಲೀ ಅಥವಾ ಬೇರೆ ಯಾರೇ ಆಗಲೀ ವ್ಯಕ್ತಿಗಳನ್ನು ಕುರಿತು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದು ಮತ್ತು ಯಾರನ್ನೋ ನಾವು ಇಲ್ಲಿ ಶೀಲ್ ಮಾಡತಕ್ಕಂಥಾದ್ದು ಅಪ್ರಕೃತ. ಇದು ಬಹಳ ಗಹನವಾಗಿರತಕ್ಕಂತಹ ವಿಚಾರವಾಗಿರುವುದರಿಂದ ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಏನು ಇವೆ ಅದು ಇಲ್ಲಿ ಬರಬೇಕಾಗಿರುವುದು ಅವಶ್ಯಕತೆ ಇದೆ. ತಾವು ಇವತ್ತಿನ ದಿವಸ ಆ ಸ್ಥಾನದಲ್ಲಿ ಕುಳಿತಿದ್ದೀರಿ. ಆ ಸ್ಥಾನದಲ್ಲಿ ಕುಳಿತು ತಾವು ಏನಾದರೂ ಹೇಳಿದಾಗ ಅದು ಕಡತಕ್ಕೆ ಹೋಗುತ್ತದೆ ಮುಂದೆ ನೂರು ವರ್ಷಕ್ಕೊ ೨೦೦ ವರ್ಷಕ್ಕೊ ಮುಂದಿನವರು ಹಿಂದೆ ಈ ಸದನದ ಸನ್ಮಾನ್ಯ ಅಧ್ಯಕ್ಷರು ಆಗಿದ್ದಂತಹವರು ಈ ರೀತಿ ಹೇಳಿದ್ದಾರೆಂದು ಇದನ್ನು ಉದ್ಧರಿಸಬೇಕಾಗುತ್ತದೆ. ಇದು ಕಡತಕ್ಕೆ ಹೋಗುತ್ತದೆ. ಆದ್ದರಿಂದ ಇದರ ಬಗೆ

ತೀರ್ಮಾನಕ್ಕೆ ಬರುವಾಗ ಇದರ ಹಿನ್ನೆಲೆ ಏನು ಇದೆ, ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಏನೇನು ಇವೆ, ಯಾರು ಆಜ್ಞೆ ಮಾಡಿದ್ದಾರೆ, ಯಾವ ರೀತಿ ಆಜ್ಞೆ ಮಾಡಿದ್ದಾರೆನ್ನುವುದನ್ನು ಈ ಸದನದಲ್ಲಿ ಇಡತಕ್ಕಂಥಾದ್ದು ನಾವು ತಿಳಿದುಕೊಳ್ಳುವುದಕ್ಕಿಂತಲೂ ಈ ದೇಶದ ಜನತೆಯು ತಿಳಿದುಕೊಳ್ಳಬೇಕಾಗಿರುವುದು ಅತ್ಯಂತ ಅವಶ್ಯಕತೆ ಇದೆ. ಆ ದೃಷ್ಟಿಯಿಂದ ಇದಕ್ಕೆ ಸಂಬಂಧಪಟ್ಟಂತೆ ಕಾಗದ ಪತ್ರಗಳು ಏನೇನು ಇವೆ ಅವನ್ನು ಇಡಬೇಕು. ಆದಾದ ಮೇಲೆ ಚರ್ಚೆಯಾದರೆ ಅದಕ್ಕೊಂದು ಅರ್ಥ ಬರುತ್ತದೆ. ತಪ್ಪಿತಸ್ಥರು ಯಾರು ಎನ್ನುವುದು ಗೊತ್ತಾಗುತ್ತದೆ. ಈಗ ನಮಗೆ ಸಿಕ್ಕಿರತಕ್ಕಂಥಾದ್ದು ಸೀಮಿತವಾದಂತಹ ಮಾಹಿತಿ. ಇಂತಹ ಸಂದರ್ಭದಲ್ಲಿ ಇಂತಹವರು ಆಜ್ಞೆ ಮಾಡಿದರು ಎನ್ನತಕ್ಕಂತಹ ಸೀಮಿತವಾದ ಮಾಹಿತಿ ನಮಗೆ ಸಿಕ್ಕಿದೆ. ಈ ಸೀಮಿತವಾಗಿರತಕ್ಕಂಥ ಮಾಹಿತಿಯನ್ನು ಆಧಾರವನ್ನಾಗಿಟ್ಟುಕೊಂಡು ನಾವು ಇಲ್ಲಿ ಚರ್ಚೆ ಮಾಡಿದರೆ ಅದು ಸೀಮಿತವಾದಂತಹ ಚರ್ಚೆಯಾಗುತ್ತದೆ. ಈ ಸೀಮಿತವಾದಂತಹ ಚರ್ಚೆಯಾದರೆ ಪ್ರಜಾಪ್ರಭುತ್ವವನ್ನು ಮುಂದುವರಿಸುವುದಕ್ಕೆ ಮತ್ತು ಅದರ ಬೆಳವಣಿಗೆಗೆ ಸಹಾಯವಾಗುವುದಿಲ್ಲ. ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಹಾಯವಾಗಬೇಕಾಗಿದ್ದರೆ ಇದಕ್ಕೆ ಸಂಬಂಧಪಟ್ಟಂತಹ ಕಡತಗಳು ಏನು ಇವೆ, ಯಾರು ಆಜ್ಞೆಯನ್ನು ಮಾಡಿದ್ದಾರೆ, ಯಾವ ಸಂದರ್ಭದಲ್ಲಿ ಆಜ್ಞೆ ಮಾಡಿದ್ದಾರೆನ್ನುವುದು ಅತ್ಯಂತ ಗಹನವಾಗಿರತಕ್ಕಂತಹ ವಿಚಾರ. ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯತಕ್ಕಂತಹ ಸ್ಥಾನದಲ್ಲಿ ತಾವು ಕುಳಿತಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ನಿರ್ದೇಶನ ಕೊಡಬೇಕು. ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಏನು ಇವೆ ಅವನ್ನು ಈ ಸದನದ ಮುಂದಿಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ದಯಮಾಡಿ ಈ ಸದನದ ನಡವಳಿಕೆಯ ಪುಸ್ತಕವನ್ನು ತಾವು ನೋಡಬೇಕು. ೫ನೇ ಅಧಿವೇಶನ ವಾಲ್ಯೂಮ್ ೧೧, ಪುಟ ೩೮೧ ಇದನ್ನು ತಾವು ಪರಾಂಬರಿಸಬೇಕು. ಇಲ್ಲಿ ಪ್ರಿಂಟ್ ಆಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಿಂಟ್ ಆದುದನ್ನು ಓದಿ ಹೇಳಿದ್ದಾರೆ. ಆದರೆ ತಾವು ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ದಯಮಾಡಿ ತರಿಸಬೇಕು. ನಾನು ಅಂತಹ ಸ್ಟೇಟ್‌ಮೆಂಟ್ ಮಾಡಿಲ್ಲ.....

(ಗೊಂದಲ)

MR. SPEAKER.—Let us near him.

(INTERRUPTION)

SRI M. VEERAPPA MOILY.—It is very interesting that is now major mistakes can crept into this kind of report. This is a very serious matter because certain words are put in my mouth which I have not spoken. ಏಕೆಂದರೆ, ಮಾನ್ಯ ಬೊಮ್ಮಾಯಿಯವರ ಹೇಳಿಕೆ ಪುಟ ೩೮೦-೮೧ನಲ್ಲಿ ಇದೆ. Mr. Bommai says.

> " I would like to draw the attention of honble members to the fact that powers under section 27 was delegated to the DIG Intelligence by the State Goverament through a notification almost 20 years ago i.e., during 1962...

ಶ್ರೀ ವೀರೇಂದ್ರ ಪಾಟೀಲ್‌ರವರು ಹೇಳಿದರು, ನಮ್ಮ ಕಾಲದಲ್ಲಿ ಇದು ಇರಲಿಲ್ಲವೆಂದು ಅದಕ್ಕೆ ರೆಫರೆನ್ಸ್ ಅನ್ನು ಇಲ್ಲಿ ಕೊಟ್ಟಿದ್ದು. ೧೯೬೨ ರಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿರಲಿಲ್ಲ. ಇದು ಮೊದಲನೆಯದು. ಎರಡನೆಯದು. ನನ್ನ ಸ್ಟೇಟ್‌ಮೆಂಟ್ ಎಂದು ಏನು ಇದೆ in fact, it is a continuous statement of Mr. Bommai...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಹೆಸರನ್ನು ಹಾಕಿದ್ದಾರೆ. "ಆವತ್ತು ರಾಜಕೀಯ ಪಕ್ಷಗಳ ನಾಯಕರುಗಳ ಹೆಸರುಗಳನ್ನು ಪಟ್ಟಿಯನ್ನು ಮಾಡಿ ಅವರ ಟೆಲಿಫೋನ್‌ಗಳನ್ನು ಟ್ಯಾಪ್ ಮಾಡಿ ಎಂದು ಹೇಳಿದ್ದು ಶ್ರೀಮಾನ್ ವೀರೇಂದ್ರಪಾಟೀಲ್ ಎಂದು ನನ್ನ ಬಾಯಿಯಲ್ಲಿ ಹಾಕಿದ್ದಾರೆ. How can I give a statement which is a statement of Mr. Bommai?

ನಂತರ ಎಸ್. ಆರ್. ಬೊಮ್ಮಾಯಿ "ವೀರೇಂದ್ರ ಪಾಟೀಲರು ತಮ್ಮ ಕಾಲದಲ್ಲಿ ಇದು ಇರಲಿಲ್ಲವೆಂದು ಹೇಳಿದರು, ಅದಕ್ಕಾಗಿ ಇದನ್ನು ಉದಾಹರಣೆಯಾಗಿ ಕೊಟ್ಟಿದ್ದು" ಎಂದು ಇದೆ. It is a statement of Mr. Bommai not mine.

(ಗೊಂದಲ)

SRI M. VEERAPPA MOILY.—I have questioned them. When Mr. Bommai has given the statement that Sri Veerendra patil has given names of political leaders then I questioned him. If there is any order, you place it before the house, that is what I said. If I had said positively, why should I put that question ?

(Interruption)

SRI M. VEERAPPA MOILY.—Printers devil cannot come to the rescue of them. The leader of the opposition cannot take shelter under that

ಶ್ರೀ ಡಿ. ಬಿ. ಚಂದ್ರೇಗೌಡ.—ಇಲ್ಲಿ ಏನಾಗಿದೆ ಎಂದರೆ, in response to the argument of Sri Bommai this answer was given. What was the predictment of Mr. Bommai ? ಮಾನ್ಯ ಬೊಮ್ಮಾಯಿಯವರಿಗೆ ಇದ್ದಂಥ ಪ್ರೆಡಿಕ್ಟಮೆಂಟ್ ಏನೆಂದರೆ, ಮಾನ್ಯ ವೀರೇಂದ್ರ ಪಾಟೀಲರು ಹೇಳಿದರು ಎನ್ನುತಕ್ಕ ಕಾರಣಕ್ಕಾಗಿ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಹೇಳಿದೆ, the statement does not pertain to 1962. ೧೯೬೨ರಲ್ಲಿ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿಯೇ ಇರಲಿಲ್ಲ ಎನ್ನುತಕ್ಕದ್ದು ಗೊತ್ತಾಗುತ್ತದೆ. In response to Mr. Bommai's reference to Mr. Veerendra Patil's statement that it was not there during his regime some arguments took place. ೧೯೬೨ರಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಮಾನ್ಯ ವೀರೇಂದ್ರ ಪಾಟೀಲರು ಹೇಳಿದರು ಎನ್ನುತಕ್ಕ ಕಾರಣಕ್ಕಾಗಿ ಅವರೇ ಇದಕ್ಕೆ ಕಾರಣ ಎಂದು ಹೇಳಿದರು. I cannot help if he wants to read in that context. Then, all these records should be withheld if that is the case.

(ಗೊಂದಲ)

SRI R. L. JALAPPA.—The copies of proceedings of this house will be sent to the concerned hon'ble members and if there were any mistakes he could have corrected then and there only. Now, after 2 years saying I did not say and all that, I don't think it is beholding of a gentleman like Mr. Moily.

SRI K. LAKKAPPA.—You have ordered the debate and your decision is final. They are again reopening, they are questioning your decision. On what basis your are questioning your decision ? Therefore, Mr. Speaker...

(ಗೊಂದಲ)

ಡಾ॥ ಜೀವರಾಜ ಆಳ್ವ.—ಮಾನ್ಯ ಲಕ್ಕಪ್ಪನವರಿಗೆ ಹಲವಾರು ವಿಷಯಗಳು ಗೊತ್ತಿಲ್ಲ. ಅವರಿಗೆ ಅನೇಕ ವಿಚಾರಗಳು ಗೊತ್ತಾಗಬೇಕು...

(ಗೊಂದಲ)

Sri K. LAKKAPPA.—You speak hours together to defend your leader, I have no objection. I am asking the Hon'ble Speaker. They cannot get away, they cannot probe into the decision of the Hon'ble Speaker.

(Interruption)

ಡಾ॥ ಜೀವರಾಜ ಆಳ್ವ.—ಮಾನ್ಯ ಲಕ್ಕಪ್ಪನವರಿಗೆ ಹಲವಾರು ವಿಷಯಗಳು ಗೊತ್ತಾಗಬೇಕು. ಅವರ ಭಾಷಣ ಚೆನ್ನಾಗಿರಬೇಕು, ವಿಚಾರಗಳನ್ನು ಹೇಳಬೇಕು. ಆದ್ದರಿಂದ ನಾವು ಹೇಳುತ್ತಿದ್ದೇವೆ. ಅವರ ಭಾಷಣ ಚೆನ್ನಾಗಿರಬೇಕೆಂಬುದು ನಮ್ಮ ಆಸೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:—ಮಾನ್ಯ ಅಧ್ಯಕ್ಷರೆ, ನಾನು...

ಅಧ್ಯಕ್ಷರು:—ಖರ್ಗೆಯವರೆ, ಮಾನ್ಯ ವಿರೋಧಪಕ್ಷದ ನಾಯಕರು ಏನು ಕೆಲವು ಪ್ರಿಲಿಮಿನರಿ ಪಾಯಿಂಟ್ಸನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಅದರ ಬಗ್ಗೆ ಮಾನ್ಯ ದೇಶಪಾಂಡೆಯವರು ಏನು ಹೇಳುತ್ತಾರೆ ಅದನ್ನು ಕೇಳಿ ಅನಂತರ ತಮ್ಮನ್ನು ಕರೆಯುತ್ತೇನೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:—ಮಾನ್ಯ ವಿರೋಧಪಕ್ಷದ ನಾಯಕರು, ಉಪನಾಯಕರು ಮತ್ತು ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಈ ಚರ್ಚೆಗೆ ನಮ್ಮ ವಿರೋಧ ಇಲ್ಲ. ಆದರೆ ಚರ್ಚೆಯಾಗುವುದಕ್ಕಿಂತ ಮುಂಚಿತವಾಗಿ ಚರ್ಚೆಯಲ್ಲಿ ಭಾಗವಹಿಸುವವರಿಗೆ ಮತ್ತು ಚರ್ಚೆಯಲ್ಲಿ ಬರತಕ್ಕ ವಿಷಯ ಏನಿದೆ ಅದರಲ್ಲಿ ನಿಜವಾಗಿ ಬೆಳಕು ಚೆಲ್ಲುವುದಕ್ಕೆ ನಾವು ಯಾವ ದಿಸೆಯಲ್ಲಿ ಚರ್ಚೆ ಮಾಡಬೇಕು ಅದಕ್ಕೆ ರೆಕಾರ್ಡ್ಸ್ ಬೇಕು. ರೆಕಾರ್ಡ್ಸ್‌ನ ಅವಶ್ಯಕತೆಯ ಬಗ್ಗೆ ನಾವು ಇವತ್ತು ನಿಮ್ಮನ್ನು ಕನ್ವಿನ್ಸ್ ಮಾಡಿ ಆ ರೆಕಾರ್ಡ್ಸ್‌ನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅವರು ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಏನು ಹೇಳಿದ್ದಾರೆಂದರೆ,

In the notice, they have said.

> "The Chief Secretary himself deposed before the above committee stating that all telephones tappings were brought to the notice and with his consent only letters have been sent to the telephone authorities. It shows that he was encouraging Telephone tapping.

ಇವರು ತಮ್ಮ ಎಕ್ಸ್‌ಪ್ಲನೇಟರಿ ಸ್ಟೇಟ್‌ಮೆಂಟ್‌ನಲ್ಲಿ ಇದನ್ನು ಹೇಳಬೇಕಾದರೆ ಯಾವುದಾದರೂ ಒಂದು ಆಧಾರ ಇರಬೇಕು.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಏನು ಆಧಾರ ಇದೆ ನೋಡೋಣ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಹೇಳುವುದು ಏನೆಂದರೆ, ಅವರ ಕಡೆ ಏನಾದರೂ ದಾಖಲೆ ಇರಬೇಕು. ಯಾವುದೇ ವ್ಯಕ್ತಿಯ ಅಥವಾ ಈ ಮನೆಯ ಸದಸ್ಯರೇ ಇರಲಿ, ಅವರ ಕ್ಯಾರೆಕ್ಟರನ್ನು ಅಸಾಸಿನೇಷನ್ ಮಾಡಬೇಕು ಎಂದು ಸುಮ್ಮನೆ ಮನಸ್ಸಿಗೆ ಬಂದ ಹಾಗೆ ಮಾತನಾಡುವುದಕ್ಕೆ ಈ ಮನೆಯಲ್ಲಿ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ. ಇಂಥ ಎಕ್ಸ್‌ಪ್ಲನೇಟರಿ ಸ್ಟೇಟ್‌ಮೆಂಟ್ ಬಗ್ಗೆ ಹೇಳುವಾಗ ತಾವು ಅಧ್ಯಕ್ಷರಾಗಿ ಪರ್ಮಿಟ್ ಮಾಡಬೇಕಾಗುತ್ತದೆ.

(ಗೊಂದಲ)

Sri M. MALLIKARJUNA KHARGE.—The Hon'ble Speaker has allowed me to speak.

(Interruption)

SRI M. MALLIKARJUNA KHARGE.—I object for that,

(INTERRUPTION)

SRI R. V. DESHPANDE.—The chair must not allow them to proceed.

(INTERRUPTION)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಅವಕಾಶ ಮಾಡಿಕೊಟ್ಟ ಮೇಲೆ ಏನು ಹೇಳಬೇಕೋ ಹೇಳುತ್ತೇನೆ. ಅವಕಾಶ ಮಾಡಿಕೊಡಬಾರದೆಂದು ಹೇಳುವುದಕ್ಕೆ ಅವರಿಗೇನು ಅಧಿಕಾರವಿದೆ ? ಯಾವದು ಬೇಕಾದರೂ ಚರ್ಚೆ ಮಾಡುತ್ತೇವೆಂದರೆ ಅರ್ಥವೇನು ?

ಅಧ್ಯಕ್ಷರು.—ಅವರು ಕ್ಯಾರೆಕ್ಟರ್ ಅಸಾಸಿನೇಷನ್ ಮಾಡುತ್ತಾರೆಂಬ ಅನುಮಾನ ನಿಮಗೆ ಏಕೆ ಬರಬೇಕು ? I will certainly not allow any character to be assassinated on the Floor of this House.

SRI R. V. DESHPANDE.—When he had mentioned in the explanatory note that he is basing his argument on certain records, he has to convince you and then only you can allow, otherwise, you cannot allow.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸನ್ಮಾನ್ಯ ಅಧ್ಯಕ್ಷರೆ, ತಾವು ರೂಲ್ ೬೮ರನಲ್ಲಿ ನನ್ನ......

ಅಧ್ಯಕ್ಷರು.—ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ಮಾನ್ಯ ಸದಸ್ಯರುಗಳು ಮಾಡಿರತಕ್ಕ ಪ್ರಿಲಿಮಿನರಿ ಸಬ್‌ಮಿಷನ್ ಏನಿದೆ......

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಇನ್ನೂ ಕಂಪ್ಲೀಟ್ ಮಾಡಲಿಲ್ಲ. ಈ ನೋಟೀಸ್‌ನಲ್ಲಿ ಏನು ಹೇಳಿದ್ದಾರೆಂದರೆ.

"The Chief Secretary has deposed before the Rajya Sabha Legislative Sub Committee that Mr. Hegde, the Chief Minister, was aware of the telephone numbers."

Therefore, my submission to the Chair is that Hon'ble Senior Member, Sri Mallikarjun Kharge knows pretty well that the Chief Secretary of Karnataka has deposed before the Committee and now that report is placed on the table of the House. Now it is a public document. Therefore, whatever submissions made or evidence adduced with reference to that becomes a public document. Therefore, my submission, through you is, ಅದರ ವ್ಯಾಪ್ತಿಯಿಂದ ಹೊರಗೆ ನಾನು ಹೋಗುವುದಿಲ್ಲ. ನೀವು ಏನು ಎವಿಡೆನ್ಸ್ ಅಡ್ಯೂಸ್ಡ್ ಮಾಡಿದ್ದೀರೆಂದು ಹೇಳುತ್ತಿದ್ದೀರಿ in writing ಆ ಪತ್ರದ ನಕಲನ್ನು ಮೊದಲು ಸಭೆಯ ಮುಂದೆ ಇಡಿ.

(ಗೊಂದಲ)

SRI M. MALLIKARJUN KHARGE.—I have got every right to speak.

(INTERRUPTION)

MR SPEAKER.—Order, Order,......

I call the House to order.

(INTERRUPTION)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾನೂನು ಚೌಕಟ್ಟಿನಲ್ಲಿ ನಾನು ಏನು ಮಾತನಾಡಬೇಕು ಎನ್ನುವುದು ನನಗೆ ಬಿಟ್ಟಿದ್ದು. ಅವರು ಹೇಳಬೇಕಾಗಿಲ್ಲ.

SRI JEEVARAJ ALVA.—Have you permitted him to speak ?

MR. SPEAKER.—Order, Order.

SRI D. B. CHANDRE GOWDA.—He should not have referred to the document.

MR. SPEAKER.—I will listen to everybody.

SRI R. V. DESHPANDE.—You should be convinced. You look into it. No Chief Secretary has given a statement in the Rajya Sabha Committee or anywhere. What he has alleged, if it is proved, let them produce that document.

(INTERRUPTION)

MR. SPEAKER.—Order, Order. Mr. M.V. Venkatappa to speak.

ಶ್ರೀ ಎಂ. ವಿ. ವೆಂಕಟಪ್ಪ.—ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ವಿಷಯ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಬಂದಾಗ ಶ್ರೀಮಾನ್ ಚಂದ್ರೇಗೌಡರವರು ಈಗ ಫೈಲನ್ನು ಇಡಬೇಕೆಂದು ಏನು ಆಬ್‌ಜೆಕ್ಷನ್ ಎತ್ತಿದ್ದಾರೆ ಅದನ್ನು ಆವತ್ತೇ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಹೇಳಬಹುದಾಗಿತ್ತು. ಬಹುಶಃ ಇದು ಆಫ್ಟರ್ ಥಾಟ್ ಎಂದು ನನಗನ್ನಿಸುತ್ತದೆ. ಅಲ್ಲಿ ಅವರು ಫೈಲ್‌ಗಳು ಬರಲಿ ಹಾಗೂ ಅದಕ್ಕೆ ಸಂಬಂಧಪಟ್ಟದ್ದು ಅಥವಾ ದೆಹಲಿಯಿಂದ ತರಬೇಕಾಗಿರುವುದು ಇಲ್ಲಿನವರದು ಮಾನ್ಯ ಮುಖ್ಯಮಂತ್ರಿಯವರು ಚೀಫ್ ಸೆಕ್ರೆಟರಿಯವರ ಬಗ್ಗೆ ಫೈಲ್ಸ್ ಎಲ್ಲಾ ತನ್ನಿ ಆ ಮೇಲೆ ಬೇಕಾದರೆ ಮುಂದಿನ ವಾರ ಇಟ್ಟುಕೊಳ್ಳೋಣ ಎಂದು ಹೇಳಬಹುದಾಗಿತ್ತು. ಈಗ ಇವರು ಹೇಳುತ್ತಿರುವುದು ಬಹುಶಃ ಆಫ್ಟರ್ ಥಾಟ್ ಎಂದು ನನಗನ್ನಿಸುತ್ತದೆ. ಈ ವಿಷಯಂದ ಬಗ್ಗೆ ಮಾನ್ಯ ಚಂದ್ರೇಗೌಡರು ಹೇಳಿದಾಗ ಈಗಾಗಲೇ ಡಿಸಿಷನ್ ತಾವು ಕೊಟ್ಟಿದ್ದಿರಿ, ತಾವು ಡಿಸಿಷನ್ ಕೊಟ್ಟಮೇಲೆ, ಆದರ ಮೇಲೆ ಅವರು ಮತ್ತೆ ಕೊಶ್ಚನ್ ಮಾಡುತ್ತಿದ್ದಾರೆ.

(ಗೊಂದಲ)

SRI D. B. CHANDRE GOWDA.—The Hon'ble Member has taken my name on two acounts. One is that I should have taken up this issue in the Business Advisory Committee. He has been the Presiding Officer. I have great respect for him. I know the limitations of the Business Advisory Committee. According to me, the Business Advisory Committee is only to fix the time. The tone tenor subject method cannot be discussed within the forum of the Business Advisory Committee. We widely decided on that date that this is a matter to be discussed which is evincing public interest Now he thinks that it is an after-thought, it is good enough. There is nothing wrong. When should I think, what should I think, what is after-thought and thoughts earlier, is within my limits. Nobody can govern me on that.

SRI K. LAKKAPPA.—He is questioning the decision of the Hon'ble Speaker.

MR. SPEAKER.—I am inclined to agree with your interpretation of the role of the Business Advisory Committee.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ನಿಯಮ ೬೮ರ ಪ್ರಕಾರ ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖಾರ್ಗೆಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ತಾವು ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಮುಕ್ತ ಚರ್ಚೆ ಮುಖ್ಯವಾದುದು.

ಅಧ್ಯಕ್ಷರು.— ನಾನು ಯಾವತ್ತೂ ರಿಸ್ಟ್ರಿಕ್ಟೆಡ್ ಚರ್ಚೆ ಮಾಡಿಲ್ಲ. ಮುಕ್ತವಾಗಿಯೇ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ತಾವು ಮಾಡಿದ್ದೀರಿ ಎಂದು ಹೇಳಲಿಲ್ಲ. ಮುಕ್ತ ಚರ್ಚೆಗೆ ತಾವು ಅವಕಾಶ ಕೊಟ್ಟಿರುವಾಗ ಸಂಬಂಧಪಟ್ಟ ಎಲ್ಲಾ ಕಾಗದ ಪತ್ರಗಳು ಸಭೆಯ ಮುಂದೆ ಮಂಡಿತವಾಗುವುದು, ಅತ್ಯಂತ ಸಾಧುವಾದುದು, ಅದಕ್ಕೆ ದಯವಿಟ್ಟು ಅವಕಾಶ ಕೊಡಿ. ಚರ್ಚೆ ಪ್ರಾರಂಭ ಆಮೇಲೆ ಇರಲಿ. ಚರ್ಚೆಯಲ್ಲಿ ರಾಜಕೀಯ ಇದ್ದೇ ಇದೆ. ಚರ್ಚೆಯನ್ನು ಪ್ರಾರಂಭ ಮಾಡುವ ಉದ್ದೇಶವೇ ರಾಜಕೀಯ, ಅದರಲ್ಲಿ ಅನುಮಾನ ಇಲ್ಲ. ಚರ್ಚೆ ಪ್ರಾರಂಭ ಮಾಡುವುದಕ್ಕೆ ರಾಜಕೀಯ ಹಿನ್ನೆಲೆ ಇದ್ದೇ ಇದೆ. ನಾವೂ ಮಾತಾಡುತ್ತೇವೆ ಕೇಳಿ, ಅವರೂ ಮಾತನಾಡುತ್ತಾರೆ ಕೇಳಿ ತಾವು ಸಭೆಯ ಅಧ್ಯಕ್ಷತೆ ವಹಿಸುವವರು. ಕಾಗದಪತ್ರಗಳನ್ನು ಇರುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಮುಕ್ತ ಚರ್ಚೆಯಾಗುವುದಿಲ್ಲ. ಒಂದು ಮುಖವಾದ ಚರ್ಚೆಯಾಗುತ್ತದೆ ಸಮಗ್ರವಾಗಿ ಚರ್ಚೆಯಾಗಬೇಕೆಂಬ ಉದ್ದೇಶದಿಂದ ನಾವು ಕಾತುರತೆಯಿಂದ ಇದ್ದೇವೆ. ತಾವೂ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅಂದಮೇಲೆ ಕಾಗದಪತ್ರಗಳು ಬೇಕು. ನನಗೆ ಯಾವುದೇ ಕಾಗದ ಪತ್ರಗಳು ಕೊಟ್ಟಿಲ್ಲ. ಸುಮ್ಮನೆ ಶಾಸಕಾಂಗದಿಂದ ಬಂದಿರುವ ಸೂಚನೆ ಇದೆ.

ಅಧ್ಯಕ್ಷರು.— ಅವತ್ತೇ ಶ್ರೀಮಾನ್ ವೆಂಕಟಪ್ಪನವರು ನನ್ನ ಗಮನ ಸೆಳೆದು ನಮಗೆ ಮಾಹಿತಿ ಬೇಕು ಎಂದಾಗ ನಾನೇನು ಹೇಳಿದೆ ? ಲೈಬ್ರರಿಯಲ್ಲಿ ಹೋದರೆ ಏನು ಮಾಹಿತಿ ಬೇಕೋ ಅದೆಲ್ಲಾ ಸಿಗುತ್ತದೆಂದು ಹೇಳಿದೆ. ಅದನ್ನು ನಿಮಗೂ ಹೇಳಬೇಕಾ ?

ಶ್ರೀ ವಾಟಾಳ್ ನಾಗರಾಜ್.—ಲೈಬ್ರರಿ ಬೇರೆ. ಸಭೆ ಬೇರೆ.

(ಹಲವಾರು ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದರು. ಗೊಂದಲಮಯ ವಾತಾವರಣ ಸಭೆಯಲ್ಲಿತ್ತು.)

MR. SPEAKER.— Do I have the permission of this House to give my ruling on this preliminary point?

SRI R.V. DESHPANDE.— Sir, before you give the ruling, pleare hear the Leader of the House.

ಶ್ರೀ ವಾಟಾಳ್ ನಾಗರಾಜ್.— ಕಾಗದ ಪತ್ರಗಳನ್ನು ಸಭೆಯ ಮುಂದೆ ಇಟ್ಟರೆ ಮುಕ್ತ ಚರ್ಚೆಯಾಗುತ್ತದೆ. ಇಲ್ಲದಿದ್ದರೆ ಒಂದು ಮುಖದ ಚರ್ಚೆಯಾಗುತ್ತದೆ.

ಅಧ್ಯಕ್ಷರು.— ಕುಳಿತುಕೊಳ್ಳಿ. Professor Nanjundaswamy is catching my eye for some time.

ಪ್ರೊ ಎಂ, ಡಿ. ನಂಜುಂಡಸ್ವಾಮಿ.— ಮಾನ್ಯ ಸಭಾಧ್ಯಕ್ಷರೆ, ತಮಗೂ ಗೊತ್ತಿದೆ...

ಅಧ್ಯಕ್ಷರು.— ನನಗೇನೂ ಗೊತ್ತಿಲ್ಲ.

ಪ್ರೊ ಎಂ.ಡಿ. ನಂಜುಂಡಸ್ವಾಮಿ.... ನನಗೇನು ಗೊತ್ತಿದೆ ಹೇಳುತ್ತೇನೆ. ಇಲ್ಲಿರುವ ಹಲವಾರು ಸದಸ್ಯರಿಗೆ ಗೊತ್ತಿದೆ.

ಒಬ್ಬ ಸದಸ್ಯರು.— ಸ್ವಿಚ್ ಹಾಕಿ.

ಪ್ರೊ ಎಂ.ಡಿ. ನಂಜುಂಡಸ್ವಾಮಿ.— ಹಾಕಿದೆ. ಆದರೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾನು ೩೫ ವರ್ಷಗಳಿಂದ ಕಾನೂನು ವಿದ್ಯಾರ್ಥಿ. ಆದರೆ ಇಲ್ಲಿ ನಡೆಯುತ್ತಿರುವ ಚರ್ಚೆಯನ್ನು ನೋಡಿದರೆ ನನಗೆ ಕಾನೂನು ಗೊತ್ತಿದೆಯೋ ಇಲ್ಲವೋ ಎಂಬ ಅನುಮಾನ ಶುರುವಾಗಿದೆ. ಏಕೆಂದರೆ ಮೊನ್ನೆ ಕೂಡ ಈ ವಿಷಯದ ಬಗ್ಗೆ ಮಾತನಾಡುತ್ತಾ ಏನು ಹೇಳಿದೆ? ಕದ್ದಾಲಿಕೆ ಆಗಿದೆ. ಆಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ನಮ್ಮ ದುರಾದೃಷ್ಟ ಏನು? ನಮ್ಮ ಮೂಲಭೂತ ಹಕ್ಕಿನ ಹರಣ ಮಾಡಿದಾರ್ರೆ, ಯಾರೋ ಮಾಡಿದ್ದಾರೆ. ಯಾರು ಮಾಡಿದ್ದಾರೆ ಎಂಬುದು ನಮಗಿನ್ನೂ ಗೊತ್ತಾಗಿಲ್ಲ. ಈ ರಾಜ್ಯದ ಜನ ಅದನ್ನು ಪತ್ತೆ ಮಾಡಬೇಕಾಗಿದೆ. ಅವರ ಪ್ರತಿನಿಧಿಗಳಾಗಿ ನಾವು ಇಲ್ಲಿ ಬಂದಿದ್ದೇವೆ. ಅವರ ಪರವಾಗಿ ನಾವು ಕೆಲಸ ಮಾಡಬೇಕಾಗಿದೆ. ಈ ಕಡೆ ಸದಸ್ಯರಿಗೆ ಮಾನವಿ ಮಾಡಿಕೊಳ್ಳುವುದು ಅಥವಾ ಪ್ರಶ್ನೆ ಕೇಳುವುದು ಅಪರಾಧಿಗಳನ್ನು ಪತ್ತೆ ಮಾಡುವ ಬಗ್ಗೆ ತಮಗೆ ಇಚ್ಛೆ ಇದೆಯೋ ಇಲ್ಲವೋ? (ಜನತಾ ದಳದ ಸದಸ್ಯರನ್ನು ಕುರಿತು)

(ಕಾಂಗ್ರೆಸ್ ಸದಸ್ಯರು ಮೇಜು ಕುಟ್ಟಿದ್ದರು.)

ಶ್ರೀ ಬಿ.ಎಂ ಬನ್ನಿಕೋಡ್.— ನಿಜವಾಗಿಯೂ ಇಚ್ಛೆ ಇದೆ.

ಶ್ರೀ ಎಂ. ಡಿ. ನಂಜುಂಡಸ್ವಾಮಿ.— ಇದ್ದರೆ ನೇರವಾಗಿ ಚರ್ಚೆ ಆಗಬೇಕು. ಇದೊಂದು ವಿಚಾರಣೆ ಎಂದು ತೆಗೆದುಕೊಳ್ಳಬೇಕು. ಈ ಸದನಕ್ಕೆ ವಿಚಾರಣೆ ಮಾಡುವ ಹಕ್ಕು ಉಂಟು.

(ಗೊಂದಲ)

ಶ್ರೀ ಎಂ. ನಾರಾಯಣ ಸ್ವಾಮಿ.— ದಯಮಾಡಿ ಆ ಕಡೆ ಸದಸ್ಯರಿಗೆ ಹೇಳಬೇಕು. ಪದೇಪದೇ ಗಲಾಟೆ ಮಾಡುತ್ತಿದ್ದಾರೆ ಅವರು.

ಶ್ರೀ ಎಂ. ಮಹದೇವ್.—ನೀವು ಮಾಡುವುದಿಲ್ಲವೇ ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ಗಂಭೀರವಾಗಿ ಚರ್ಚೆ ಮಾಡೋಣ. ಮೇಜು ಕುಟ್ಟುವುದು ಬೇಡ.

MR. SPEAKER.—I think you have lost your chain of thoughts obviously...

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಅದೇ ಆಯಿತು. ನಾನು ಹೇಳುವುದಕ್ಕೆ ಹೊರಟಿದ್ದು ಇಷ್ಟು. ಮೇಜು ಕುಟ್ಟಿದಾಗ ಮರೆತು ಹೋಯಿತು, ಈ ಸದನಕ್ಕೆ ಈ ರಾಜ್ಯದಲ್ಲಿ ಏನೇನು ಅಪರಾಧ ಆಯಿತು ಎಂಬುದನ್ನು ಪತ್ತೆ ಮಾಡುವ ಹಕ್ಕು ಉಂಟು, ಅಧಿಕಾರ ಉಂಟು. ಆ ಕೆಲಸವನ್ನು ನಾವು ಮಾಡಬೇಕಾಗಿದೆ, ಅಂದರೆ ಏನು ? This House has a right and privilege to conduct the proceedings in the form of a trial. ಈ ಹಕ್ಕು ಎಲ್ಲ ಸದನಕ್ಕೂ ಉಂಟು ಪಾರ್ಲಿಮೆಂಟರಿ ಪ್ರಾಕ್ಟೀಸ್‌ನಲ್ಲಿ.

MR. SPEAKER.—May I amend it ? 'in the form of a debate'. Could it be a trial by debate.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ಆಗಬಹುದು. to find out the truth.

MR. SPEAKER.—Could it be a trial by debate.

PROF M.D. NANJUNDASWAMY.—Yes, trial by debate definitely to find out the truth. ಇದಕ್ಕೆ ಯಾರು ಪ್ರಶ್ನೆಯನ್ನು ಎತ್ತಿದ್ದಾರೆ, ಅವರು ವಿಷಯವನ್ನು ಮಂಡಿಸುವುದಕ್ಕೆ ನಾವು ಅಡ್ಡಿ ಮಾಡಬಾರದು. ಅನಂತರ ದಾಖಲೆಗಳು ಬೇಕೋ-ಬೇಡವೋ ಎನ್ನುವುದನ್ನು ತೀರ್ಮಾನ ಮಾಡಬಹುದು. documents can be called for later. That is the procedure adopted in any court and this is the highest court in parliamentary practice. ಆದ್ದರಿಂದ ಸನ್ಮಾನ್ಯ ಖರ್ಗೆಯವರಿಗೆ ವಿಷಯವನ್ನು ಚರ್ಚಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ;

ಶ್ರೀ ಬಿ. ಹೆಚ್ ಬನ್ನಿಕೋಡ್.— ಯಾವುದೇ ವಿಚಾರವನ್ನು ಚರ್ಚೆ ಮಾಡಬೇಕಾದರೂ ದಾಖಲೆಗಳನ್ನು ಮೊದಲು ತರಿಸಿಕೊಂಡು ನಂತರ ಚರ್ಚೆ ಮಾಡಬೇಕು.

MR. SPEAKER.—Let us hear Mr. Bannikod, one of the distinguished lawyers.

ಶ್ರೀ ಬಿ.ಹೆಚ್. ಬನ್ನಿಕೋಡ್.—ಸನ್ಮಾನ್ಯ ಅಧ್ಯಕ್ಷರೆ,ಮಾನ್ಯ ಸದಸ್ಯರಾದ ಪ್ರೋ ನಂಜುಡಸ್ವಾಮಿ ಯವರು ಯಾವುದೇ ವಿಚಾರವನ್ನು ಚರ್ಚೆ ಮಾಡಬೇಕಾದರೆ ದಾಖಲಾತಿಗಳು ಇಲ್ಲದೆ ಇದ್ದರೂ ಯಾವುದೇ ಆಧಾರವಿಲ್ಲದೆ ಇದ್ದರೂ ಮೊದಲು ಚರ್ಚೆ ಮಾಡಬೇಕು ಅಂತಹೇಳಿದ್ದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಹಾಗೂ ಮನಸ್ಸಿಗೆ ಆಘಾತವಾಗಿದೆ. ಎಲ್ಲಾ ದಾಖಲಾತಿಗಳನ್ನು ನ್ಯಾಯಾಲಯದ ಮುಂದಿಟ್ಟುಕೊಂಡು ಸಂಬಂಧಪಟ್ಟ ದಾಖಲಾತಿಗಳನ್ನು ಸಂಬಂಧಪಟ್ಟ ವ್ಯಕ್ತಿಯ ಗಮನಕ್ಕೆ ತಂದು ನಂತರ ವಿಚಾರಣೆ ನಡೆಯುತ್ತದೆ. ಆದ್ದರಿಂದ ಈ ಬಗ್ಗೆ ಇರತಕ್ಕ ದಾಖಲಾತಿಗಳನ್ನು ಮೊದಲುತರಿಸಿ ನಂತರ ಚರ್ಚೆಯಾಗಲಿ ಈ ರಾಜ್ಯದ ಜನತೆಗೆ. ರಾಷ್ಟ್ರದ ಜನತೆಗೆ ಈ ಯಾರ್ಯಾರು ಈ ರಾಷ್ಟ್ರದಲ್ಲಿ ಏನೇನು ಅನ್ಯಾಯಗಳನ್ನು ಮಾಡಿದ್ದಾರೆ, ಯಾರ್ಯಾರ ಕಾಲದಲ್ಲಿ ಏನೇನು ಆಗಿದೆ ಎಂಬುದು ಈ ರಾಷ್ಟ್ರಕ್ಕೆ ಗೊತ್ತಾಗಲಿ. ಅವುಗಳೆಲ್ಲವನ್ನೂ ಈ ಸದನದ ಮುಂದೆ ತರಿಸಿ. ಅವುಗಳನ್ನು ಬಚ್ಚಿಡತಕ್ಕ ಕೆಲಸ ಆಗಬಾರದು. ಒಬ್ಬ ವ್ಯಕ್ತಿಯನ್ನು ರಾಜಕೀಯವಾಗಿ ದುರುಪಯೋಗ ಮಾಡಿಕೊಳ್ಳತಕ್ಕ ಕೆಲಸ ಈ ರಾಜ್ಯದಲ್ಲಿ ನಡೆಯುವುದು ಬೇಡ. ಎಲ್ಲೆಲ್ಲಿ ಯಾರ್ಯಾರು ಏನೇನು ಮಾಡಿದ್ದಾರೆಂಬುದು ಈ

ರಾಜ್ಯದ ಜನತೆಗೆ ಗೊತ್ತಾಗಲಿ. ಒಬ್ಬ ವ್ಯಕ್ತಿಯನ್ನು ಮುಖಭಂಗ ಮಾಡುವಂತಹ ಈ ರೀತಿಯ ಚರ್ಚೆ ನಡೆಯತಕ್ಕುದಲ್ಲವೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.— ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಅನುಮತಿಯನ್ನು ಕೊಡಬೇಕಾದರೆ, ಈಗ ರೂಲ್ಸ್ ೬೮ರ ಪ್ರಕಾರ ಪ್ರೈಮಾಫೇಸಿ ಏನು ಇದೆ, ಅದನ್ನು ನಾನು ಸಾಬೀತು ಮಾಡುತ್ತೇನೆ ಎನ್ನತಕ್ಕ ವಿಚಾರ ಬಾದಿರುವಾಗ ಪ್ರೋ ನಂಜುಂಡಸ್ವಾಮಿ ಯವರು ಹೇಳಿದ ಹಾಗೆ, ಚರ್ಚೆಯನ್ನು ಪ್ರಾರಂಭ ಮಾಡಿ ಆ ಚರ್ಚೆಯ ಆಧಾರದ ಮೇಲೆ ಕಡತಗಳು ಏನು ಬೇಕೋ ಅಥವಾ ಬೇಡವೋ ಅದನ್ನು ಸರ್ಕಾರಕ್ಕೆ ಒದಗಿಸಬೇಕೆಂದು ಆದೇಶ ಕೊಟ್ಟರೆ ಅವರು ಒದಗಿಸುತ್ತಾರೆ. ಅಥವಾ ಸಾಬೀತುಪಡಿಸುವುದಕ್ಕೆ ಏನು ದಾಖಲೆಗಳಿವೆಂದು ಕೇಳಿದ ಕಾಲಕ್ಕೆ ಆ ಪ್ರಶ್ನೆ ಮೂಲಭೂತವಾದ ಪ್ರಶ್ನೆಯಾಗಿ ಬರುತ್ತದೆ. ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿಯೇ ಎಲ್ಲಾ ತಂದಿಡಿ ಅಂದರೆ ಏನು ತಂದಿಡುವುದು ಎನ್ನತಕ್ಕ ಪ್ರಶ್ನೆ ಬರುತ್ತದೆ. ಹಳ್ಳಿ ಕಡೆ ಒಂದು ಗಾದೆ ಇದೆ ''ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ'' ಅಂತ ಆ ರೀತಿಯಾಗಿದೆ. ಆದ್ದರಿಂದ ಶ್ರೀಮಾನ್ ಖರ್ಗೆಯವರಿಗೆ ಮತ್ತಿತರಿಗೆ ಅವರು ತಂದಿರತಕ್ಕ ವಿಚಾರ ವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಇದು ಒಂದು ದಿವಸವಾಗಲಿ, 2 ದಿವಸವಾಗಲಿ ಚರ್ಚೆಯಾಗಲಿ ಚರ್ಚೆಯಲ್ಲಿಬರತಕ್ಕ ವಿಚಾರಗಳು ಅಂದರೆ ಸಮುದ್ರವನ್ನು ಮಂಥನ ಮಾಡಿದರೆ, ಅದರಲ್ಲಿ ಅಮೃತ ಬರುತ್ತದೋ ಇಲ್ಲ ವಿಷ ಬರುತ್ತದೋ ಎಂಬುದು ಗೊತ್ತಾಗುತ್ತದೆ. ಆದರೆ ಅದನ್ನು ಮಾಡುವುದಕ್ಕಿಂತ ಮುಂಚಿತವಾಗಿ, ನಾನು ಪುನಃ ಪ್ರಸ್ತಾಪ ಮಾಡುವುದು ಏನೆಂದರೆ, ''ಕುಂಬಳ ಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ'' ಎಂಬ ಗಾದೆ ಹಳ್ಳಿ ಕಡೆ ಇದೆ. ಆ ರೀತಿ ಆಗಬಾರದು

ಶ್ರೀ ಎಂ. ಪಿ. ವೆಂಕಟೇಶ್.— ಈಗಾಗಲೇ ಸಮಯ ೧–೧೦ ಗಂಟೆಯಾಗಿದೆ. ಎರಡೂ ಕಡೆ ಬಿಸಿ ವಾತಾವರಣ ಇದೆ. ಆದ್ದರಿಂದ ಅರ್ಧ ಗಂಟೆ ಸಭೆಯನ್ನು ಮುಂದೂಡಿದರೆ ಎಲ್ಲವೂ ಸರಿ ಹೋಗುತ್ತದೆ.

MR SPEAKER.— Just a second, now Mr. Ramakrishna Hegde.

SRI K. SHIVAMURTHY.— I want to maye a submission. I am one of the victim. I am a member.

MR. SPEAKER.— Right now I have called up on Sri Ramakrishna Hegde. I will give you a chance to make your submissions.

ಶ್ರೀ ರಾಮಕೃಷ್ಣ ಹೆಗ್ಡೆ (ಬಸವನಗುಡಿ).— ಮಾನ್ಯ ಅಧ್ಯಕ್ಷರೇ, ಚರ್ಚೆ ಪ್ರಾರಂಭ ಆಗುವುದಕ್ಕಿಂತಲೂ ಮೊದಲು ಈ ಸಂದರ್ಭದಲ್ಲಿ ನಾನು ಇದರಲ್ಲಿ ಭಾಗವಹಿಸುವುದಕ್ಕೆ ಬಯಸಿರಲಿಲ್ಲ. ಏನು ಚರ್ಚೆಯಾಗುತ್ತದೋ ಅದನ್ನು ಕೇಳಿ ನನ್ನ ಅಪರಾಧ ಏನಿದೆ ಎಂದು ಹೇಳತಕ್ಕದ್ದನ್ನು ತಿಳಿದು ಕೊಂಡ ಮೇಲೆ ನನಗೆ ವಿವರಣೆ ಕೊಡಬೇಕೋ ಅಥವಾ ಕ್ಷಮಾ ಯಾಚನೆ ಮಾಡಬೇಕೋ ಅಥವಾ ರಾಜಕೀಯದಿಂದ ನಿವೃತ್ತಿ ಹೊಂದಬೇಕೋ ಎಂದು ಹೇಳುವುದನ್ನು ಈ ಸದನದ ಮುಂದೆ ಇಡಬೇಕೆಂದಿದ್ದೆ. ಆದರೆ ಇಲ್ಲಿಯವರೆಗೆ ಮಾನ್ಯ ಸದಸ್ಯರು ವ್ಯಕ್ತ ಪಡಿಸಿದ ಕೆಲವು ಅಭಿಪ್ರಾಯಗಳನ್ನು ನೋಡಿ ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳ ಬಗ್ಗೆ ತಮ್ಮ ಗಮನಸೆಳೆಯಬೇಕೆಂದೆನಿಸಿತು. ಅದಕ್ಕಾಗಿ ನಾನು ಇಲ್ಲಿ ನಿಂತಿದ್ದೇನೆ. ಮೊದಲನೆಯದಾಗಿ ದಯವಿಟ್ಟು ಈ ನೋಟೀಸ್‌ನ ಒಕ್ಕಣೆಯನ್ನು ನೋಡಬೇಕು. ನೋಟೀಸನ್ನು ನಮ್ಮ ಈ ಸದನದ ನಿಯಮಾವಳಿ ಕೆಳಗೆ ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಅಧಿಕಾರ ಇದೆ. ಆದರೆ ಅದರ ಮಹತ್ವ ಅಥವಾ ಅಮಹತ್ವ–ಇವುಗಳನ್ನು ತಾವು ತೀರ್ಮಾನ ಮಾಡಬೇಕು. ಏಕೆಂದರೆ ಇದು ಒಂದು ''A matter of Public Importance'' ಆದರ ಕೆಳಗೆ ಬರುತ್ತದೆ. ಈ ನೋಟೀಸ್‌ನ ಒಕ್ಕಣಿಕೆ ಹೀಗಿದೆ.

''Sir, the matter is urgent public importance and current subject'' ಇದರ ವ್ಯಾಕರಣ ವಿಚಾರದಲ್ಲಿ ನಾನು ಹೋಗುತ್ತಾ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ನಾನು ಒಂದು ನೋಟೀಸ್ ಕೊಟ್ಟ ಮೇಲೆ ತಾವು ಇದನ್ನು ಅಡ್ಮಿಟ್ ಮಾಡಿದ ಮೇಲೆ ಅದು ಅಕ್ಸೆಪ್ಟ್ ಆದ ಮೇಲೆ ತಾವು ಇವತ್ತು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಪುನಃ ಅದರಲ್ಲಿನ ಸೆಂಟೆನ್ಸ್, ಫುಲ್ ಸ್ಟಾಪ್, ಕಾಮ ಓದಿ ಹೇಳತಕ್ಕಂಥ ಪ್ರಶ್ನೆ ಇಲ್ಲ. ಅದರಲ್ಲಿ ವಾಕ್ಯಗಳು ಏನಿದೆ, ಯಾವ ರೀತಿಯಾಗಿ ನಾವು ಡ್ರಾಫ್ಟ್ ಮಾಡಿದ್ದೇವೆ ಎನ್ನತಕ್ಕಂಥ ಪ್ರಶ್ನೆ ಇವತ್ತು ಬರುವುದಿಲ್ಲ. ೧೫ನೇ ಜೂನ್‌ಗೆ ತಮಗೆ ಕೊಟ್ಟ ಮೇಲೆ

ತಾವು ಅದನ್ನು ನೋಡಿಕೊಂಡು ನೀವು ಏನು ಒಂದು ತೀರ್ಮಾನಕ್ಕೆ ಬಂದಿದ್ದೀರೆಂದರೆ, ರೂಲ್ ೭೮ ಕೆಳಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆಂದು ಹೇಳಿ ಇವತ್ತು ಅದಕ್ಕೆ ತಾವು ಟೈಮ್‌ಫಿಕ್ಸ್ ಮಾಡಿದ್ದೀರಿ. ಟೈಮ್ ಫಿಕ್ಸ್ ಮಾಡಿದ ಮೇಲೆ ನಾವು ಇವತ್ತಿನ ದಿವಸ ಅದನ್ನು ಚರ್ಚೆ ಮಾಡಬೇಕೇಹೊರತು ಪುನಃ ನನ್ನ ನೋಟೀಸ್‌ಮೇಲೆ ವ್ಯಾಖ್ಯಾನಮಾಡತಕ್ಕ ಪ್ರಶ್ನೆ ಈಗ ಬರುವುದಿಲ್ಲ. ಅದು ಮುಗಿದು ಹೋಗಿದೆ. ಮುಗಿದ ಮೇಲೆ ಇವತ್ತಿನದಿವಸ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಏನು ಹೇಳುತ್ತೇನೆ ಎಂದು ಕೇಳಿದ ಮೇಲೆ ಇದು ಸರಿಯೋ ತಪ್ಪೋ ಎಂದು ತೀರ್ಮಾನ ಮಾಡುವುದಕ್ಕೆ ತಮಗೆ ಅಧಿಕಾರ ಇದೆ, ನಾನು ಇವತ್ತು ಡಾಕ್ಯುಮೆಂಟ್ಸ್ ಕೇಳಬಹುದು, ಅಥವಾ ಕೇಳದೇ ಇರಬಹುದು. ಅಥವಾ ನನ್ನಲ್ಲಿರತಕ್ಕ ಮೆಟೀರಿಯಲ್ಸ್ ಅಷ್ಟಕ್ಕೆ ಸೀಮಿತವಾಗಿ ಚರ್ಚೆಯನ್ನು ಮುಗಿಸಬಹುದು. ಆದರೆ ಅದನ್ನು ಬಿಟ್ಟು ನಾನು ಏನು ನೋಟೀಸ್ ಕೊಟ್ಟಿದ್ದೇನೆ ಅದನ್ನು ತಿರುಗಿ ಮರಿಗಿ ಓದಿ ಹೇಳತಕ್ಕದು ಈಗ ಪ್ರಶ್ನೆ ಇಲ್ಲ. ಇದನ್ನೆಲ್ಲಾ ಯಾವ ದಿವಸ ಚರ್ಚೆ ಮಾಡಬಹುದಾಗಿತ್ತು ? ಈ ವಿಷಯ ಚರ್ಚೆ ಮಾಡಬೇಕೋ ಬೇಡಬೇಕೋ ಎಂದು ಜೂನ್ ೧೫ನೇ ತಾರೀಖು ಡಿಸೈಡ್ ಮಾಡಿದಾಗ ಇದನ್ನೆಲ್ಲಾ ಚರ್ಚೆ ಮಾಡಬೇಕಾಗಿತ್ತು. ಆ ಬಗ್ಗೆ ಡಿಸೈಡ್ ಆಗಿ ಅವಕಾಶವನ್ನು ಕೊಟ್ಟ ಮೇಲೆ ಟೈಮ್ ಫಿಕ್ಸ್ ಆದಮೇಲೆ ಪುನಃ ನೋಟೀಸ್ ಓದಿ ಫುಲ್‌ಸ್ಟಾಪ್ ಇಲ್ಲ, ಕಾಮ ಇಲ್ಲ, ಇಂಟರ್‌ಪ್ಷನ್ ಏನು ಎಂದು ಹೇಳುವುದು ಈಗ ಅವಶ್ಯಕ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ತಾವು ಕೇಳಿ ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಅಷ್ಟೂ ಜನ ಮಾತನಾಡಿದಾಗ ನಾನು ಮಾತನಾಡಿದನೇ ? ನಾನು ಈ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ನೀವೆಲ್ಲರೂ ಇದರ ಬಗೆ ಮಾತನಾಡಿದಿರಿ. ಅಧ್ಯಕ್ಷರೇ, ನನ್ನ ನೋಟೀಸಿಗೆ ತಾವು ಒಪ್ಪಿಗೆ ಕೊಟ್ಟ ಮೇಲೆ ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟಮೇಲೆ, ಟೈಮ್ ಕೂಡಾ ಫಿಕ್ಸ್ ಮಾಡಿದ್ದೀರಿ. ಆ ಟೈಂ ಪ್ರಕಾರ ಇವತ್ತು ಚರ್ಚೆ ಮಾಡೋಣ. ಮುಂದೆ ಅವರಿಗೆ ತಾವು ಅವಕಾಶ ಕೊಟ್ಟಾಗ ಅವರು ಅದನ್ನು ಹೇಳಲಿ. ಅದಕ್ಕಿಂತ ಮುಂಚೆ ಪುನಃ ಅದಕ್ಕೆ ಅವಕಾಶ ಕೊಟ್ಟರೆ ಅದರ ಬಗ್ಗೆ ಪುನಃ ಪ್ರಿವಿಲೇಜಿನ ಚರ್ಚೆ ನಡೆಯುತ್ತದೆ. ಅದಕ್ಕೆ ತಾವು ದಯಮಾಡಿ ಅವಕಾಶ ಮಾಡಿಕೊಡಬಾರದೆಂದು ಹೇಳುತ್ತೇನೆ.

MR. SPEAKER.—Hon. Member Sri Ramakrishna Hegde becomes very much relevant to this particular debate which I have allowed. That is why, I owe a duty to this House and Sri Ramakrishna Hegde to listen to him. I kindly request you to bear with me.

SRI RAMAKRISHNA HEGDE.— Thank you Sir
ಇದರಲ್ಲಿ ನನ್ನ ಹೆಸರು ಇಲ್ಲದೆ ಇದ್ದಿದ್ದರೆ ನಾನು ಇವತ್ತು ಇಲ್ಲಿ ಇರುತ್ತಿರಲಿಲ್ಲ. ನಾನೇನಾದರೂ......

(ಗೊಂದಲ)

MR. SPEAKER.—Why don't you give me a chance ? I am sure, Sri Ramakrishna Hegde would like to be fair to this House. ನನ್ನ ಹೆಸರು ಇಲ್ಲದೇ ಇದ್ದಿದ್ದರೆ ಇರುತ್ತಿರಲಿಲ್ಲವೆಂದು ಹೇಳುವುದು ಸರಿಯಲ್ಲ. ನಿಮ್ಮ ಹೆಸರು ಇರಲಿ ಇಲ್ಲದೆ ಇರಲಿ You are an hon. Member of this House. I would like you to be fair.

SRI RAMAKRISHNA HEGDE.—I did not say in that sence. I have taken the leave of this House to be absent because I had certainly very important other matters to attend to. However, since my name figures in this, I think, it is not only a duty I owe to this House but also a duty I owe to my State. ನಾನು ಇದರ ಬಗ್ಗೆ ಏತಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ ಅದರಲ್ಲಿ ಏನು ಹೇಳಿದ್ದಾರೆಂದರೆ :—

> "Sri Ramakrishna Hegde has denied that he is aware of tapping of the telepnones of the ruling Party as well as the opposition Party Members and further he said, anyone can show any evidence that it was done with my approval or my permission, I will quit the public life."

ಇದು ನನ್ನ ಸ್ಟೇಟ್‌ಮೆಂಟ್ ಆಯಿತು. ಈ ಸ್ಟೇಟ್‌ಮೆಂಟ್‌ಗೆ ಕ್ವಾಲಿಫೈ ಮಾಡುವುದು ಯಾವುದೆಂದರೆ, "If anyone can show any evidence that it was done with my approval or with my permission. ಈಗ ಅದು ಎಲ್ಲಿದೆ ? ಮಾನ್ಯ ಲಕ್ಕಪ್ಪನವರೇ, ಒಂದೇ ಒಂದು ನಿಮಿಷ ನಾನು ಮುಗಿಸುತ್ತೇನೆ. ಎಕ್ಸ್‌ಪ್ಲನೇಟರಿ ನೋಟನ್ನು ಕೊಟ್ಟಿದ್ದಾರೆ. ಅದರಲ್ಲಿ ಮೂರು ಭಾಗ ಇದೆ. ಮೊದಲನೆಯದು ಹಿಂದೆ ನೋಟೀಸಿನಲ್ಲಿ ಹೇಳಿದ್ದನ್ನೆ ಪುನಃ ರಿಪೀಟ್ ಮಾಡಿದ್ದಾರೆ. "As Chief Minister, he was aware of telephone numbers that were to be tapped" ಆಮೇಲೆ ಎರಡನೆಯದು ನಾನು ಪ್ರೂವ್ ಮಾಡುತ್ತೇನೆಂದು ಹೇಳಿದ್ದಾರೆ. ನಂತರ ಮೂರನೆಯದು ಬರುತ್ತೇನೆ. Because that is how the production of relevent file or records becomes absolutely relevant. Without production of record, this debate will have absolutely no meaning ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಮೂರನೆಯ ಪಾಯಿಂಟ್ ಏನು ಹೇಳುತ್ತಾರೆ : Since the Chief Secretary himself deposed before the above Committee stating that all Telephone Tappings were brought to his notice and with his consent only letters have been sent to Telephone Authorities. It shows that he was encouraging telephone tapping of the then ruling Party Members as well as opposition Party Members. ಬೇರೇನೂ ಬೇಕಾಗಿರಲಿಲ್ಲ. ಕನಿಷ್ಠ ಪಕ್ಷ ಮುಖ್ಯ ಕಾರ್ಯದರ್ಶಿಯವರು ಏನು ಸ್ಟೇಟ್‌ಮೆಂಟ್ ಕೊಟ್ಟರು ಅದರ ಕಾಪಿಯನ್ನಾದರೂ ಇದರ ಜೊತೆಗೆ ಇಡಬೇಕಾಗಿತ್ತು. ಮಾನ್ಯ ಅಧ್ಯಕ್ಷರೆ, ತಾವು ನನ್ನನ್ನು ಕ್ಷಮಿಸುವುದಾದರೆ ಈವೊಂದು ನೋಟೀಸ್ ಎತ್ತಲಿಕ್ಕೆ ಪರ್ಮಿಶನ್ ಕೊಡುವುದಕ್ಕೆ ಮೊದಲು ತಾವು ಸಂಬಂಧಪಟ್ಟಂತಹ ಸದಸ್ಯರ ಹತ್ತಿರ, ಆ ಚೀಫ್ ಸೆಕ್ರೆಟರಿಯವರು ಏನು ಹೇಳಿದ್ದಾರೆ ಅದಕ್ಕೆ ಅಥೆಂಟಿಕ್ ಕೊಡಿಯೆಂದು ಹೇಳಬೇಕಾಗಿತ್ತು. ಮಾನ್ಯ ಪ್ರೊ, ನಂಜುಂಡಸ್ವಾಮಿಯವರು ಕಾಯಿದೆ ಪಂಡಿತರು, ಅದರ ಬಗ್ಗೆ ಎರಡು ಅಭಿಪ್ರಾಯ ವಿಲ್ಲ, ಅವರು ಹೇಳಿದರು. ಇಲ್ಲಿ ಯಾರು ತಪ್ಪು ಮಾಡಿದ್ದಾರೆ ಅವರು ಈ ಟ್ರಯಲ್ ಅನ್ನು ಎದುರಿಸಬೇಕಾಗುತ್ತದೆ ಹಾಗೆ ಎಂದು ಹೇಳಿದರು. ಅದನ್ನು ಒಪ್ಪಿಕೊಳ್ಳೋಣ.

SRI K. LAKKAPPA.— Whether the hon. Member Sri Hegde would yield for a minute ?

ಅಧ್ಯಕ್ಷರು.— ಮಾನ್ಯ ಹೆಗಡೆಯವರು ಈಲ್ಡ್ ಆಗಿಲ್ಲ.

SRI RAMAKRISHNA HEGDE.— I will finish within two minutes.

SRI K. LAKKAPPA.—Are you going to question the decision of the Speaker ?

SRI RAMAKRISHNA.—HEGDE Not at all. ಎಂದೆಂದೂ ಇಲ್ಲ. ಅದನ್ನು ನಾನೆಂದೂ ಮಾಡಲಾರೆ. ನನ್ನ ಹತ್ತಿರ ಅದು ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಮಾನ್ಯ ಅಧ್ಯಕ್ಷರಾಗಿ ಅವರ ಬಗ್ಗೆ ನನಗೆ ಎಷ್ಟು ಗೌರವವಿದೆಯೋ ವೈಯಕ್ತಿಕವಾಗಿಯೂ ಸಹ ಅಷ್ಟೇ ಗೌರವ ನನಗೆ ಇದೆ. ಆದ್ದರಿಂದ ಆ ಕೆಲಸ ನಾನೆಂದೂ ಮಾಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ನನ್ನ ಅರಿಕೆ ಏನೆಂದರೆ, ವಿಚಾರ ಬಹಳ ಗಂಭೀರವಾದದ್ದು ಇದೆ ಗಹನವಾದದ್ದು ಇದೆ. ನಮ್ಮ ಪ್ರತಿಯೊಬ್ಬ ಸದಸ್ಯರ ಹಕ್ಕುಬಾಧ್ಯತೆಗಳ ಪ್ರಶ್ನೆ ಕೂಡ ಇಲ್ಲಿ ಅಡಕವಾಗಿದೆ ಎಂಬ ಸೂಚನೆಗಳು ನನ್ನ ಮುಂದೆ ಇವೆ. ಆದ್ದರಿಂದ ನಾನು ಎಲ್ಲಾ ಅಭಿಪ್ರಾಯಗಳನ್ನು ಅರ್ಥ ಮಾಡಿಕೊಳ್ಳಬೇಕು ..

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಾ ಇದ್ದೆ. ಪ್ರೊಫೆಸರ ನಂಜುಂಡಸ್ವಾಮಿಯವರು ಹೇಳಿದರು ಏನೆಂದರೆ, ಯಾರು ಅಪರಾಧ ಮಾಡಿದ್ದಾರೆ ಎಂದು ತಿಳಿದುಕೊಳ್ಳತಕ್ಕದ್ದು ಜನತೆಯ ಹಕ್ಕು ಇಲ್ಲಿ ಬೈ ಡಿಬೇಟ್ ಮೂಲಕ ನಿರ್ಣಯ ಆಗಬೇಕೆಂದು ತಾವು

ಹೇಳಿದ್ದೀರಿ. ಅವರಿಗೆ ನಾನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ನಾನು ಯಾರನ್ನಾದರೂ ಹಿಡಿದು ಕೊಂಡು ದರದರ ಎಳೆದುಕೊಂಡು ಹೋಗಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ್ದೇನೆಯೇ, ಇವನು ನನ್ನ ತಮ್ಮನನ್ನೊ ಅಥವಾ ಅಣ್ಣನನ್ನೊ ಕೊಲೆ ಮಾಡಿದ್ದಾನೆಯೇ ಎಂದು. ಆಗ ಮ್ಯಾಜಿಸ್ಟ್ರೇಟ್‌ರವರು ತಕ್ಷಣ ವಿಚಾರ ಪ್ರಾರಂಭ ಮಾಡುತ್ತಾರೆಯೆ? ಬರೀ ಚರ್ಚೆಯಿಂದ ಯಾವುದು ತಪ್ಪು. ಯಾವುದು ಸತ್ಯ, ಯಾವುದು ಅಸತ್ಯವೆಂದು ಹುಡುವುದಕ್ಕೆ ಸಾಧ್ಯವೆ? ಅದಕ್ಕೆ ಏನಾದರೂ ಆಧಾರ ಬೇಕೋ ಬೇಡವೋ ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ನಾನು ತಪ್ಪುನನ್ನು ಕೇಳಿಕೊಳ್ಳುತ್ತೇನೆ...

ಶ್ರೀ ಬಿ. ಸ್ವಾಮಿರಾವ್.—ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿದೆ ಎಂದು ಎಲ್ಲಾ ಪತ್ರಿಕೆಗಳೂ ಹೇಳಿವೆ—

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಅವರು ಮುಗಿಸುತ್ತಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ...

ಅಧ್ಯಕ್ಷರು.—ಶ್ರೀ ಕಾನಡೆಯವರೇ, ಶ್ರೀ ರಾಮಕೃಷ್ಣ ಹೆಗಡೆಯವರು ಮುಗಿಸಿದಮೇಲೆ ನಾನು ನಿಮ್ಮನ್ನು ಕರೆಯುತ್ತೇನೆ, ಈಗ ಪ್ರತಿಯೊಂದು ಮಾತಿಗೂ ಕೂಡ ಮಧ್ಯಪ್ರವೇಶ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ನೀವು ಮಾತನಾಡುವಾಗಲೂ ಅಷ್ಟೆ. ನೀವು ಮಾತನಾಡುವಾಗಲೂ ಇನ್ನೊಬ್ಬರು ಮಧ್ಯಪ್ರವೇಶ ಮಾಡದಂತಹ ರೀತಿಯಲ್ಲಿ ನಾನು ನಿಯಂತ್ರಿಸುತ್ತೇನೆ. ಶ್ರೀ ಸ್ವಾಮಿರಾವ್ ನೀವು ಕುಳಿತುಕೊಳ್ಳಿ. ಶ್ರೀ ಚಿನ್ನಪ್ಪನವರೇ, ನಾನು ನಿಮ್ಮನ್ನು ಕರೆಯುತ್ತೇನೆ. ಈಗ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ.—ಅಧ್ಯಕ್ಷರೇ, ತಾವು ಒಪ್ಪಿಕೊಳ್ಳುವುದಾದರೆ...

ಅಧ್ಯಕ್ಷರು.—ಅವರು ಈಲ್ಡ್ ಆಗಿಲ್ಲ.

ಶ್ರೀ ಎ. ಕೃಷ್ಣಪ್ಪ.—ಅವರು ಖಂಡಿತ ಒಪ್ಪಿಕೊಳ್ಳುತ್ತಾರೆ. ಅವರು ಕೋರ್ಟಿನ ವಿಷಯ ಹೇಳುತ್ತಿದ್ದರು...

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಆಮೇಲೆ ನಿಮ್ಮನ್ನು ಕರೆಯುತ್ತೇನೆ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಅವರು ಕೋರ್ಟಿನ ವಿಷಯ ಹೇಳುತ್ತಿದ್ದರು. ಪೋಲೀಸ್ ಸ್ಟೇಷನ್‌ನಿಂದ ಕೋರ್ಟಿಗೆ ಎಫ್. ಐ. ಆರ್. ಕಳಿಸಿದಾಗ ಮರ್ಡರ್ ಮಾಡಿದರೂ ಕೂಡ..

ಅಧ್ಯಕ್ಷರು.—ನಾನು ನಿಮ್ಮನ್ನು ಕರೆಯುತ್ತೇನೆ ಎಂದು ಹೇಳುತ್ತಿದ್ದೇನೆ. ಪುನಃ ನೀವು...

(ಗೊಂದಲ)

ಅಧ್ಯಕ್ಷರು.—ಕೃಷ್ಣಪ್ಪನವರೇ, ನಾನು ನಿಮ್ಮನ್ನೂ ಕರೆಯುತ್ತೇನೆಂದು ಹೇಳುತ್ತಿದ್ದೇನೆ.

(ಗೊಂದಲ)

SRI P. C. SIDDANAGOUDAR — Sir,...

(Interruption)

MR. SPEAKER.— I am trying to restrain him. When the Leader of your Party is holding the floor, you cannot simultaneously get up I can understand the other side doing it. You should show minimum respect to the Leader. I am trying to regulate with some restraints.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ನಾನು ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ಇದು ಚರ್ಚೆಯಾಗಲೀ, ಸತ್ಯ ಹೊರಗಡೆ ಬರಬೇಕು. ಇವತ್ತೂ ಕೂಡ, ಈ ಮನೆಯ ಮುಂದೆ ಇದೇ ಮಾತನ್ನು ಪುನಃ ಹೇಳುತ್ತೇನೆ, ಇನ್ನೊಂದು ಸಾವಿರ ಸಲ ಹೇಳುತ್ತೇನೆ. ಈ ಟೆಲಿಫೋನ್ ಟ್ಯಾಪಿಂಗ್ ನನ್ನ ಆರ್ಡರ್‌ನಿಂದ ಆಯಿತು ಅಥವಾ ಅಪ್ರೂವಲ್‌ನಿಂದ ಆಯಿತು ಅಥವಾ ನನ ಪರ್ಮಿಷನ್‌ನಿಂದ ಆಯಿತು ಎಂದು ಗೊತ್ತಾದರೆ, ಚರ್ಚೆ ಬೇಡ, ಇವತ್ತು ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ, ಮತ್ತೆ ಇದಕ್ಕೆ ಚರ್ಚೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ರೀತಿ ಅವರು ಹೆದರಿಸಿ ಹೋಗುವುದಕ್ಕಾಗುವುದಿಲ್ಲ, ನಾವು ಚರ್ಚೆ ಮಾಡೋಣ...

(ಗೊಂದಲ)

ಅಧ್ಯಕ್ಷರು.— ಎಲ್ಲರೂ ಕುಳಿತುಕೊಳ್ಳಬೇಕು, ಇದರ ಬಗ್ಗೆ ಸಾಕಾದಷ್ಟು ಚರ್ಚೆಯಾಗಿದೆ...

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಈ ವಿಷಯದ ಚರ್ಚೆ ಪ್ರಾರಂಭ ಆಗುವುದಕ್ಕೆ ಮೊದಲೇ ಪೂರ್ವಭಾವಿಯಾಗಿ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ಎತ್ತಿರತಕ್ಕ ಚರ್ಚೆಗೆ ಅನುಮತಿ ಕೊಡಬೇಕೇ, ಬೇಡವೇ ಎನ್ನುವ ವಿಚಾರದಲ್ಲಿ...

(ಗೊಂದಲ)

ಡಾ. ಜೀವರಾಜ ಆಳ್ವ.— ನೀವು ಸ್ವಲ್ಪ ತಡವಾಗಿ ಬಂದಿದ್ದೀರಿ...

ಶ್ರೀ ಎಸ್. ಬಂಗಾರಪ್ಪ.— ಚರ್ಚೆಗೆ ಅನುಮತಿ ಕೊಡಬೇಕೇ ಬೇಡವೇ ಎನ್ನುವ ವಿಚಾರ ಅಲ್ಲ. ಆದರೆ ಈ ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲು ಕೆಲವು ದಾಖಲಾತಿಗಳನ್ನು ಇಡಬೇಕಾಗುತ್ತದೆ ಎನ್ನುವ ಒತ್ತಡವನ್ನು ಇಟ್ಟು, ಚರ್ಚೆ ಪ್ರಾರಂಭ ಮಾಡಿ ಎನ್ನುವ ವಿಷಯವನ್ನು ತಾವು ತಂದಿದ್ದೀರಿ. ದಾಖಲಾತಿಗಳು ಒಂದೋ, ಎರಡೋ, ಮೂರೋ ನಾಲ್ಕೋ ಎಷ್ಟಿವೆ ಎನ್ನುವುದು ಅನಂತರದ ಪ್ರಶ್ನೆ, ನಾನು ಆ ವಿವರಗಳಿಗೆ ಹೋಗುತ್ತಾ ಇಲ್ಲ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ, ದಾಖಲಾತಿಗಳನ್ನು ಇಟ್ಟು ನಾವು ಚರ್ಚೆ ಮಾಡಬೇಕೇ ಅಥವಾ ದಾಖಲಾತಿಗಳನ್ನು ಏನೂ ಇಡದೇ ಚರ್ಚೆ ಪ್ರಾರಂಭ ಮಾಡಬೇಕೇ ಎನ್ನತಕ್ಕಂಥ ವಿಚಾರ ಮಾತ್ರ ಮಾನ್ಯ ಸಭಾಧ್ಯಕ್ಷರ ಮುಂದೆ ಇದೆ. ಇಲ್ಲಿ ತಮ್ಮ ಅಭಿಪ್ರಾಯಕ್ಕೆ ಈ ವಿಷಯವನ್ನು ಇಟ್ಟು ನಾವು...

ಶ್ರೀ ಡಿ. ಬಿ. ಚಂದ್ರೇಗೌಡ.— ನೋಟೀಸಿನಲ್ಲಿ ಏನು ರೆಫರ್ ಮಾಡಿದೆ, ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳು, ಬೇರೆ ಅಲ್ಲ,

ಶ್ರೀ ಎಸ್. ಬಂಗಾರಪ್ಪ.— ತಾವೂ ಓದಿದ್ದೀರಿ, ಮಾನ್ಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗಡೆಯವರೂ ಓದಿದ್ದಾರೆ. ವಿಷಯಗಳನ್ನು ನಾವೂ ತಿಳಿದುಕೊಂಡಿದ್ದೇವೆ. ನೋಟೀಸಿನಲ್ಲಿ ಏನು ಪ್ರಸ್ತಾಪವಾಗಿದೆ, ಕೊನೆಯಪಕ್ಷ ಆ ದಾಖಲಾತಿಗಳನ್ನಾದರೂ ಇಟ್ಟು, ಚರ್ಚೆ ಮಾಡೋಣ ಎನ್ನುವುದು ತಮ್ಮ ಒತ್ತಡ.

೧.೩೦ ಪಿ.ಎಂ.

ಮಾನ್ಯ ಸಭಾಧ್ಯಕ್ಷರೇ, ಈ ವಿಚಾರದಲ್ಲಿ ನಾವು ಅನೇಕಸಾರಿ, ಹಿಂದೂ ಕೂಡಾ ಬೇಕಾದಷ್ಟುಸಾರಿ ಬೇರೆ ಬೇರೆ ರೂಪದಲ್ಲಿ ಚರ್ಚೆ ಇಂತಹ ಸಂದರ್ಭದಲ್ಲಿ ಬಂದಾಗ ನಾವು ವೃತ್ತಪತ್ರಿಕೆಗಳಲ್ಲಿ ಬಂದಿರ ತಕ್ಕಂಥ ಕೆಲವು ವಿಚಾರಗಳನ್ನು ನಮ್ಮ ನೋಟೀಸ್‌ನಲ್ಲಿ ನಮೂದು ಮಾಡಿ ನೋಟೀಸ್ ಕೊಡುತ್ತೇವೆ ತಮ್ಮ ಒಪ್ಪಿಗೆಗೋಸ್ಕರ ಕೊಡುತ್ತೇವೆ. ಕೆಲವು ಸಾರಿ ಹಿಂದೆ ಹೇಳಿರತಕ್ಕಂಥ ಪ್ರೊಸೀಡಿಂಗ್ಸ್. ಏನಾದರೂ ಈ ಸದನದಲ್ಲಿದ್ದರೆ ಅವುಗಳನ್ನೂ ಕೂಡ ನಮೂದು ಮಾಡಿ ನಾವು ನಮ್ಮ ನೋಟೀಸ್‌ನ್ನು ಕೊಡುತ್ತೇವೆ. ಅಥವಾ ಬೇರೆ ಯಾವುದಾದರೂ ದಾಖಲಾತಿಗಳು ಇದ್ದರೆ ಅದನ್ನು ನಮೂದು ಮಾಡಿ ಕೊಡುತ್ತೇವೆ. ದಾಖಲಾತಿಗಳು ಏನೂ ಇಲ್ಲದೇ ನಾವು ತಿಳಿದುಕೊಂಡಿರತಕ್ಕಂಥ ವಿಷಯಗಳ ಆಧಾರದ ಮೇಲೆ ಕೆಲವೊಮ್ಮೆ ನಾವು ನೋಟೀಸ್‌ನ್ನು ತಮ್ಮ ಒಪ್ಪಿಗೆಗಾಗಿ ಕೊಡತಕ್ಕಂಥ ಒಂದು ಪರಿಪಾಠವನ್ನು ನಾವು ಇಟ್ಟುಕೊಂಡು ಬಂದಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ.— ಅವರೂ ರೆಫರ್ ಮಾಡಿರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ದೇಶಪಾಂಡೆಯವರೆ, ಅದೇ ವಿಚಾರಕ್ಕೆ ಬರುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ತಮ್ಮ ಸ್ಥಾನದಲ್ಲಿ ಹಿಂದೆ ಕುಳಿತಿದ್ದಂಥವರು ಅನೇಕ ಸಾರಿ ಹೇಳಿದಂಥ ಉದಾಹರಣೆಗಳು ಇಲ್ಲಿ ಇದ್ದಾವೆ. ದಾಖಲಾತಿಗಳನ್ನು ಇಟ್ಟೂ ಕೂಡಾ ಯಾರು ನೋಟೀಸ್ ಕೊಡುತ್ತಾರೆ, ದಾಖಲಾತಿಗಳನ್ನು ಕೊಡುವುದು ಬಿಡುವುದು ಅವರಿಗೆ ಬಿಟ್ಟ ವಿಚಾರ, ಅಥವಾ ತಮ್ಮ ಒತ್ತಡ ಬರಲಿ ಬಿಡಲಿ, ಕೆಲವೊಮ್ಮೆ ಎಕ್ಸ್‌ಪ್ಲನೇಟರಿ ನೋಟ್ ಎಂಬ ವಿಚಾರದಲ್ಲಿ ಹೇಳತಕ್ಕಂಥಾದ್ದು ರೂಲ್ ೬೮ರಲ್ಲಿದೆ. ಹಾಗೆ ಕೇಳಿದಾಗ ಕೊಡಬೇಕಾದರೆ ಅವರಾಗಿಯೇ ಕೊಡಬಹುದು ಅಥವಾ ತಾವು ತಿಳಿಸಿದಾಗ ಆದರೂ ಕೊಡಬಹುದು ಎಂಬ ವಿಚಾರ ಇದೆ. ಉದಾಹರಣೆಗೆ. ಯಾವುದೇ ದಾಖಲಾತಿಗಳನ್ನು ತಾವು ಕೇಳದೇ ಇರಬಹುದು ಅಥವಾ ಸದಸ್ಯರು ಕೊಡದೇ ಇರಬಹುದು. ಈ ರೀತಿ ವಿಷಯದ ಪ್ರಸ್ತಾಪ ಇದ್ದಾಗ ನಿಯಮಾವಳಿಗಳ ಪ್ರಕಾರ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೇ ಎಂಬುದು ಮಾತ್ರ ನಮ್ಮ ಮುಂದೆ ಇರತಕ್ಕಂಥ ವಿಚಾರ ಏಕೆಂದರೆ, ದಾಖಲಾತಿಗಳು ನೋಟೀಸ್‌ನಲ್ಲಿ ಯಾವುದೂ ಇಲ್ಲ. ಈಗ ಇಟ್ಟಿಲ್ಲ ಎಂಬ ದೃಷ್ಟಿಯಿಂದ...

ಶ್ರೀ ಕೆ. ಹೆಚ್. ರಂಗನಾಥ್.— ಎಕ್ಸ್‌ಪ್ಲನೇಟರಿ ನೋಟ್ ಇದೆ. ಅದನ್ನು ತಾವು ನೋಡಿದ್ದೀರಿ, ಈಗ ರೂಲ್ ೬೮ ಪ್ರಕಾರ...

ಶ್ರೀ ಎಸ್. ಬಂಗಾರಪ್ಪ.— ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಯಾವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅಲ್ಲಿನ ವಿವರಗಳು ಎಷ್ಟು ಮಾನ್ಯ ಸಭಾಧ್ಯಕ್ಷರ ಗಮನದ ವ್ಯಾಪ್ತಿಯಲ್ಲಿ ಬಂದಿವೆ. ಆ ವಿಚಾರಗಳ ಮೇಲೆಯೇ ಮಾನ್ಯ ಸಭಾಧ್ಯಕ್ಷರು ತೀರ್ಮಾನ ಮಾಡತಕ್ಕಂಥಾದ್ದು. ಉದಾಹರಣೆಗೆ ಸಭಾಧ್ಯಕ್ಷರ ಅಭಿಪ್ರಾಯದ ಪ್ರಕಾರ ನೋಟೀಸ್ ನೋಡಿದಮೇಲೆ, ಎಕ್ಸ್‌ಪ್ಲನೇಟರಿ ನೋಟ್‌ನ್ನು ಕೂಡ ನೋಡಿದ ಮೇಲೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ದಾಖಲಾತಿ ಬೇಕೇ ಬೇಕಾಗುತ್ತದೆ, ಎನ್ನತಕ್ಕಂಥ ಮೂಲಭೂತ ಅನಿಸಿಕೆ ತಮ್ಮ ಮನಸ್ಸಿನಲ್ಲಿ ಬಂದಿದ್ದರೆ ಅದಕ್ಕೆ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಒಂದು ಆದೇಶವನ್ನು ಮಾನ್ಯ ಸದಸ್ಯರಿಗೆ ಕೊಡತಕ್ಕಂಥ ವಿಚಾರ ಅದು ತಮಗೆ ಬಿಟ್ಟಿರ ತಕ್ಕಂಥ ಒಂದು ಸಂದರ್ಭ. ಮತ್ತೊಂದು ವಿಚಾರ...

SRI M. VEERAPPA MOILY.— In support of what the Hon. Minister said Rule 68, when it is read, that itself makes it very clear It does not contemplate any document. The Hon. Speaker has decided to take up this matter under Rule 68. Rule 68 reads:

> "Any member desirous of raising discussion on a matter of urgent public importance may give notice in writing to the Secretary specifying clearly and precisely the matter to be raised:"

There are two provisos. One is:

> "Provided that the notice shall be accompanied by an explanatory note stating reasons for raising a discussion on the matter in question :

So the question of producing document under Rule 68 does not arise.

The second proviso is:

> "Provided further that the notice shall be supported by signature of at least two other members.."

So Rule 68 has been clearly complied with.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ತಾವು ಅಲೋ ಮಾಡಿರುತ್ತೀರಿ. ಈಗ ಆ ಪ್ರಶ್ನೆ ಬರುವುದಿಲ್ಲ. ತಾವು ಎಲ್ಲಾ ಗೊತ್ತಿದ್ದೇ ಮಾಡಿರುತ್ತೀರಿ. Whatever they are demanding is not fair. ಈಗ ಅದಕ್ಕೆ ಆರ್ಗ್ಯುಮೆಂಟ್ ಬೇಕಾಗಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.— ಸ್ವಾಮಿ, ಈ ಸ್ಟೇಜ್ ಆಗಿ, ತಾವು ಈ ಸಭೆಗೆ ತಮ್ಮ ಕನ್ಸಿಡರ್ಡ್ ಒಪೀನಿಯನ್ ಕೊಟ್ಟು ಯಾವ ದೃಷ್ಟಿಯಿಂದ ಪ್ರಮುಖ ಎಂದು ಪ್ರಸ್ತಾಪ ಮಾಡಿದ್ದೀರಿ. ಅದು ಆದಮೇಲೆ ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಬಂದು, ಈ ದಿವಸ ಅಜೆಂಡಾದಲ್ಲಿ ನಮೂದು ಆಗಿದೆ. It is before the House for discussion. We are at that stage. ಆದುದರಿಂದ ಮತ್ತೆ ಹಿಂದಕ್ಕೆ ಹೋಗತಕ್ಕಂಥದ್ದು ಎವಿಡೆನ್ ಪ್ರೂಫ್ಸ್ ಬೇಕಾಗಿಲ್ಲ. ಅವರು ಭಾಷಣ ಮಾಡುವಾಗ ಮಾತನಾಡುವಾಗ ತಮ್ಮ ಗಮನಕ್ಕೆ ತಂದು ಅವರು ಕೇಳಿದಮೇಲೆ ಇದೆಲ್ಲಾ ಸರಿಯಿಲ್ಲ ಎಂದು ಹೇಳಿದರೆ ನೀವು ಏನೂ ಕೇಳಬೇಕಾದುದು ಇಲ್ಲ. ಏನೂ ಬೇಕಾಗಿಲ್ಲ. ೬೯–೭೦ರ ಪ್ರಕಾರ separate chapter ನಮೂದಾಗಿರತಕ್ಕಂಥಾದ್ದು, Because this is a separate chapter for a matter of public importance. The next chapter is different.

ಆದ್ದರಿಂದ ಆ ಪ್ರಶ್ನೆ ಈ ಎವಿಡೆನ್ಸ್ ಬೇಕೇ ಬೇಡವೇ ಯಾವ ಡಾಕುಮೆಂಟ್ಸ್ ಏನು ಎನ್ನುವುದನ್ನು ತಾವು ಅವರನ್ನು ಕೇಳಿದ ಮೇಲೆ ಮಾನ್ಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗಡೆಯವರು ಕೇಳಿದ ಮೇಲೆ, ಮಾನ್ಯ ಮುಖ್ಯ ಮಂತ್ರಿಗಳು ಕೇಳಿದ ಮೇಲೆ ತಮಗೆ ಅವಶ್ಯಕತೆ ಇದ್ದರೆ ತಾವು ಕೇಳಬಹುದು ಇಲ್ಲದಿದ್ದರೆ ತಾವೇ ಒಂದು ತೀರ್ಮಾನ ತೆಗೆದುಕೊಳ್ಳಬಹುದು. ಆದ್ದರಿಂದ ಇದನ್ನು ದಾಖಲಾತಿ ಇದ್ದರೆ ಮಾತ್ರ ನಾವು ಡಿಸ್‌ಕರ್‌ಷನ್ ಮಾಡಬೇಕು ಎಂದು ಹೇಳುವ ವಾದ ಏನು ಇದೆ ಅದು ಹುರುಳಿಲ್ಲದ ವಾದ. ಅದು ಅನವಶ್ಯಕ ಎಂದು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮೊಯ್ಲಿಯವರನ್ನು ಅಭಿನಂದಿಸುತ್ತೇನೆ. ನಾನು ಸಹ ಅದೇ ಪ್ರಾವಿಜನ್‌ನನ್ನೆ ಹೇಳಬೇಕೆಂದು ಇದ್ದೆ. ಈಗ ಮತ್ತೊಂದು ವಿಚಾರ. ಉದಾಹರಣೆಗೆ ನೋಟಿಸ್ ಕೊಟ್ಟ ಮೇಲೆ ಅದರಲ್ಲಿ ಎರಡು ಪ್ರಾವಿಸೊ ಇದೆ. ಒಂದು ಎಕ್ಸ್‌ಪ್ಲನೇಟರಿ ನೋಟನ್ನು ತಾವು ಕೊಡಬೇಕೆಂದು ಕೇಳಿದಾಗ ಕೊಟ್ಟಿದಾಗಿದೆ. ಮತ್ತೊಂದು ಇಬ್ಬರು ಮಾನ್ಯ ಸದಸ್ಯರು ಅದಕ್ಕೆ ರುಜು ಹಾಕಬೇಕೆಂದು ಇದೆ. ಅದನ್ನು ಸಹ ಮಾಡಿದ್ದಾರೆ. These two provisos are fully complied with ಉದಾಹರಣೆಗೆ ನೋಟಿಸ್ ಕೊಟ್ಟು ಆದ ಮೇಲೆ ಯಾವುದೇ ಸ್ಟೇಜ್ ಇರಬಹುದು. ಇವತ್ತು ಅಜೆಂಡಾದಲ್ಲಿ ಆ ವಿಷಯ ಬಂದಿದೆ. Now that matter is before this august House. ಯಾವುದೇ ಸ್ಟೇಜ್‌ನಲ್ಲಿ ಯಾವುದೇ ಒಂದು ವಿಷಯ ಅಂದರೆ ಈ ಸದನದ ಮಾನ್ಯ ಸದಸ್ಯರು ಇರಬಹುದು ವಿರೋಧಪಕ್ಷದವರು ಆಗಬೇಕೆಂದು ಇಲ್ಲ ಇಂತಹವರೇ ಆಗಬೇಕೆಂದು ಏನೂ ಇಲ್ಲ. ಸತ್ಯಾಸತ್ಯವನ್ನು ಅರಿಯಲು ಯಾರು ಬೇಕಾದರೂ ಮಾತನಾಡಬಹುದು. Whenever a reference is made to certain documentary evidence, ಅಥವಾ ಅದು ಇಲ್ಲದಿದ್ದಾಗಲೂ ಕೂಡ ಯಾರಾದರೂ ಡಿಮ್ಯಾಂಡ್ ಮಾಡಿದರೆ ಆ ಕಾಲದಲ್ಲಿ ಅಂತಹ ಡಾಕ್ಯುಮೆಂಟ್‌ನ್ನು ಇಡಬೇಕಾಗುತ್ತದೆ ಎನ್ನತಕ್ಕಂಥ ವಿಚಾರ ನಿಯಮ ೬೮ರಲ್ಲಿ ಏನಾದರೂ ಇದ್ದಿದ್ದರೆ ನಿಜವಾಗಿ ನೀವು ಹೇಳತಕ್ಕಂಥಾದ್ದುದರಲ್ಲಿ ಬಹಳ ಅರ್ಥ ಇದೆ. ಎಂಬ ಅಭಿಪ್ರಾಯವನ್ನು ನಾನಾದರೂ ಒಪ್ಪಿಕೊಳ್ಳುತ್ತಿದ್ದೆ. ಆದರೆ ನಿಯಮಾವಳಿ ೬೮ ಅನ್ನು ಓದಿದಾಗ ಯಾವುದೇ ಸಂದರ್ಭದಲ್ಲಿ ಡಾಕ್ಯುಮೆಂಟ್ಸ್ ಇಡಬೇಕೆನ್ನುವುದು ಇಲ್ಲವೇ ಇಲ್ಲ. ಮಾನ್ಯ ಅಧ್ಯಕ್ಷರು ತೀರ್ಮಾನ ಮಾಡಿದ್ದಾರೆ. ನಿಜ ಹೇಳಬೇಕಾದರೆ, ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಸೇರಿದಾಗ ಅಲ್ಲಿ ವಿರೋಧಪಕ್ಷದ ನಾಯಕರು ಅಥವಾ ಅವರ ಪ್ರತಿನಿಧಿಗಳು ಯಾರಿದ್ದರು ಅವರು ಡಿಮ್ಯಾಂಡ್ ಮಾಡುವುದಕ್ಕೂ ಕೂಡ ಸಾಧ್ಯ ಇತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ನಾವು ಡಿಮ್ಯಾಂಡ್ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.— ಒಂದು ವೇಳೆ ಮಾಡಿದ್ದರೆ ಅದು ಬಿ.ಎ.ಸಿ.ಗೆ ಬಿಟ್ಟಿರತಕ್ಕಂಥ ವಿಚಾರ ಆಯಿತು. ಮತ್ತು ಮಾನ್ಯ ಸಭಾಧ್ಯಕ್ಷರಿಗೆ ಬಿಟ್ಟಿರತಕ್ಕಂಥ ವಿಚಾರ ಆಯಿತು. ಈ ಎಲ್ಲಾ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡು even without the production of any kind of document ಇದನ್ನು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ ಎನ್ನತಕ್ಕಂಥ ದೃಷ್ಟಿಯಿಂದ ಮಾನ್ಯ ಸಭಾಧ್ಯಕ್ಷರು ಅದನ್ನು ತೀರ್ಮಾನ ಮಾಡಿ ಈ ದಿವಸ ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿಸಿ ನಮಗೆಲ್ಲಾ ತಿಳಿಸಿದ್ದು ಆಗಿಹೋಗಿದೆ. ಇದು ಒಂದು ಭಾಗ. ಈಗ ಮಾನ್ಯ ಸಭಾಧ್ಯಕ್ಷರೇ ನನ್ನ ವಿನಂತಿ ಏನೆಂದರೆ, ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಮತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರಾದಿಯಾಗಿ ಈ ವಿಚಾರವನ್ನು ಒಪ್ಪಿದರೆ ಬಹಳ ಒಳ್ಳೆಯದು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಈಗ ನಾವು

ಚರ್ಚೆಯನ್ನು ಯಾವುದೇ ದಾಖಲೆಗಳು ಇಲ್ಲದೆ ಪ್ರಾರಂಭ ಮಾಡಿದರೂ ಕೂಡ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದಹಾಗೆ ಯಾವ ಸಂದರ್ಭದಲ್ಲಾದರೂ ಡಿವ್ಯಾಂಡ್ ಮಾಡತಕ್ಕಂಥ ಹಕ್ಕು ಇದೆ. ಮಾನ್ಯ ಸದಸ್ಯರು ಮಾತನಾಡಬೇಕಾದರೂ ಚರ್ಚೆ ಪ್ರಾರಂಭ ಆದ ಮೇಲೆ ನೀವು ಯಾವ ಸಂದರ್ಭದಲ್ಲಾದರೂ ಡಿವ್ಯಾಂಡ್ ಮಾಡಿ ಕೇಳತಕ್ಕಂಥಾದ್ದು ಅದಕ್ಕೆ ಸರ್ಕಾರದಿಂದ ಏನು ಉತ್ತರ ಬರುತ್ತದೆ, ತದನಂತರ ಮಾನ್ಯ ಸಭಾಧ್ಯಕ್ಷರು ಏನು ತೀರ್ಮಾನ ಏನು ಹೇಳುತ್ತಾರೆ ಎನ್ನತಕ್ಕದ್ದು ಅವರಿಗೆ ಬಿಟ್ಟಿದ್ದು ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಚರ್ಚೆ ಪ್ರಾರಂಭ ಮಾಡೋಣ. ಅಮೇಲೆ ಮತ್ತೊಂದು ವಿಚಾರವೇನೆಂದರೆ, ಶ್ರೀಮಾನ್ ರಾಮಕೃಷ್ಣ ಹೆಗಡೆ ಯವರು ಒಂದು ಮಾತನ್ನು ಹೇಳಿದರು. ಬರೀ ಚರ್ಚೆಯಿಂದಲೇ ನಾವು ಸತ್ಯವನ್ನು ಹುಡುಕು ವುದಕ್ಕೆ ಆಗುವುದಿಲ್ಲ. ಮ್ಯಾಜಿಸ್ಟ್ರೇಟರ್ ಮುಂದೆ ಮರ್ಡರ್ ಮಾಡಿದವನನ್ನು ಕರೆದುಕೊಂಡು ಹೋಗಿ ನಿಲ್ಲಿಸಿದ ತಕ್ಷಣ ಅವನನ್ನು ಗಲ್ಲಿಗೆ ಹಾಕುವುದಕ್ಕೆ ಆಗುವುದಿಲ್ಲ ಎಂದರು. ಪ್ರೊಸೀಜರಲ್ ಮ್ಯಾಟರ್ಸ್ ಮತ್ತೊಂದು ಮಾಗದೊಂದು ಹೇಳಿ ಅಲ್ಲಿ ನಡೆಯತಕ್ಕಂಥ ವಿಧಾನಗಳೇ ಬೇರೆ. ಅದನ್ನು ಮಾನ್ಯ ಸದಸ್ಯರಾದ ರಾಮಕೃಷ್ಣ ಹೆಗಡೆಯವರು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಈ ಸದನಕ್ಕೆ ಸತ್ಯವನ್ನು ಹುಡುಕುವುದಕ್ಕೆ ಆಗುವುದಿಲ್ಲ. ಈ ಪ್ರಜಾಪ್ರಭುತ್ವದಲ್ಲಿ ಈ ಸದನಕ್ಕೆ ಎಷ್ಟು ಹಕ್ಕು ಇದೆ ಎಂದರೆ ಶಿಕ್ಷೆ ಕೊಡತಕ್ಕಂಥ ಹಕ್ಕು ಕೂಡ ಇದೆ ಎನ್ನತಕ್ಕಂಥ ವಿಚಾರವನ್ನು ಮರೆಯಬಾರದು ಚರ್ಚೆಯಿಂದ ಸತ್ಯವನ್ನು ಹುಡುಕುವುದಕ್ಕೆ ಆಗುತ್ತದೇನು ಎಂದು ಅವರು ಹೇಳಿದರು. ಸತ್ಯವನ್ನು ಹುಡುಕುವುದು ಅಷ್ಟೇ ಅಲ್ಲ, ಸತ್ಯವನ್ನು ಹುಡುಕಿ ಶಿಕ್ಷೆ ಕೊಟ್ಟಿರತಕ್ಕಂಥ ಅನೇಕ ಘಟನೆಗಳು ಈ ದೇಶದಲ್ಲಿ ಇವೆ, ಬೇಕಾದಷ್ಟು ಇವೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳಿದ ಮಾತನ್ನು ತಾವು ಬಹುಶಃ ಕೇಳಿಲ್ಲವೆಂದು ಕಾಣುತ್ತದೆ. ತಮ್ಮ ಕಿವಿ ಈ ಕಡೆ ಇಟ್ಟುಕೊಂಡಿಲ್ಲ ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಈಗ ಟ್ವಿಸ್ಟ್ ಮಾಡಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಏನು ಹೇಳಿದೆ ಅಂದರೆ ಕೇವಲ ಚರ್ಚೆಯಿಂದಲೇ ಸತ್ಯವನ್ನು ಹುಡುಕುವುದಕ್ಕೆ ಸಾಧ್ಯವಿಲ್ಲ. ಚರ್ಚೆ ಅಂದರೆ, ಆರ್ಗ್ಯುಮೆಂಟ್ಸ್ ನಾವು ಮಾಡುತ್ತೇವೆ, ನೀವು ಮಾಡುತ್ತೀರಿ. ನೀವು ಏನು ರೆಕಾರ್ಡ್ ಇದೆಯೋ ಅದನ್ನು ತಂದ ಮೇಲೆ ಅದರ ಮೇಲೆ ಚರ್ಚೆ ಮಾಡಿದರೆ ಆಗ ಸತ್ಯ ಏನು ಎಂದು ಪ್ರಪಂಚಕ್ಕೆ ಗೊತ್ತಿದೆ. ಇಲ್ಲದೇ ಇದ್ದರೆ ನೀವು ನಿಮ್ಮ ಕಲ್ಪನೆಯಿಂದ ಮಾತನಾಡುವುದು, ನಾವು ನಮ್ಮ ಕಲ್ಪನೆಯಿಂದ ಮಾತನಾಡುವುದು, ಅದರಿಂದ ಸತ್ಯ ಹೊರಗಡೆ ಬರುವುದಿಲ್ಲ. ಸತ್ಯ ಶೋಧನೆಯಾಗಬೇಕಾದರೆ ರೆಕಾರ್ಡನ್ನು ಇಡಿ.
ರೆಕಾರ್ಡನ್ನು ನೀವು ಇಡದಿದ್ದರೆ ನಿಮ್ಮ ಉದ್ದೇಶ ಬೇರೆ ಎಂದು ಜನ ತಿಳಿದುಕೊಳ್ಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಈ ಸದನದ ಮೂಲ ಭೂತ ಹಕ್ಕುಗಳ ವಿಚಾರಧಾರೆಗಳಿಗೆ ಇಟ್ಟುಕೊಂಡಿರತಕ್ಕ ಕಲ್ಪನೆ ಬಹಳ ಪ್ರತ್ಯೇಕವಾಗಿದೆಯೆಂದು ನಾನು ಭಾವಿಸುತ್ತೇನೆ. ನಾವು ಇಲ್ಲಿ ಏನು ಚರ್ಚೆ ಮಾಡುತ್ತೇವೆಯೋ ಆ ಚರ್ಚೆಯಿಂದ ಸತ್ಯವನ್ನು ಹುಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ವಿಚಾರವನ್ನು ಅವರು ಏನು ಇಟ್ಟುಕೊಂಡಿದ್ದಾರೆ ಅದನ್ನು ಮೂಲಭೂತವಾಗಿ ಬದಲಾಯಿಸಿದರೆ ಅವರಿಗೇ ಒಳ್ಳೆಯದು ಎನ್ನತಕ್ಕಂಥ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ದೇಶಪಾಂಡೆಯವರೆ, ಅವರು ನಿಮಗೆ ಅವಕಾಶ ಕೊಟ್ಟರೆ ಮಾತನಾಡಿ ಇಲ್ಲದಿದ್ದರೆ ನಿಮ್ಮನ್ನು ಕರೆದಾಗ ನೀವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಮೆರಿಟ್ಸ್ ಡೀಮೆರಿಟ್ಸ್ ಬಗ್ಗೆ ಮಾತನಾಡುತ್ತಿಲ್ಲ. ಏನು ಮಾನ್ಯ ಸದಸ್ಯರು ಉದಾಹರಣೆ ಕೊಟ್ಟು ಹೇಳಿದ್ದಾರಲ್ಲ ಕಲ್ಪನೆ ಆಧಾರದ ಮೇಲೆ ಚರ್ಚೆ ಮಾಡುತ್ತಿದ್ದೇವೆ ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ. ಮೂಲಭೂತವಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆ ಯವರು ಈ ಸದನದಲ್ಲಿರತಕ್ಕಂಥ ಸಾರ್ವಭೌಮತ್ವದ ಬಗ್ಗೆ ಅವರಿಗೆ ಪ್ರತ್ಯೇಕ ವಾಗಿರತಕ್ಕಂಥ ಭಾವನೆಯನ್ನು ಬಿಡುವುದು ಒಳಿತು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಏಕೆಂದರೆ, ಕಲ್ಪನೆಗಳ ಆಧಾರದ ಮೇಲೆ ಚರ್ಚೆ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಅವರು ಪದೇ ಪದೇ ಹೇಳಿರ ತಕ್ಕಂಥಾದ್ದು ದಾಖಲೆಯಲ್ಲಿ ಇದೆ. ಅದು ಸತ್ಯದಿಂದ ಬಹಳ ದೂರವಾಗಿರತಕ್ಕಂಥ ವಿಚಾರ.

ಕೆಲವೊಮ್ಮೆ ಚರ್ಚೆ ಮಾಡಬೇಕಾದರೆ ಕಲ್ಪನಾ ಲೋಕಕ್ಕೆ ನಮ್ಮ ಚರ್ಚೆ ಎಳೆದುಕೊಂಡು ಹೋಗತಕ್ಕಂಥ ಸಂದರ್ಭಗಳು ಬರಬಹುದೆ ವಿನಃ ಮಾನ್ಯ ಸಿಂಧ್ಯಾರವರಿಗೆ ಗೊತ್ತಿದ್ದ ಹಾಗೆ. ನಾವು ಮಾತನಾಡಿದಷ್ಟೂ ಕೂಡ ಕಲ್ಪನೆ ಎನ್ನತಕ್ಕಂಥ ಮಾತನ್ನು ಆಡಬಾರದು. ಸತ್ಯ ಮತ್ತು ಅಸತ್ಯತೆಯನ್ನು ವಿಮರ್ಶೆ ಮಾಡತಕ್ಕಂಥ ಸಂದರ್ಭದಲ್ಲಿ ಕಲ್ಪನೆಯನ್ನು ಆಧಾರವಾಗಿಟ್ಟರೆ ಈ ಸದನಕ್ಕೆ ಐದು ಪೈಸೆ ಬೆಲೆ ಬರುವುದಿಲ್ಲ ಅನ್ನತಕ್ಕ ಅಭಿಪ್ರಾಯವನ್ನು ನಾಳೆ ಜನ ತೀರ್ಮಾನ ಮಾಡಿಯಾರು, ರಾಜ್ಯಾಂಗವನ್ನು ರಚನೆ ಮಾಡಬೇಕಾದರೆ. ಕಲ್ಪನೆ ಆಧಾರದ ಮೇಲೆ ಮಾಡಿಲ್ಲ. ಡಾ. ಅಂಬೇಡ್ಕರ್ ಅವರಾಗಲೀ, ಕಾನ್ಸಿಟ್ಯೂಷನ್ ಅಸೆಂಬ್ಲಿ ಆಗಿರಬಹುದು, ರಾಜ್ಯಾಂಗ ರಚನೆಕಾರರು ಕಲ್ಪನೆ ಆಧಾರದ ಮೇಲೆ ಮಾಡಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಿಷ್ಟೇ ಇಲ್ಲಿ ಕಲ್ಪನೆಯಲ್ಲ ವಿಷಯಗಳ ಆಧಾರದ ಮೇಲೆ ಸತ್ಯ ಈ ರೀತಿ ಇದೆ ಎನ್ನತಕ್ಕಂಥ ಭಾವನೆ, ನಂಬಿಕೆ ಆಧಾರದ ಮೇಲೆ, ನಾವು ವಿಚಾರವನ್ನು ಇಲ್ಲಿ ಚರ್ಚೆಗೆ ಒಳಪಡಿಸಿ ಸತ್ಯವನ್ನು ಪರಿಶೀಲಿಸಿ, ಪತ್ತೆ ಹಚ್ಚಿ, ನಾವು ಅದರ ಮೇಲೆ ಅಂತಿಮ ತೀರ್ಮಾನ ಮಾಡತಕ್ಕಂಥ ಸ್ಪಷ್ಟವಾದ, ಸಂಪೂರ್ಣ ಅಧಿಕಾರ ಹೊಂದಿರತಕ್ಕದ್ದು ಇದೊಂದು ಜಾಗ. ಅಡಕ್ಯೋಸ್ಪರ ಈ ಸಾರ್ವಭೌಮತ್ವವನ್ನು ಕಲ್ಪನಾ ಲೋಕಕ್ಕೆ ತೆಗೆದುಕೊಂಡು ಹೋಗಿ ಇದನ್ನು ಬಲಿ ಕೊಡತಕ್ಕಂಥ ವ್ಯವಸ್ಥೆಯನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾಡಬಾರದು ಏಕೆಂದರೆ, ಅವರು ಸೀನಿಯರ್ ಮೆಂಬರ್-ಆಗಿದ್ದಾರೆ. ಅವರ ಬಗ್ಗೆ ನಾನು ಬಹಳ ಗೌರವವನ್ನು ಇಟ್ಟುಕೊಂಡಿದ್ದೇನೆ. ಆದರೆ ಸದನದ ಘನತೆ, ಗೌರವವನ್ನು ತೂಕವನ್ನು ತತ್‌ಕ್ಷಣ ಒಂದು ಮಾತಿನಲ್ಲಿ ಕಲ್ಪನೆ ಎಂದು ಹೇಳಿ ಚರ್ಚೆಯನ್ನು ಬಲಿ ಕೊಡತಕ್ಕಂಥಾದ್ದು ಒಳ್ಳೆಯದಲ್ಲ. ಅವರು ಇದನ್ನು ಬಿಟ್ಟರೆ ಬಹಳ ಒಳ್ಳೆಯ ದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು.—ಸಭಾನಾಯಕರು.

ಶ್ರೀ ವೀರೇಂದ್ರಪಾಟೀಲ್.—ಸನ್ಮಾನ್ಯ ಸಭಾಧ್ಯಕ್ಷರೇ, ಸುಮಾರು ಒಂದೂವರೆ ಗಂಟೆ ಮೇಲ್ಪಟ್ಟು ಚರ್ಚೆಗಿಂತ ಮೊದಲು ಪೀಠಿಕೆ ಮೇಲೆ ಚರ್ಚೆ ನಡೆಯುತ್ತಿದೆ, ಇನ್ನೂ ಚರ್ಚೆಯೇ ಪ್ರಾರಂಭವಾಗಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯಲ್ಲಿ ಎಲ್ಲಾ ಫೈಲ್ಸ್‌ನ್ನು ಇಟ್ಟಮೇಲೆ ಚರ್ಚೆ ಮಾಡಬೇಕೆನ್ನುವ ಧಾಟಿಯಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ಚರ್ಚೆ ಪ್ರಾರಂಭ ಮಾಡ ಬೇಕಾಗಿದ್ದರೆ ಸಂಬಂಧಪಟ್ಟ ದಾಖಲಾತಿಗಳನ್ನು ಸಭೆಯ ಮುಂದೆ ತರಬೇಕೆನ್ನುವ ರೀತಿಯಲ್ಲಿ ವಿರೋಧಪಕ್ಷದ ನಾಯಕರುಗಳೇನಾದರು ಮಾತನಾಡಿದ್ದಾರೆ. ಈ ಕಡೆಯಿಂದಲೂ ಅದರ ಬಗ್ಗೆ ಏನು ಹೇಳಬೇಕಾಗಿದೆಯೋ ಅದನ್ನು ಸಾಕಷ್ಟು ಹೇಳಿದ್ದಾರೆ. ಈಗ ನಾನು ನಿಂತಿದ್ದು ಏಕೆಂದರೆ, ಇದೇ ಚರ್ಚೆ ಮುಂದುವರಿಸಿದರೆ ದಿನ ಪೂರ್ತಿ ಇದೇ ಚರ್ಚೆ ಯಾಗುತ್ತದೆ. ಈಗ ಸಾಕಷ್ಟು ಚರ್ಚೆಯಾಗಿದೆ ಆದ್ದರಿಂದ ತಾವು ಇದರ ಬಗ್ಗೆ ರೂಲಿಂಗ್ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

SRI D.B. CHANDRE GOWDA.—I want to clarifiy the poisition.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ನಾವು ಕೇಳಿರತಕ್ಕಂಥಾದ್ದರ ಬಗ್ಗೆ. ಮಾನ್ಯ ಸಭಾ ನಾಯಕರಿಗೂ ಅನೇಕಹಿರಿಯ ಸದಸ್ಯರಿಗೂ ತಪ್ಪು ಕಲ್ಪನೆ ಬಂದ ಹಾಗೆ ಕಾಣುತ್ತದೆ. ನಾವು ಹೇಳಿರುವುದು ಏನೆಂದರೆ, ...ನೀವು ನೋಟೀಸ್‌ನಲ್ಲಿ ಏನು ರೆಫರ್ ಮಾಡಿದ್ದೀರಿ... ಮುಖ್ಯ ಕಾರ್ಯದರ್ಶಿಗಳು ಸಾಕ್ಷಿ ಹೇಳಿದ್ದಾರೆ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಡಾಕ್ಯುಮೆಂಟ್ಸ್ ಮೇಲೆ ಚರ್ಚೆ ಮಾಡಿ ಎಂದು ನಾವು ಮೊದಲು ಕೇಳಿರಲಿಲ್ಲ...

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇವೊತ್ತು ಬೆಳಿಗ್ಗೆ ತಾನೆ ಪ್ರೊಸೀಡಿಂಗ್ಸ್ ಬಗ್ಗೆ ಚರ್ಚೆ ಬಂತು. ನಾನು ಯಾವುದೂ ಹೇಳಿಕೆ ಕೊಟ್ಟಿದ್ದೆ ಎಂದು ನನ್ನ ವಿಚಾರವೂ ಬಂತು, ತಮ್ಮ ಕಚೇರಿಯಲ್ಲಿ ಇದರ ಬಗ್ಗೆ ಇರತಕ್ಕಂಥ ಒರಿಜನಲ್ ರಿಕಾರ್ಡ್ ನನ್ನ ಮುಂದೆ ಇದೆ. ಅವನ್ನು ತಾವು ಪರಾಂಬರಿಸಿದರೆ ಸ್ಪಷ್ಟವಾಗುತ್ತದೆ. ಒರಿಜಿನಲ್ ರಿಕಾರ್ಡ್ಸ್‌ನಲ್ಲಿ ಸ್ಪಷ್ಟವಾಗಿ ಇದೆ. ಅದನ್ನು ತಮ್ಮ ಮುಂದಿಡುತ್ತೇನೆ. ಪ್ರಿಂಟಿಂಗ್‌ನಲ್ಲಿ ತಪ್ಪಾಗಿರುವುದು ಗೊತ್ತಾಗುತ್ತದೆ. It is a printer's devil Because it will go to press for tomorrow. This mistake could be corrected.

ಆ ಪ್ರಕಾರ ಶ್ರೀ ಬೊಮ್ಮಾಯಿಯವರು ಹೇಳಿದ್ದುದ್ದು.—

ಶ್ರೀ ಎಸ್. ಆರ್. ಬೊಮ್ಮಾಯಿ.—ವೀರೇಂದ್ರ ಪಾಟೀಲ್‌ರವರು ಹೇಳಿದ್ದಾರಲ್ಲ? ನಮ್ಮ ಕಾಲದಲ್ಲಿ ಇದು ಇರಲಿಲ್ಲ ಎಂದು, ಅವಕ್ಕೆ ಈ ರೆಫರೆನ್ಸ್ ಕೊಟ್ಟಿದ್ದುದು.

ನಾನು ಅದಕ್ಕೆ ಉತ್ತರ ಕೊಟ್ಟಿದ್ದುದು ಹೀಗೆ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅವೊತ್ತು ರಾಜಕೀಯ ಪಕ್ಷಗಳ ನಾಯಕರ ಹೆಸರುಗಳನ್ನು ಪಟ್ಟಿ ಮಾಡಿ ಅವರು ಟೆಲಿಫೋನ್‌ಗಳನ್ನು ಟ್ಯಾಪ್ ಮಾಡಿ ಅಂತ ಹೇಳಿದ್ದಾರೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು?

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ತಮ್ಮ ಕಾಲದಲ್ಲಿ ಇರಲಿಲ್ಲ ಎಂದು ಹೇಳಿದರು. ಅದಕ್ಕಾಗಿಯೇ ಇದನ್ನು ಉದಾಹರಣೆಯಾಗಿ ಕೊಟ್ಟಿದ್ದೇನೆ.''

ಆದುದರಿಂದ ಇಷ್ಟು ಕರೆಕ್ಷನ್ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು — ಕಳುಹಿಸಿ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ.—ಪ್ರಿಂಟರ್ಸ್ ಡೆವಿಲ್ ಏನಿದೆ, ಈ ಪ್ರಶ್ನೆ ಕೇಳಿದ್ದೀರಾ? ಉತ್ತರ ಹೇಳಿದ್ದಾರಾ ಇತ್ಯಾದಿಯಾಗಿ. ಇವೊತ್ತಿನ ಚರ್ಚೆಯ ವಸ್ತು ಕೂಡ ಅದೇ ಏಕೆಂದರೆ, 'ಎ' ಪ್ರಶ್ನೆ ಯಾವುದು? 'ಸಿ' ಮತ್ತು 'ಡಿ' ಯಾವುದು? ಎಂಬ ಬಗ್ಗೆ ಯಾರಿಗೂ ಕೂಡ ಗೊತ್ತಿಲ್ಲ ಪ್ರಶ್ನೆ 'ಬಿ' ಮಾತ್ರ ಹಾಕಿಕೊಂಡು ಚರ್ಚೆಯಾಗುತ್ತಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರು ನೀವು ಹೇಳುತ್ತೀರಿ...

(ಗೊಂದಲ)

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ಇದರ ಬಗ್ಗೆ ತಾವುಗಳೆಲ್ಲರೂ ಹೇಳಬೇಕಾದುದನ್ನೆಲ್ಲ ಹೇಳಿದ್ದೀರಿ. ಶ್ರೀ ಜಯಚಂದ್ರರವರು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಈಗಾಗಲೇ ವ್ಯಾಪಕವಾಗಿ ಚರ್ಚೆಯಾಗಿದೆ. ಹಾಗೆ ಮಾತನಾಡತಕ್ಕಂಥ ಕಾಲದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು...

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರು ಕೆಲವು ಪ್ರಶ್ನೆಗಳನ್ನೇನು ಫೋರ್ಸ್ ಮಾಡಿದ್ದಾರೆ ಅದನ್ನು ಹೇಳುತ್ತೀರಾ?...ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರ ಆ ಬಗ್ಗೆ ಹೇಳಿ...

ಶ್ರೀ ಟಿ.ಬಿ. ಜಯಚಂದ್ರ.—ನನ್ನ ಪ್ರತಿಕ್ರಿಯೆ ಏನೂ ಇಲ್ಲ, ದಾಖಲಾತಿ ಇಲ್ಲದಿದ್ದರೂ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವೊತ್ತು ಚೀಫ್ ಸೆಕ್ರೆಟರಿ ಆಗಿರತಕ್ಕಂಥವರು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ಮುಂದೆ ಸ್ಟೇಟ್‌ಮೆಂಟ್ ಕೊಡಬೇಕಾದರೆ ಆಧಾರ ಇರಲೇಬೇಕು ಆಧಾರ ಇಲ್ಲದೆ ಕೊಡುವುದಕ್ಕೆ ಸಾಧ್ಯವಿಲ್ಲ ಹಾಗಿದ್ದರೆ ಅವರು ಯಾವ ಆಧಾರದ ಮೇಲೆ ಸ್ಟೇಟ್‌ಮೆಂಟ್ ಕೊಟ್ಟರು ಎಂಬ ವಿಚಾರ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ಹೇಳಿದ್ದಾರೆ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಸಭಾನಾಯಕರು ಹೇಳಿದ್ದಾರೆ ಈಗ ತೀರ್ಮಾನ ಕೊಡುವ ವಿಚಾರ ತಮ್ಮ ಹತ್ತಿರ ಇದೆ ಆದುದರಿಂದ ಸಭೆಯನ್ನು ಸ್ವಲ್ಪ ಸಮಯ ಮುಂದಕ್ಕೆ ಹಾಕಿ ತೀರ್ಪು ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಅಡ್ಡ ದಾರಿಗೆ ಬಂದಿದ್ದಾರೆ.

MR. SPEAKER.—I do not expect you to comment on everything Mr. Bangarappa said.

(ಗೊಂದಲ)

ಶ್ರೀ ಸಿ.ಬೈರೇಗೌಡ.—ಮಾನ್ಯ ಬಂಗಾರಪ್ಪನವರು ಅರ್ಧ ದಾರಿಗೆ ಬಂದಿದ್ದಾರೆ.ಮಂತ್ರಿ ವಿರೋಧ ಪಕ್ಷದ ನಾಯಕರು ಏನು ಮಾತನಾಡಿದ್ದಾರೆ. ಅಂದರೆ......

(ಗೊಂದಲ)

ಶ್ರೀ ಕರಿಯಣ್ಣ:— ಅಧ್ಯಕ್ಷರೇ, ಸಭಾನಾಯಕರು ಆಗಲೇ ಮಾತನಾಡಿದ್ದಾರೆ ಆದಾದ ಮೇಲೂ ಇವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಇದಕ್ಕೆ ಅಂತ್ಯವೇ ಇಲ್ಲದಹಾಗೆ ಆಗುತ್ತದೆ. ದಯವಿಟ್ಟು ಸಭಾನಾಯಕರು ಹೇಳಿದ ಪ್ರಕಾರ ರೂಲಿಂಗ್ ಕೊಡಿ. ಈಗಾಗಲೇ ಎರಡು ಗಂಟೆಯಾಯಿತು.

ಶ್ರೀ ಸಿ ಬೈರೇಗೌಡ.—ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಚರ್ಚೆ ಮೀನಿಂಗ್‌ಫುಲ್ಲಾಗಿರ ಬೇಕು ಎಂದು ಹೇಳಿ ಅರ್ಧ ದಾರಿಗೆ ಬಂದಿದ್ದಾರೆ. ಆದರ ಅರ್ಥವೇನೆಂದರೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಬೇಕಾದಂಥ ಅವಶ್ಯಕತೆಯಿದೆ ಎಂದು ಹೇಳಿದ್ದಾರೆ. ಅದಾದಮೇಲೆ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂದರೆ......

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್ ಈಗ ಸದನದ ಮುಂದಿರುವ ವಿಚಾರದಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಪ್ರಾಸ್ತಾವಿಕ ಸಂಶಯಗಳು ಮತ್ತು ಚರ್ಚೆ ನಡೆಯುವ ಚೌಕಟ್ಟನ್ನು ಸ್ಪೆಲೌಟ್ ಮಾಡಬೇಕೆಂದು ಮತ್ತು ಕೆಲವು ಮಾಹಿತಿಗಳು ದಾಖಲೆಗಳು ಅವಶ್ಯಕ ಎಂದು ಸಲಹೆ ಮಾಡಿದ್ದಾರೆ ಮತ್ತು ಆ ಸಲಹೆಗಳ ಬಗ್ಗೆ ಸದನದ ನಾನಾ ಭಾಗಗಳಿಂದ ಬಂದ ಸಲಹೆಗಳನ್ನು, ಪ್ರತಿ ಕ್ರಿಯೆಗಳನ್ನು ನಾನು ಗಮನಿಸಿದ್ದೇನೆ. ಈಗ ೧-೫೦ ಗಂಟೆಯಾಗಿದೆ ಸಭೆ ಮತ್ತೆ ಎರಡುಗಂಟೆ ಐವತ್ತು ನಿಮಿಷಕ್ಕೆ ಸೇರುತ್ತದೆ ಈಗ ಸಭೆಯನ್ನು ಮುಂದೂಡಲಾಗಿದೆ.

(ಸದನವು ಒಂದು ಗಂಟೆ ೫೦ ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ೨ ಗಂಟೆ ೫೦ ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

ಸದನವು ಮತ್ತೆ ೩-೦೮ಕ್ಕೆ ಸಮಾವೇಶಗೊಂಡಿತು

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

† ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರು, ಈ ದಿವಸದ ೬೮ನೇ ನಿಯಮದ ಸೂಚನೆ ಅಡಿಯಲ್ಲಿ, ಯಾವ ಚರ್ಚೆಗೆ ನಾನು ಒಪ್ಪಿಗೆ ಕೊಟ್ಟಿದ್ದೇನೆಯೋ, ಅದರ ಬಗ್ಗೆ ಕೆಲವು ವಿಚಾರಗಳನ್ನು ಪ್ರತಿಪಾದನೆ ಮಾಡಿದ್ದಾರೆ ಸದನದ ಎಲ್ಲಾ ಕಡೆಯ ಸಲಹೆಗಳನ್ನೂ, ಸೂಚನೆಗಳನ್ನೂ ನಾನು ಗಮನಿಸಿದ್ದೇನೆ. ನಮ್ಮ ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡೆವಳಿಕೆಯ ನಿಯಮಗಳಿಗನುಸಾರ, ನಿಯಮ ೬೮ ಕೇವಲ ಸೀಮಿತವಾದಂಥ ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಸದಸ್ಯರಿಗೆ ಆ ವಿಚಾರವನ್ನು ಚರ್ಚೆ ಮಾಡಲು ಅನುಕೂಲಕರವಾದಂಥ ಒಂದು ರೂಲ್.

ಮಾನ್ಯ ಸದಸ್ಯರು ಗಮನಿಸಬೇಕಾಗಿರುವ ವಿಚಾರ ಏನೆಂದರೆ, ಈ ಸೂಚನೆಯನ್ನು ಯಾವಬ್ಬ ಸದಸ್ಯರು ಮಾಡುವಾಗ ಆ ಸೂಚನೆಯೊಂದಿಗೆ ಆ ವಿಷಯದ ಸಂಬಂಧದಲ್ಲಿ ಚರ್ಚೆ ನಡೆಸಲು ಇರುವ ಕಾರಣಗಳನ್ನು ನಮೂದಿಸಿ ವಿವರಣಾತ್ಮಕವಾದ ಟಿಪ್ಪಣಿಯನ್ನು ಸಹ ಕಳುಹಿಸಬೇಕೆನ್ನುವ ನಿಬಂಧನೆ ಇದೆ. ನಾನು ಕನ್ನಡದಲ್ಲಿ ಹೇಳಲು ಪ್ರಯತ್ನ ಮಾಡುತ್ತಿದ್ದೇನೆ, ಆಗುತ್ತಿಲ್ಲ. ದಯವಿಟ್ಟು ಕ್ಷಮಿಸಬೇಕು

I would like to address myself to various issues which have been raised by the Hon' Leader of the Opposition, hon' Member Sri Ramakrishna Hegde and other distinguished Members of this House.

In order to understand and appreciate Rule 68, we will have to read Rule 69 also alongwith the two provisos which formed part of rule 69. The Rule 68 reads thus :

"Any Member desirous of raising discussion on a matter of urgent public importance may give notice in writing to the Secretary specifying clearly and precisely the matter to be raised :

Provided that the notice shall be accompanied by an explanatory note stating reasons for raising a discussion on the matter in question :

Provided further that the notice shall be supported by signatures of at least two other members.''

I am sure, the Hon. Leader of the Opposition will agree with me that this is something which the hon' Member gives notice under Rule 68 in order to convince the Speaker that the matter which he is trying to raise before the House is of public importance and there is an element of urgency also in that. Now, that Rule 69 reads thus :

''(1) If the Speaker is satisfied, after calling for such information from the member who had given notice and from the Minister as he may consider necessary, that the matter is urgent and is of sufficient importance to be raised in the House at an early date, he may admit the notice;''

Now, when I admit the Notice under Rule 68, I only admitted the mere concept of Telephone Tapping. I did not go into any other details. Some hon. Members did mention in the House quoting from the Explanatery Note which the hon. Member Sri Mallikarjuna Kharge had furnished to my office. That is only for my verificttion That is not for the House and that is not the subject matter before the House. All that, that the House will be called upon to discuss under Rule 68 to-day is, the limited aspects of ''ದೂರವಾಣಿ ಕದ್ದಾಲಿಕೆಗಳ ಬಗ್ಗೆ ಚರ್ಚೆ ನಡೆಸುವುದು'' The Leader of the Opposition will also appreciate that there is no substantive motion before this House. There is not going to be any voting on this issue. It is going to be a general debate. Now, I cannot make it a precedent that for any discussion under Rule 68 hereafter that certain documents have got to be produced or tabled before the House, in order to make the debate more meaningful. All that I am really concerned is, there could be a debate. Whether the debate is going to be meaningful or infructuous is not the concern of the Chair. I would like to quote from the Practice and Procedure in Parliament by Sri M N. Kaul and Sri S. L. Shakdher. Even if it is a bit exhaustive, I would like to quote it to substantiate as to how we conceived Rule 68 and 69. I am quoting CHAPTER XXVII from Practice and Procedure of Parliament by M. N. Kaul and S. L. Shakdher, Page-580 with regard to Discussion on Matters of Urgent Public Importance for Short Duration. It reads thus :

''Before 1953 there was no provision in the Rules for raising a discussing in the House on a matter of urgent public importance except by way of a resolution or a motion. Where members wanted to draw the attention of the Government to a matter of public importance, they

resorted to a motion for adjournment. As an adjournment motion is in the nature of a censure motion, recourse to such a procedure for raising discussion in the House on matters of any consequence was not considered proper in the new set-up when the Government became responsible to Parliament.

In order to provide opportunities to members to discuss matters of importance, a convention was established in Lok Sabha in March 1953, whereby members could raise discussions for short duration without a formal motion or vote thereon. Notice for raising such a discussion was to be given to the Speaker who would allot time therefor in consultation with the Government''.

This procedure which was started as a convention later formed part of the Rules. I want the Hon' Members to underline these two concepts, namely, (i) without a formal motion and (ii) any vote thereon.

"Notice for raising such a discussion was to be given to the Speaker who would allot time therefor in consultation with the Government."

This procedure which was started as a convention, later formed Part of the rules and this has been conceived in our rules under Rules 68, 69 and 70.

Now, as there is no motion before the House but nonetheless as a Speaker, after applying my mind and in my wisdom, I have come to the conclusion that the discussion which I have allowed is of public importance, and therefor, I feel that the discussion could continue. Hew ever, I would like all the Hon. Members to kindly appreciate and understand the sensibility of this issue that in this Notice or the provision for the debate which I have allowed under Rule 68 there is no mention of any name. Therefore, I will not allow any references to individual Members. I would like you to kindly confine your remarks or arguments or presentation, to the limited aspect of Telephone Tapping and the Consequences that flow further.

Under these circumstances and within these parameters, I think, the discussion can go on.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಂ ಮಿಟ್ಕಲ್).—ಮಾನ್ಯ ಅಧ್ಯಕ್ಷರೇ ನಾನು ರೂಲ್ ೬೮ರ ಕೆಳಗೆ ನೋಟೀಸ್ ಏನು ಕೊಟ್ಟಿದ್ದೆ ಅದಕ್ಕೆ ತಾವು ಅನುಮತಿಯನ್ನು ಕೊಟ್ಟು ಚರ್ಚಿಸಬೇಕೆಂದು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಎರಡನೆಯದಾಗಿ, ಈಗಾಗಲೇ ಕೆಲವು ವಿಷಯಗಳ ಮೇಲೆ ಸಾಕಷ್ಟು ಚರ್ಚೆ ಆಗಿದೆ. ಆದರೂ ಕೂಡ ಈ ಒಂದು ಟೆಲಿಫೋನ್

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲದ ಸೂಚಿಸುತ್ತದೆ.

ಟ್ಯಾಪಿಂಗ್ ಪ್ರಕರಣ ಹೇಗೆ ಆಯಿತು? ಯಾವಾಗ ಆಯಿತು? ಏತಕ್ಕೆ ಆಯಿತು? ಯಾರು ಮಾಡಿದರು ಎನ್ನತಕ್ಕಂಥಾದ್ದು ಕೂಡ ನಾವು ತಿಳಿದುಕೊಳ್ಳಬೇಕಾಗುತ್ತದೆ. ಅದನ್ನು ಹೇಳುವಾಗ ಸ್ವಾಭಾವಿಕವಾಗಿ, ಯಾರು ಆ ಕಾಲದಲ್ಲಿ ಅಥಾರಿಟಿ ಇದ್ದರು, ಯಾರ ಒಂದು ಡೈರೆಕ್ಷನ್ ಮೇಲೆ ಅಥವಾ ಯಾರ ಹೇಳಿಕೆ ಮೇಲೆ ಇದು ನಡೆಯಿತು ಎನ್ನತಕ್ಕಂಥಾದ್ದು ಬಹಳ ಮಹತ್ವದ್ದು, ಇವತ್ತು ಟೆಲಿಫೋನ್ ಟ್ಯಾಪಿಂಗ್ ಪ್ರಕರಣ ಕೇವಲ ಹಿಂದಿನ ಮುಖ್ಯಮಂತ್ರಿಗಳು ಮಾಡಿದರೋ ಅಥವಾ ಅಂದಿನ ಚೀಫ್ ಸೆಕ್ರೆಟರಿ ಅದನ್ನು ಕಳುಹಿಸಿದರೋ ಅಥವಾ ಡಿ ಐ.ಜಿ. ಇಂಟೆಲಿಜನ್ಸ್ ಕಳುಹಿಸಿದರೋ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಈ ದೇಶದಲ್ಲಿ ನಮ್ಮ ನಾಗರೀಕರಿಗೆ ಕೊಟ್ಟಂತಹ ಮೂಲಭೂತವಾದ ಹಕ್ಕುಗಳು ಏನು ಇದೆ ಅವುಗಳ ರಕ್ಷಣೆಯ ಪ್ರಶ್ನೆ ಇದೆ. ನಮಗೆ ಸಿಕ್ಕಂಥ ಫಂಡಮೆಂಟಲ್ ರೈಟ್ಸನ್ನು ತೆಗೆದುಕೊಳ್ಳತಕ್ಕಂಥ ಹಕ್ಕು ಯಾವ ವ್ಯಕ್ತಿಗೂ ಕೂಡ ಇಲ್ಲ. ಅವರು ಮುಖ್ಯ ಮಂತ್ರಿಗಳೇ ಆಗಿರಬಹುದು, ಸದಸ್ಯರೇ ಆಗಿರಬಹುದು, ಯಾರೇ ಆಗಿರಬಹುದು ಸಂವಿಧಾನಾತ್ಮಕವಾಗಿ ಸಿಕ್ಕಂಥ ಹಕ್ಕುಗಳನ್ನು ಮೊಟಕುಗೊಳಿಸುವಂಥ ಹಕ್ಕನ್ನು ನಮ್ಮ ಸಂವಿಧಾನ ಬೇರೆಯವರಿಗೆ ಕೊಟ್ಟಿಲ್ಲ ಅದಕ್ಕಾಗಿ ಇದು ಮಹತ್ವವಾದ ಪ್ರಶ್ನೆ ಇದೆ. ನಾವು ಹೇಳುವಾಗ ಸಹಜವಾಗಿ ಇದು ಯಾರ ಡೈರೆಕ್ಷನ್ ಮೇಲಾಗಿದೆ, ಯಾರ ಕಡೆಯಿಂದ ಆಗಿದೆ ಎನ್ನುವಂಥ ಮಾತು ಮತ್ತು ಆಗ ಯಾರು ಮುಖ್ಯ ಮಂತ್ರಿಗಳಾಗಿದ್ದರು ಅಥವಾ ಯಾರು ಇದನ್ನು ನಡೆಸಿಕೊಂಡು ಹೋಗುತ್ತಿದ್ದರು ಎನ್ನುವುದನ್ನು ನಾವು ಸಹಜವಾಗಿ ಹೇಳಲೇಬೇಕಾಗುತ್ತದೆ. ಅವರನ್ನು ವ್ಯಕ್ತಿಯಾಗಿ ತೆಗೆದುಕೊಳ್ಳುತ್ತಿಲ್ಲ ಈ ರಾಜ್ಯದ ಕಾರುಬಾರು ನಡೆಸತಕ್ಕಂಥ ಅಥಾರಿಟಿ ಅವರಿಗೆ ಏನಿತ್ತು ಅವರ ಹೆಸರನ್ನು ನಾವು ಸಹಜವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಒಬ್ಬ ವ್ಯಕ್ತಿ ಶಾಸಕನಾಗಿ ಮಾಡಿದ್ದಾರೆಂದರೆ ಆ ಮಾತು ಬೇರೆ. ಆದರೆ ಇವತ್ತು ಏನಾಗಿದೆ? ನಮಗೆ ಸಿಕ್ಕಂಥ ಸಂವಿಧಾನಾತ್ಮಕ ಹಕ್ಕುಗಳು ಮೊಟಕಾಗಿವೆ. ಆರ್ಟಿಕಲ್ ೧೯ ಮತ್ತು ಆರ್ಟಿಕಲ್ ೨೧ ಇವು ಬಹಳ ಮುಖ್ಯ. ಈ ಆರ್ಟಿಕಲ್ ೧೯ರಲ್ಲಿ ಫಂಡಮೆಂಟಲ್ ರೈಟ್ಸನಲ್ಲಿ ಫ್ರೀಡಂ ಆಫ್ ಸ್ಪೀಚ್, ಫ್ರೀಡಂ ಆಫ್ ಎಕ್ಸ್‌ಪ್ರೆಷನ್ ಇದೆ. ಟೆಲಿಫೋನ್ ಟ್ಯಾಪಿಂಗ್ ಮಾಡಿ ಅದರಲ್ಲಿ ಕೆಲವು ಹೆಸರುಗಳನ್ನು ನಮೂದು ಮಾಡಿಸಿ ಡಿ.ಐ ಜಿ. ಇಂಟೆಲಿಜೆನ್ಸ್ ಅವರ ಮುಖಾಂತರ ಅವರ ಮಾತುಗಳನ್ನು ಕದ್ದು ಕೇಳತಕ್ಕಂಥಾದ್ದು ಏನು ತೋರಿಸುತ್ತದೆ. ಅಂದರೆ, ನಮಗೆ ಮಾತನಾಡತಕ್ಕಂಥ ಸ್ವಾತಂತ್ರ್ಯ ಇಲ್ಲ ಅಥವಾ ನಮ್ಮ ಒಪೀನಿಯನ್ ಎಕ್ಸ್‌ಪ್ರೆಸ್ ಮಾಡತಕ್ಕಂಥ ಸ್ವಾತಂತ್ರ್ಯ ಇಲ್ಲ. ಬೇರೆ ಯಾರೋ ನಮ್ಮ ಮಾತನ್ನು ಕೇಳುತ್ತಿದ್ದಾರೆ. ಮತ್ತೆ ಯಾರ ಟೆಲಿಫೋನ್ ಟ್ಯಾಪಿಂಗ್ ಮಾಡಿದ್ದು? ಸ್ಮಗಲರ್ಸ್ ಅಥವಾ ಬೇರೆ ಎಕನಾಮಿಕ್ ಅಫೆಂಡರ್ಸ್ ಏನು ಇದ್ದಾರೆ ಅಂಥವರ ಟೆಲಿಫೋನ್ ಟ್ಯಾಪಿಂಗ್ ಮಾಡಲಿಲ್ಲ. ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ೧೯೮೮ರಲ್ಲಿ ಏನೊಂದು ಲಿಸ್ಟ್ ಇತ್ತು, ಆ ಲಿಸ್ಟ್‌ನಲ್ಲಿ ಯಾರಿದ್ದರು? ಈ ಮನೆಯ ಕೆಲವು ಗೌರವಾನ್ವಿತ ಸದಸ್ಯರುಗಳ ಹೆಸರುಗಳ ಕೂಡ ಆ ಪಟ್ಟಿಯಲ್ಲಿ ಇತ್ತು. ಅಧ್ಯಕ್ಷರೇ, ಸರ್ಕಾರಕ್ಕಾಗಲಿ, ಲೆಜಿಸ್ಲೇಚರ್‌ಗಾಗಲಿ, ಪಾರ್ಲಿಮೆಂಟ್‌ಗಾಗಲಿ ಕೆಲವು ಹಕ್ಕುಗಳನ್ನು ನಾವಾಗಿಯೇ ಕೊಡುತ್ತೇವೆ ಆ ಹಕ್ಕುಗಳನ್ನು ಸೀಮಿತವಾಗಿ ಬಹಳ ರೆಸ್ಟ್ರೈಂಟ್ ಆಗಿ ಉಪಯೋಗ ಮಾಡಬೇಕಾಗುತ್ತದೆ. ಅವರಿಗೆ ಎಷ್ಟರ ಮಟ್ಟಿಗೆ ಅಧಿಕಾರ ಕೊಡುತ್ತೇವೆ ಅಷ್ಟರಮಟ್ಟಿಗೆ ಮಾತ್ರ ಅವರು ಸೀಮಿತವಾಗಿ ಅದನ್ನು ಉಪಯೋಗ ಮಾಡಬೇಕಾಗುತ್ತದೆ. ಇವತ್ತು ಟೆಲಿಗ್ರಾಫ್ ಆ್ಯಕ್ಟ್ ಪ್ರಕಾರ ಸೆಕ್ಷನ್ ೫ ಸಬ್ ಕ್ಲಾಸ್ ೨ ಏನು ಹೇಳುತ್ತದೆ? ಈ ಒಂದು ಸೆಕ್ಷನ್ ೫ ಸಬ್ ಕ್ಲಾಸ್ ೨ರಲ್ಲಿರುವ ಒಂದು ರೆಲೆವೆಂಟ್ ಪಾಯಿಂಟ್‌ನ್ನು ಓದಿದರೆ ಎಲ್ಲರಿಗೂ ಕೂಡಾ ಗೊತ್ತಾಗುತ್ತದೆ.

"On the occurrence of any public emergency or in the interest of public safety the Central Government or a State Government or any Officer specifically authorised in this behalf by the Central Government or the State Government may, if satisfied that it is necessary or expedient so to do in the interest of the sovereignty and integrity of India the security of the State, friendly relations with foreign States or public order or for Preventing incitement to the commission of an offence for reasons to be recorded in writing by order, direct that any message or class of messages to or from any person or class of Persons or relating to any particular subject brought for transmission by or transmitted or received by any telegraph shall

not be transmitted or shall be intercepted or detained or shall be disclosed to the Government making the order or an Officer thereof mentioned in the order."

ಇದರ ಪ್ರಕಾರ ಸೀಮಿತವಾಗಿ ಅಧಿಕಾರ ಕೊಟ್ಟಿದ್ದಾರೆ. ಹೀಗೆ ಅಧಿಕಾರವನ್ನು ಕೊಟ್ಟರೆ ಯಾರ ಟೆಲಿಫೋನ್ ಟ್ಯಾಪ್ ಮಾಡಬಹುದು ? ಯಾರು ದೇಶದ್ರೋಹಿಗಳು ಇದ್ದಾರೆ ಅಥವಾ ಯಾರು ದೇಶದ ಐಕ್ಯತೆಗೆ ಧಕ್ಕೆ ತರುವಂಥ ಕಾರ್ಯಗಳನ್ನು ಮಾಡುತ್ತಿದ್ದಾರೆ. ಯಾರು ದೇಶದ ಆರ್ಥಿಕ ಅಪರಾಧ ವನ್ನು ಮಾಡುತ್ತಾರೆ, ಯಾರಿಂದ ಈ ದೇಶದ ಭದ್ರತೆಗೆ ತೊಂದರೆ ಉಂಟಾಗುತ್ತದೆ, ಧಕ್ಕೆ ಬರುತ್ತದೆ. ಅಂತಹವರ ಹೆಸರುಗಳನ್ನು ಲಿಸ್ಟ್ ಮಾಡಿ ಅವರ ಟೆಲಿಫೋನ್ ಟ್ಯಾಪ್ ಮಾಡಬಹುದು. ಅದಕ್ಕೆ ಮಾತ್ರ ರಾಜ್ಯ ಸರ್ಕಾರಗಳಿಗಾಗಲಿ, ಕೇಂದ್ರ ಸರ್ಕಾರಕ್ಕಾಗಲಿ ೫ನೇ ಸೆಕ್ಷನ್‌ನ ೨ನೇ ಸಬ್‌ಕ್ಲಾಸ್‌ನಲ್ಲಿ ಅಧಿಕಾರ ಇದೆ. ೧೯೮೮ರಲ್ಲಿ ಮುಖ್ಯ ಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗಡೇಜೀಯವರು ಅಧಿಕಾರದಲ್ಲಿದ್ದರು. ಅವರು ಕೂಡ ಇಂಥ ಒಂದು ಪಟ್ಟಿಯನ್ನು ತಯಾರು ಮಾಡಿ ಕೊಟ್ಟಿದ್ದರು. ಈ ಬಗ್ಗೆ ಸದನದಲ್ಲಿ ಅಂದು ಚರ್ಚೆಯಾಯಿತು. ಸುಮಾರು ೫೧ ಹೆಸರುಗಳುಳ್ಳ ಪಟ್ಟಿಯನ್ನು ಮೆಂನ್‌ಶನ್ ಮಾಡಿದಾಗ ಅಂದು ಯಾರೂ ಅದನ್ನು ಡಿನೇ ಮಾಡಲಿಲ್ಲ. ಈ ವಿಷಯ ೬ನೇ ಅಕ್ಟೋಬರ್ ೧೯೮೮ರಲ್ಲಿ ಮೊದಲನೇ ಸಲ ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಈ ಸದನದಲ್ಲಿ ಬಂತು. ಅಂದಿನ ಅಧ್ಯಕ್ಷರು ಇವೊತ್ತು ಈ ಚರ್ಚೆ ಬೇಡ, ನಾಳೆ ತೆಗೆದುಕೊಳ್ಳೋಣ ಎಂದು ಅಜ್ಞೆ ಕೊಡಿಸಿದ್ದರಿಂದಾಗಿ ೫ನೇ ಅಕ್ಟೋಬರ್ ೧೯೯೦ ರಂದು ಅದರ ಚರ್ಚೆ ಪ್ರಾರಂಭವಾಯಿತು. ನಾವುಗಳೆಲ್ಲರೂ ಅವೊತ್ತೇ ಈ ಬಗ್ಗೆ ಚರ್ಚೆಯಲ್ಲಿ ಕೇಳಿದ್ದೇವೆ, ಈಗ ಬಂದದ್ದು ಬೇರೆ ರೀತಿಯಲ್ಲಿ ಇರಬಹುದು. ದೇವೀಲಾಲ್, ಚೌತಾಲ ಅವರುಗಳು ಈ ಪ್ರಶ್ನೆಯನ್ನು ಈಗ ಎತ್ತಿದ್ದಾರೆಂದು ನಾವು ಈಗ ಮಾತನಾಡುತ್ತಾ ಇಲ್ಲ, ನಮಗೂ ಅವರಿಗೂ ಈ ಕುರಿತು ಸಂಬಂಧ ಇಲ್ಲ. ನಾವುಗಳು ಇದೇ ಮನೆಯಲ್ಲಿ ಈ ಕುರಿತು ಒಂದು ವರ್ಷ ಎಂಟು ತಿಂಗಳ ಹಿಂದೆಯೇ ಮಾತನಾಡಿದ್ದೇವೆ. ಯಾವಾಗ ಈ ಕೃತ್ಯ ನಡೆಯಿತು ಆಂದೇ ಇದು ನಮ್ಮ ಹಕ್ಕಿನ ಪ್ರಶ್ನೆ ಇದೆ ಇದು ನಮ್ಮ ವ್ಯಕ್ತಿಗತ ಪ್ರಶ್ನೆ ಇದೆ, ಇದು ನಮ್ಮ ಪರ್ಸನಲ್ ಲಿಬರ್ಟಿ ಪ್ರಶ್ನೆ ಇದೆ, ಇದು ನಮ್ಮ ವಾಕ್‌ಸ್ವಾತಂತ್ರ್ಯದ ಪ್ರಶ್ನೆ ಇದೆ, ನೀವು ನಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸುತ್ತಾ ಇದ್ದೀರಿ ಎಂದು ಆಗಲೇ ನಾವು ಪ್ರಸ್ತಾಪ ಮಾಡಿದ್ದೇವೆ. ಆಗ ಹೆಸರುಗಳನ್ನು ಕೂಡ ಓದಿ ಹೇಳಿದ್ದೇವೆ. ಆವಾಗ ಕೂಡ ಇಂಥ ಟೆಲಿಫೋನ್ ಟ್ಯಾಪ್ ಮಾಡಿ ಎಂದು ಹೇಳಲಿಲ್ಲ ಎಂದರು. ಶ್ರೀಮತಿ ಕೆ. ಎಸ್. ನಾಗರತ್ನಮ್ಮ, ಶ್ರೀ ಎಸ್. ಬಂಗಾರಪ್ಪ, ಶ್ರೀ ಕೆ. ಹೆಚ್. ರಂಗನಾಥ್, ಶ್ರೀ ವೀರಪ್ಪಮೊಯಿಲಿ, ಶ್ರೀ ಕೆ. ಹೆಚ್. ಪಾಟೀಲ್, ಶ್ರೀ ಆಸ್ಕರ್ ಫರ್ನಾಂಡಿಸ್ ಮತ್ತು ಯಾರ್‍ಯಾರು ಕಾಂಗ್ರೆಸ್ ಮುಂಖಂಡರಿದ್ದರು ಅವರ ಮತ್ತು ಇತರ ವಿರೋಧಪಕ್ಷದ ನಾಯಕರುಗಳ ಹೆಸರು ಮಾತ್ರವಲ್ಲದೆ ಸ್ವತಃ ಅವರ ಸಚಿವ ಸಂಪುಟದ ಸದಸ್ಯರಾದ ಶ್ರೀ ದೇವೇಗೌಡ, ಶ್ರೀ ರಘುಪತಿಯವರ ಹೆಸರುಗಳೂ ಕೂಡ ಆ ಲಿಸ್ಟ್‌ನಲ್ಲಿ ಇದ್ದವು. ಮತ್ತು ಶ್ರೀಮಾನ್ ಎ. ಕೆ. ಸುಬ್ಬಯ್ಯನವರ ಹೆಸರೂ ಇತ್ತು. ಇದನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಅಲ್ಲಗಳೆದಿಲ್ಲ ಆದರೆ ಅವರು ಇದನ್ನು ಸದನದಲ್ಲಿ ಹೇಳಲಿಲ್ಲ. ಆದರೆ ಇವೊತ್ತು ಆಶ್ಚರ್ಯ ಏನಾಗುತ್ತಿದೆಯೆಂದರೆ, ಯಾವ ವಿಷಯವನ್ನು ನಾವು ಒಂದು ವರ್ಷ ಎಂಟು ತಿಂಗಳ ಹಿಂದೆ ಎತ್ತಿದ್ದೇವೊ ಇವೊತ್ತು ಅದೇ ಪ್ರಶ್ನೆಯನ್ನು ಅವರು ರಾಜಕೀಯ ದುರುದ್ದೇಶದಿಂದ ಮಾಡುತ್ತಾ ಇದ್ದಾರೆ, ಇದರ ಮೂಲಕ ಯಾರನ್ನೊ ಮುಗಿಸಿಬಿಡಲು ಪ್ರಯತ್ನ ಮಾಡುತ್ತಿದ್ದಾರೆ, ಎಂದೆಲ್ಲಾ ಹೇಳುತ್ತಿದ್ದಾರೆ. ನಮಗೆ ಇರತಕ್ಕಂಥ ಹಕ್ಕುಬಾಧ್ಯತೆಗಳ ರಕ್ಷಣೆ ಆಗಬೇಕು. ಮುಖ್ಯಮಂತ್ರಿಗಳಾದವರು ಸದಸ್ಯರ ಟೆಲಿಫೋನ್‌ನ್ನು ಕಳ್ಳತನದಿಂದ ಕೇಳಿದರೆ ನಮ್ಮ ಗತಿ ಏನಾಗಬೇಕು? ಹೀಗೆ ನಡೆಯುವುದಾದರೆ ಸಂವಿಧಾನವಾದರೆ ಏಕೆ ಇರಬೇಕು? ನಮಗಿರುವ ಹಕ್ಕನ್ನು ಇವರುಗಳು ಮೊಟಕುಗೊಳಿಸುವುದಾದರೆ ಇವರೇನು ಸಾರ್ವಭೌಮರೆ? ಅವರು ಸಂವಿಧಾನ ಪ್ರಕಾರ ನಡೆದುಕೊಂಡು ಹೋಗಬೇಕಾಗುತ್ತದೆ. ಆ ತಪ್ಪುಗಳಿಗೆ ಈಗ ಒಂದೊಂದೇ ಸಾಕ್ಷಿ ಸಿಗುತ್ತಾ ಇದೆ. ಇದನ್ನು ನಾವು ಮಾಡಿಲ್ಲ. ಅದಕ್ಕೆ ನಮಗೆ ಸಂಬಂಧ ಇಲ್ಲ, ಇದನು ರೊಟೀನ್ ಕೋರ್ಸ್‌ನಲ್ಲಿ ಡಿಐಜಿ, ಇಂಟಲಿಜೆನ್ಸ್‌ನವರು ಮಾಡಿದ್ದಾರೆ ಎಂಬ ಮಾತನ್ನು ಕೂಡ ಅವರು ಸದನದ ಒಳಗಡೆ ಹೇಳದೆ, ಮಾಡಿರಬಹುದು ಎಂದು ಹೊರಗಡೆ ಹೇಳಿದ್ದಾರೆ. ಹಾಗಾದರೆ ರೊಟೀನ್ ಕೋರ್ಸ್‌ನಲ್ಲಿ ಮಾಡಿದಾರೆ ವಿರೋಧಪಕ್ಷದ ನಾಯಕರು, ಕೆಲವು ಶಾಸಕರು ರಾಷ್ಟ್ರವಿರೋಧಿಗಳೆ ? ಎಕನಾಮಿಕ್ ಅಫೆಂಡರ್ಸ್ಸೇ, ಬ್ಲಾಕ್ ಮಾರ್ಕೆಟೀಯರ್ಸ್‌ಗಳೆ ? ಸ್ಮಗಲರ್‌ಗಳೇ ಅಥವಾ ಇನ್ನಾವುದೇ ರಾಷ್ಟ್ರೀಯ ವಿರೋಧಿ ಕೃತ್ಯಗಳಲ್ಲಿ ತೊಡಗಿರುವವರೆ ? ಒಟ್ಟನಲ್ಲಿ ಇಂಥ ಲಿಸ್ಟ್‌ನಲ್ಲಿ ಹೆಸರುಗಳು ಇರಬೇಕಾದರೆ ಏನಾದರೂ ಒಂದು ಕಾರಣ ಇರಬೇಕು. ಕಾನೂನು ಪ್ರಕಾರ ಟೆಲಿಫೋನ್ ಟ್ಯಾಪ್ ಮಾಡಿಬೇಕಾದರೆ ನಿರ್ದಿಷ್ಟವಾದ ಕಾರಣಗಳು ಇರಬೇಕು, ಆ ದಿಶೆಯಲ್ಲಿ ಆಕ್ಟ್‌ನಲ್ಲಿ ನಿರ್ದಿಷ್ಟವಾದ ಗೈಡ್‌ಲೈನ್ಸ್ ಇವೆ. ಇಂಥವರದೆ

ಟೆಲಿಫೋನ್ ಟ್ಯಾಪ್ ಮಾಡಿ ಎಂದು ಸಂಬಂಧಪಟ ಆಕ್ಟ್‌ನ ಸೆಕ್ಷನ್‌ನಲ್ಲಿ ಸ್ಪೆಸಿಫಿಕ್ ಆಗಿ ಹೇಳಿರುವಾಗ ಹೀಗೆ ಮಾಡಿರುವುದು ನಮ್ಮ ಹಕ್ಕಿಗೆ ಚ್ಯುತಿ ಮಾಡಿದಂಥ ಕೆಲಸವನ್ನು ಮಾಡಿದಂತೆ ಆಗುವುದಿಲ್ಲವೆ ? ಟೆಲಿಗ್ರಾಫ್ ಆಕ್ಟ್ ಸೆಕ್ಷನ್ ೫(೨) ಇದರ ವ್ಯಾಪ್ತಿಯಲ್ಲಿ ಏನು ಹಕ್ಕು ಇದೆ ಅದನ್ನು ಮಿತಿಮೀರಿ ಅವರು ನಡೆದುಕೊಂಡು ಬಂದಿದ್ದಾರೆ ಎಂದು ಹೇಳಿದೆವು. ಶ್ರೀ ಸತೀಶ್ಚಂದ್ರನ್‌ರವರು ೨೬-೬-೧೯೮೬ರಲ್ಲಿ ಒಂದು ಲೆಟರ್ ಕೂಡ ಕಳಿಸಿದ್ದಾರೆ. ಅದು ನಡವಳಿಕೆಗಳ ಪುಸ್ತಕ ೩೧೦ರಲ್ಲಿದೆ. ಅದರಲ್ಲಿ ಏನಿದೆ ಎಂದರೆ.

> "In exercise of the powers conferred by sub-section (2) of Section 5 of the Indian Telegraphs Act, 1885 of the Central Act, the Government of Karnataka hereby Specifically authorises the DIG (Intelligence) to exercise powers under the said sub-section in the interest of public safety."

ಅಂದರೆ ಆಥರೈಸ್ ಯಾರು ಮಾಡುತ್ತಾರೆ ? ಚೀಫ್ ಸೆಕ್ರೆಟರಿಗೆ ಅಂಡರ್ ಸೆಕ್ರೆಟರಿ ಆಥರೈಸ್ ಮಾಡುವುದಕ್ಕೆ ಬರುತ್ತದೆಯೆ ? ಜೊತೆಗೆ ಇದು ಯಾವ ಪಬ್ಲಿಕ್ ಸೇಫ್ಟಿ ? ಈ ಆಕ್ಟ್ ಪ್ರಕಾರ ಆಥರೈಸ್ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ There should be some authority to authorise. Without anybody's signature or anybody's direction Chief Secretary cannot take any order, ಅಂದರೆ ಮೇಲಿನವರು ಹೇಳಿದರೆ ಅವರು ಮಾಡಲೇಬೇಕು. ಹಾಗಾದರೆ ಆಥರೈಜೇಷನ್ ಕೊಟ್ಟವರು ಯಾರು ? ಚೀಫ್ ಸೆಕ್ರೆಟರಿ ಮೇಲೆ ಯಾರಿರುತ್ತಾರೆ. ಸೂಪರ್ ಚೀಫ್ ಸೆಕ್ರೆಟರಿಯಂತೂ ಯಾರೂ ಇರುವುದಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಅಧ್ಯಕ್ಷರೇ, ಅದಕ್ಕೆ ನಾವು ಹೇಳಿದ್ದು. ಸರ್ಕಾರದ ಬಳಿ ರಿಕಾರ್ಡ್ಸ್ ಇದೆ ತರಿಸಿ ಎಂದು.

(ಗೊಂದಲ)

ಅಧ್ಯಕ್ಷರು.—ಖರ್ಗೆಯವರೇ ಸ್ವಲ್ಪ ನಸಗಾಗಿ ಯೀಲ್ಡ್ ಆಗಿ. Sri Deshapande, he is only making a reference to the Chief Secretary. It has appeared earlier in the proceedings of this very august House.

SRI R. V. DESHAPANDE :—I don't mind. Let him refer to the letter of the Chief Secretary. But, he says that the Chief Secretary could not have passed the order without the authority of the Chief Minister. Chief Secretary has an authority under the law. Chief Secretary passes an order. To appoint an officer for this purpose there is a provision. So, the Chief Secretary, under that provision has appointed him. His argument is that the Chief Minister has authorised him is wrong What he says is that the Chief Minister has authorised. For that, record has to be produced. If he says that the Chief Minister has ordered, let him produce the order.

ಶ್ರೀ ಬಿ. ಹೆಚ್. ಬನ್ನಿಕೋಡ್.—ಅವರು ಅದರ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಭಾಷಣ ಮಾಡಿದರೆ ಅರ್ಥವಿಲ್ಲ.

ಅಧ್ಯಕ್ಷರು.—ಚರ್ಚೆ ಅಂದರೆ ಭಾಷಣವೇ, ಇನ್ನೇನು ಮಾಡಲಾಗುತ್ತದೆ ?

(Interruptions)

SRI D. B. CHANDRE GOWDA.—The position would be clarified very simply by him. The Chief Minister is here. If he says that he can authorise, there ends the matter.

SRI M. MALLIKARJUN KHARGE.—Why are you disturbing? It is my point of view. You have every right to say contrary.

MR. SPEAKER.—It will not be within my power to direct the Member to present. Whatever he wants to say in a particular manner, it is left to their individual style and what not. Let him say without insinuating another Member of this House.

3-35 P.M.

SRI D. B. CHANDRE GOWDA.—He is not only a senior Member, but also had worked as a Minister in the Council of Ministers. He was a member of the Cabinet. He is saying with all responsibility I take words of him with great responsibility and dignity. If he says that the authority is appointed on the instructions of the Chief Minister, is it the procedure even now? Let the Chief Minister say. ಡಿಸ್ಕಷನ್ ಏಕೆ?

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ.—ಅಧ್ಯಕ್ಷರೇ ಅವರು ಮಾತನಾಡುವುದಾದರೆ ಮಾತನಾಡಲಿ. ಈ ಓಹೋ, ಅದು–ಇದು ಎಂದು ಹೇಳುತ್ತಾರಲ್ಲಾ ಅದು ಬೇಡ, ಅವರ ಬಾಯಿಗೆ ಸ್ವಲ್ಪ ಬೀಗ ಹಾಕಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ.........

ಶ್ರೀ ವಾಟಾಳ್ ನಾಗರಾಜ್.—ರಾಜಕೀಯವಾದ ಚರ್ಚೆ ನಡೆಯುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಾವು ಈ ಚರ್ಚೆಯಲ್ಲಿ ಕೆಲವು ವಿಷಯಗಳನ್ನು ಮರೆತುಬಿಡುತ್ತಿದ್ದೇವೆ. ಏಕೆಂದರೆ, ನಿಯಮ ೬೯ ರ ಪ್ರಕಾರ ಒಬ್ಬರು ಮಾನ್ಯ ಸದಸ್ಯರು ತಮ್ಮ ಅಪ್ಪಣೆಯನ್ನು ಪಡೆದು ಅವರ ಹಕ್ಕನ್ನು ಚಲಾವಣೆಮಾಡಿ ಚರ್ಚೆಗೆ ಇಳಿದಿದ್ದಾರೆ. ಏಕೆಂದರೆ, ಯಾವಾಗಲೂ ಕೂಡಾ ಈ ಕಡೆಯವರೇ ಇರಲಿ, ಆ ಕಡೆಯವರೇ ಇರಲಿ, ಸನ್ಮಾನ್ಯ ಸದಸ್ಯರು ಕೆಲವು ಪ್ರಶ್ನೆಗಳನ್ನು ಎತ್ತಲಿಕ್ಕೆ, ತಮ್ಮ ಅನುಮತಿಯನ್ನು ಕೇಳಲಿಕ್ಕೆ, ತಮ್ಮದೇ ಆದಂಥ ವಿಚಾರಗಳನ್ನು ತಮ್ಮ ಮುಂದಿಡಲಿಕ್ಕೆ ಹಕ್ಕು ಇರುತ್ತದೆ. ಸರ್ಕಾರದ ವಾದವನ್ನು ಅವರು ಮಾಡುತ್ತಿಲ್ಲ. ಅವರು ಸಾಮಾನ್ಯ ಸದಸ್ಯರಾಗಿ ಹೇಳುತ್ತಿದ್ದಾರೆ. ರೂಲ್ ೬೯ ರ ಪ್ರಕಾರ ಹಕ್ಕನ್ನು ಒಬ್ಬ ಸನ್ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇವೆ. ಅದನ್ನು ಅವರು ಚಲಾವಣೆ ಮಾಡಲಿಕ್ಕೆ ಈ ಸದನದಲ್ಲಿ ಹಕ್ಕಿದೆ. ಅದನ್ನು ಇದೇ ರೀತಿಯಲ್ಲಿ ಹೇಳಬೇಕು ಎಂದು ಹೇಳುವುದು ಸರಿಯಲ್ಲ. ಈ ರೀತಿ ಮಾಡಿದರೆ ಸನ್ಮಾನ್ಯ ಸದಸ್ಯರ ಹಕ್ಕನ್ನು ಹತ್ತಿಕ್ಕಿದ ಹಾಗೆ, ಆ ರೀತಿ ಕೆಲಸ ಮಾಡಿದ ಹಾಗೆ ಆಗುತ್ತದೆ, ಅಲ್ಲದೆ ಅದು ಹೆಚ್ಚು ಗೊಂದಲವಾಗುತ್ತದೆ. ಆದ್ದರಿಂದ ಸನ್ಮಾನ್ಯ ಸದಸ್ಯರು ಏನು ರೂಲ್ ೬೯ ರ ಪ್ರಕಾರ ವಿಷಯವನ್ನು ಎತ್ತಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ, ಅವರಿಗೆ ರಕ್ಷಣೆ ಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ರಾಜಕೀಯದ ಚರ್ಚೆಗೆ ಅವಕಾಶ ಕೊಡಬಾರದು. ರಾಜಕೀಯವನ್ನು ಬೆರೆಸತಕ್ಕಂಥ ಚರ್ಚೆಗೆ ದಯಮಾಡಿ ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚೀಫ್ ಸೆಕ್ರೆಟರಿಯವರು ಒಂದು ಪತ್ರವನ್ನು ಬರೆದಿದ್ದಾರೆ. ಆ ಲೆಟರ್‌ನಲ್ಲಿ ಸ್ಪೆಸಿಫಿಕ್ ಆಗಿ ಇದೆ. ಇದು ನಮ್ಮ ಲೆಟರ್ ಅಲ್ಲ. ಅಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಟೆಲಿಗ್ರಾಫ್ ಅಧಿಕಾರಿಗಳಿಗೆ ಬರೆದಂಥ ಪತ್ರ ಇಲ್ಲಿದೆ.

> "In exercise of the powers conferred by sub-section (2) of Section 5 of the Indian Telegraphs Act, 1885 of the Central Act, the Government of Karnataka............

(ಗೊಂದಲ)

SRI M. MALLIKARJUNA KHARGE :—Who is the Government of Karnataka, Sir ?

(ಗೊಂದಲ)

SRI M. MALLIKARJUNA KHARGE :—Further I will read : "The Government of Karnataka hereby specifically authorisies............" ಏನು ಇದರ ಅರ್ಥ ? ತಾವೇ ಹೇಳಿದರೆ ಚೆನ್ನಾಗಿರುತ್ತದೆ. I must appreciate. Government of Karnataka authorises DIG (Intelligence) to deal with this matter. ಗೌರ್ನಮೆಂಟ್ ಆಫ್ ಕರ್ನಾಟಕ ಎಂದರೆ ಯಾರು ಅಧ್ಯಕ್ಷರೇ ? ಯಾರದು ಸರ್ಕಾರ ಇರುತ್ತದೋ ಅವರಿಗೆ ಸರ್ಕಾರ ಆಥರೈಜೇಷನ್‌ನ್ನು ಕೊಟ್ಟಿದೆ. ಅಂದರೆ ಸರ್ಕಾರದ ಕನ್‌ಸೆಂಟ್ ಇಲ್ಲದೆ, ಸರ್ಕಾರವನ್ನು ಕೇಳದೇ ಸರ್ಕಾರದ ಗಮನಕ್ಕೆ ತರದೇ ಈ ಕೆಲಸವಂತೂ ಆಗಿಲ್ಲ ಎಂದು ಇದರ ಸ್ವಚ್ಛವಾದಂಥ ಅರ್ಥ.

ಇದು ಚೀಫ್ ಸೆಕ್ರೆಟರಿಯವರು ಬರೆದಿರುವ ಪತ್ರ. ನನ್ನ ಪತ್ರ ಅಲ್ಲ, ಅಥವಾ ನಾನು ಹುಟ್ಟಿಸಿ ಹೇಳತಕ್ಕದ್ದು ಅಲ್ಲ. ಅವರು ೨೬ನೇ ಜೂನ್ ೧೯೮೬ರಲ್ಲಿ ಬರೆದಿರತಕ್ಕದ್ದು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದ ಮೋಟಾರು ವಾಹನದ ಮೇಲೆ ಕರ್ನಾಟಕ ರಾಜ್ಯ ಎಂದು ಬರೆದಿರುತ್ತಾರೆ, ಅದು ಮುಖ್ಯಮಂತ್ರಿಗಳ ಆರ್ಡರ್ ಎಂದು ಅರ್ಥವೇ ?...

(ಗೊಂದಲ)

SRI M. MALLIKARJUNA KHARGE.—To exercise power under the said sub-section in the interest of public safety by order and in the name of Governor of Karnataka ಎಂದು ಇದೆ. Article 166 gives power to the Governor to issue such orders. ಕೊನೆಗೆ ಎಲ್ಲಿಗೆ ಬರುತ್ತದೆ ಅಂದರೆ ಅಂಡರ್ ಸೆಕ್ರೆಟರಿ ಹೆಸರಿನ ಮೇಲೆ ಆರ್ಡರ್ ಇಶ್ಯೂ ಆಗುತ್ತದೆ. But it is a government order. You cannot say it is Under Secretary order. or Secratary's Order. Article 166 of the Constitution delegates the power to the Secretaries also ಆದ್ದರಿಂದ ತಾವು ದಯವಿಟ್ಟು ಬೇರೆಯದನ್ನು ಭಾವಿಸಬೇಡಿ. By Order and in the name of a Governor of Karnataka, Sri T. R. Satishchandran, Chief Secretary, Government of Karnataka has issued a letter and that letter is also marked 'top' secret The letter indicates Karnataka Government Secretariat, Vidhana Soudha, Bangalore dated 26th June 1986. ಅಂದರೆ ಹಿಂದೆ ಸರ್ಕಾರದಿಂದ ಏನು ಒಂದು ಲಿಸ್ಟ್ ಹೋಗಿದೆ, ಅದಕ್ಕೆಲ್ಲಾ ಕೂಡ ಸರ್ಕಾರದ ಕನ್‌ಸೆಂಟ್ ಇದೆ. ಸರ್ಕಾರ ಅಂದರೆ ಯಾರು ? ಸರ್ಕಾರ ನಡೆಸಿಕೊಂಡು ಹೋಗತಕ್ಕ ವ್ಯಕ್ತಿ. ಅವರು ಮುಖ್ಯ ಮಂತ್ರಿಗಳೆ ಆಗಬಹುದು. ಹೋಮ್ ಮಿನಿಸ್ಟರೇ ಆಗಬಹುದು, ಯಾರೇ ಆಗಬಹುದು. ಆದರೆ ಇವೊತ್ತು ನಾನು ಏನು ಹೇಳುತ್ತೇನೆ ಅಂದರೆ, ಅಂದಿನ ಕಾಲದಲ್ಲಿ ಮುಖ್ಯ ಮಂತ್ರಿಗಳಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೇ ಇದ್ದರು ಅದಕ್ಕಾಗಿ ನಾನು ಸ್ಪೆಸಿಫಿಕ್ ಆಗಿ ಆ ಹೆಸರನ್ನು ಬರೆದೆ. ಆ ದಿವಸ ಅಂದರೆ ಈ ಲೆಟರ್ ಹೋದ ದಿವಸ ಅವರು ಇಲ್ಲದೆ ಹೋಗಿದ್ದರೆ ಅಥವಾ ಅವರ ಗಮನಕ್ಕೆ ಇದು ಬರದೇ ಹೋಗಿದ್ದರೆ ಅಥವಾ ಶ್ರೀ ಸತೀಶ್ ಚಂದ್ರನ್ ಅವರು ಈ ರೀತಿಯಾಗಿ ಲೆಟರನ್ನು ಡಿ.ಐ.ಜಿ (ಇಂಟೆಲಿಜೆನ್ಸ್)ಗೆ. ಟೆಲಿಗ್ರಾಫ್ ಆಫೀಸಿಗೆ ಕಳಿಸದೇ ಹೋಗಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಾ ಇರಲಿಲ್ಲ ಸರ್ಕಾರದ ಅಥಾರಿಟಿ ಮೇರೆಗೆ, ಸರ್ಕಾರದ ಹೇಳಿಕೆ ಮೇರೆಗೆ, ಸರ್ಕಾರದ ಒಂದು ಆಥರೈಸೇಷನ್ ಮೇರೆಗೆ ಈ ಪತ್ರ ಹೋಗಿ ತಲುಪಿದೆ. ಈ ಪತ್ರವನ್ನು ಲಗತ್ತಿಸಿ ಹೆಸರುಗಳನ್ನು ಕೂಡ ಕೊಟ್ಟಿದ್ದಾರೆ. ಮತ್ತು ಆ ವ್ಯಕ್ತಿಗಳ ವ್ಯಕ್ತಿ ಸ್ವಾತಂತ್ರವನ್ನು ಮತ್ತು ಅವರ ಫ್ರೀಡಂ ಆಫ್ ಸ್ಪೀಚ್ ಮತ್ತು ಎಕ್ಸ್‌ಪ್ರೆಷನ್ ಎಲ್ಲವೂ ಕೂಡ ಹರಣ ಆಗಿದೆ. ಅದಕ್ಕಾಗಿ ಅವರೇ ಇದಕ್ಕೆ ಹೊಣೆಗಾರರು ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ನಾನು ಇವೊತ್ತಿನ ದಿವಸ ಹೇಳುತ್ತಿದ್ದೇನೆ. ಇದಕ್ಕೆ ಇವರು ಬೇರೆ ರೀತಿಯಿಂದ ಗವರ್ನಮೆಂಟ್ ಆಫ್ ಕರ್ನಾಟಕ ಎಂದರೆ ಸೆಕ್ರೆಟರಿ ಇರಬಹುದು, ಅಂಡರ್ ಸೆಕ್ರೆಟರಿ ಇರಬಹುದು, ಅಂದರೆ ಸೆಕ್ರೆಟರಿ ಇರಬಹುದು ಅಂದರೆ ನನಗೆ ಏನೂ ಹೇಳುವುದಕ್ಕಾಗುವುದಿಲ್ಲ. ನಾನು ತಮಗೆ ಕನ್‌ವಿನ್ಸ್ ಮಾಡಬಹುದು. ಇವರು ಕನ್‌ವಿನ್ಸ್ ಆಗುವುದಿಲ್ಲ. ಎಂಬ

ತೀರ್ಮಾನವನ್ನು ತೆಗೆದುಕೊಂಡರೆ ನನ್ನ ಕೈಯಲ್ಲಿ ಕನ್‌ವಿನ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಗವರ್ನಮೆಂಟ್ ಆಫ್ ಕರ್ನಾಟಕ ಆದ ಮೇಲೆ Government of Karnataka to exercise power under sub-section by order and in the name of Governor of Karnataka ಎಂದು ಹೇಳಿದ್ದಾರೆ ಇದರ ಬಗ್ಗೆ ರಾಜ್ಯಾಂಗದ ಆರ್ಟಿಕಲ್ ೧೬೬ ಅನ್ನು ತಮ್ಮ ಗಮನಕ್ಕೆ ತರುತ್ತೇನೆ. Article : 166 : Conduct of business of the Government of a State.

(1) All executive action of the Government of a State shall be expressed to be taken in the name of the Governor.

(2) Orders and other instruments made and executed in the name of the Governor shall be authenticated in such manner as may be specified in rules to be made by the Governor, and the validity of an order or instrument which is so authenticated shall not be called in question on the ground that it is not an order or instrument made or executed by the Governor.

(3) The Governor shall make rules for the more convenient transaction of the business of the Government of the State and for the allocation among Ministers of the said business in so far as it is not business with respect to which the Governor is by or under this Constitution required to act in his discretion.

ಈ ರೀತಿಯಾಗಿ ಗವರ್ನರನ್ನೂ ಕೂಡ ಅವರು ಆಥರೈಸ್ ಮಾಡುತ್ತಾರೆ. ಆರ್ಟಿಕಲ್ ೧೬೬ರ ಪ್ರಕಾರ ಪ್ರತಿಯೊಂದು ಆರ್ಡರ್ ಗವರ್ನರ್ ಹೆಸರಿನಲ್ಲಿ ಹೊರಟರೂ ಕೂಡ ಕೊನೆಗೆ ಹೊಣೆಗಾರರು ಯಾರು ಅಂದರೆ ಸರ್ಕಾರ ಎನ್ನತಕ್ಕಂಥ ಮಾತನ್ನು ಇವತ್ತಿನ ದಿವಸ ನಾವು ತಿಳಿದುಕೊಳ್ಳಬೇಕಾಗುತ್ತದೆ. ಆರ್ಟಿಕಲ್ ೧೬೬ರ ಪ್ರಕಾರವೂ ಇವರೇ ಹೊಣೆಗಾರರು ಮತ್ತು ಸೆಕ್ಷನ್ ೫ ಸಬ್‌ಕ್ಲಾಸ್ ೨ ಟೆಲಿಗ್ರಾಫ್ ಆಕ್ಟ್ ಪ್ರಕಾರವೂ ಇವರೇ ಹೊಣೆಗಾರರು ಅದಕ್ಕಾಗಿ ಇವರು ತಮ್ಮ ಹೊಣೆಯನ್ನು ತಪ್ಪಿಸಿಕೊಂಡು ನಾವು ಇದನ್ನು ಮಾಡಿಲ್ಲ, ಇದಕ್ಕೆ ನಾನು ಜವಾಬ್ದಾರಿ ಅಲ್ಲ. ಅದನ್ನು ಪ್ರೂವ್ ಮಾಡಿ ಅಂದರೆ, ಈ ಪ್ರಶ್ನೆಯನ್ನು ಈಗ ರೈಸ್ ಮಾಡಿದರೂ ಕೂಡ ಅಂದಿನ ಸರ್ಕಾರಕ್ಕೂ ಸಹ ಆಗ ಸಾಮರ್ಥ್ಯ ಇರಲಿಲ್ಲ, ಇದನ್ನು ಡಿಸಪ್ರೂ ಮಾಡುವುದಕ್ಕೆ ಅಥವಾ ಈ ಆರ್ಗ್ಯುಮೆಂಟ್ ತೆಗೆದುಹಾಕಲಿಕ್ಕೆ ಆಗಲಿಲ್ಲ. ಇದು ಸ್ಪಷ್ಟ ಇದೆ, ಡಿಬೇಟಿನಲ್ಲಿ ತಾವು ನೋಡಬಹುದು. ಇದಕ್ಕೆ ಪೂರಕವಾಗಿ ನಾನು ಇನ್ನೊಂದು ವಿಷಯವನ್ನು ಹೇಳುವುದೇನೆಂದರೆ, ಚೀಫ್ ಸೆಕ್ರೆಟರಿಯವರು ಒಂದು ಲೆಟರ್ ಕಳಿಸಿದ್ದಾರೆ. ಅವರು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಮುಂದೆ ಒಂದು ಎವಿಡೆನ್ಸ್ ಕೊಟ್ಟಿದ್ದಾರೆ. ಕಮಿಟಿ ಆನ್ ಸಬಾರ್ಡಿನೇಟ್ ಲೆಜಿಸ್ಲೇಷನ್ ರಾಜ್ಯ ಸಭಾ ಸೆಕ್ರೆಟರಿಯೇಟ್ ಇವರು ಫಸ್ಟ್ ಜೂನ್ ೧೯೯೦ ರಂದು ಟೆಲಿಗ್ರಾಫ್ ಆಕ್ಟ್‌ಗೆ ತಿದ್ದುಪಡಿ ಮಾಡಬೇಕು ಎಂದು ಕೆಲವು ಸಲಹೆಗಳನ್ನು ಕೇಳಿದ್ದಾರೆ. ಪ್ರತಿಯೊಂದು ಸ್ಟೇಟ್‌ನ ಚೀಫ್ ಸೆಕ್ರೆಟರಿ, ಹೋಂ ಸೆಕ್ರೆಟರಿಗಳನ್ನು ಆಹ್ವಾನ ಮಾಡಿದ್ದಾರೆ ಅದರಲ್ಲಿ ಸ್ಪೆಸಿಫಿಕ್ಕಾಗಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ.

"The Committee is of the view that the general provision in Section 5 of the Act is not specific and leaves scope for being misused and to the arbitrary exercise of executive authority. To a pointed question during the course of the evidence the Chief Secretary to Government of Karnataka...

SRI D. B. CHANDRE GOWDA.—Sir I have a point of order.

(ಗೊಂದಲ)

ಅಧ್ಯಕ್ಷರು.— ಏನಿದೆ ಎಂದು ಕೇಳೋಣ. ಕೇಳುವುದಕ್ಕೆ ಮುಂಚೆ ಈ ರೀತಿ...

(ಗೊಂದಲ)

ಅಧ್ಯಕ್ಷರು.— ಆರ್ಡರ್, ಆರ್ಡರ್.

ಶ್ರೀ ಡಿ. ಬಿ. ಚಂದ್ರೇಗೌಡ.— ಈಗ ಎಲ್ಲದಕ್ಕಿಂತ ಹೆಚ್ಚಾಗಿ ಪಾಪ, ಅಲ್ಲಿ ವಾಟಾಳ್ ನಾಗರಾಜ್ ರವರ ಸ್ಥಿತಿ ಚಿಂತಾಜನಕವಾಗಿದೆ. ದಯವಿಟ್ಟು ಅವರ ಜಾಗವನ್ನಾದರೂ ಬದಲಾಯಿಸಿ, ಏಕೆಂದರೆ, ಅವರು...

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಪ್ರತಿಸಾರಿಯು ಇದೇ ಆಗುತ್ತಾ ಇದೆ. ನಾವು ಏನಾದರೂ ಹೇಳುವುದಕ್ಕೆ ಹೋದರೆ ನಮಗೆ ಇವರು ಅಡ್ಡಗಾಲು ಹಾಕುತ್ತಾ ಇದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ಆಕ್ಷೇಪಣೆಯನ್ನು ಸನ್ಮಾನ್ಯ ವಿರೋಧ ಪಕ್ಷದವರು ಎತ್ತಿದ್ದಾರೆ. ಈಗ ಅವರ ಪರವಾಗಿ ಅಥವಾ ನಮ್ಮ ಪರವಾಗಿ ಏನು ಆ ಕಡೆಯಿಂದ ಮಾತನಾಡುತ್ತಾರೆ, ಇದೇನು...

(ಗೊಂದಲ)

ಅಧ್ಯಕ್ಷರು.— ಎದ್ದು ನಿಂತರು.

(ಗೊಂದಲ)

ಡಾ|| ಜೀವರಾಜ ಆಳ್ವ.—ಶಿವರಾಮೇಗೌಡರನ್ನು ಆ ಕಡೆ ಕೂರಿಸಿದರೆ ಅವರಿಗೇ ಒಳ್ಳೆಯದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಶಿವರಾಮೇಗೌಡರು ದಾರಿತಪ್ಪಿ ಹೋಗುತ್ತಿದ್ದಾರೆ, ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.— ಆರ್ಡರ್, ಆರ್ಡರ್ ಪ್ಲೀಸ್, ಹರ್ಷಕುಮಾರ್ ಗೌಡರೇ ಕುಳಿತುಕೊಳ್ಳಿ.

(ಗೊಂದಲ)

MR. SPEAKER.— Nothing will go on record.

(ಗೊಂದಲ)

ಅಧ್ಯಕ್ಷರು.— ಹರ್ಷಕುಮಾರ್ ಗೌಡ್ರೆ, ಈಗ ನಿಮ್ಮನ್ನು ಕರೆದೆನೆ. ನನ್ನನ್ನು ಕೇಳಿ ಅಲ್ಲವೆ ನೀವು ಮಾತನಾಡುವುದು. ಪ್ರತಾಪಚಂದ್ರ ಶೆಟ್ಟರೆ, ಕರಿಯಣ್ಣನವರೆ ಕುಳಿತುಕೊಳ್ಳಿ. ಶಿವರಾಮೇ ಗೌಡರೆ, ಕುಳಿತುಕೊಳ್ಳಿ, ಅಧ್ಯಕ್ಷರನ್ನು ಕೇಳಬೇಡವೆ. Nothing will go on the record. ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಭಾಷಣ ಮಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕ್ರಿಯಾಲೋಪ ಎತ್ತಿದರು. ಆದ್ದರಿಂದ ಕ್ರಿಯಾಲೋಪಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ. ಅಷ್ಟೇ ನಡೆದಿರತಕ್ಕದ್ದು, ಇದಕ್ಕೆ ಗದ್ದಲ ಏತಕ್ಕೆ ಆಗಬೇಕು, ನನಗೆ ಅರ್ಥವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯರು ರೂಲ್ 60ರ ಪ್ರಕಾರ ಚರ್ಚೆ ನಡೆಸುವುದಕ್ಕೆ ನಾನು ನಿಮಗೆ ಹೇಗೆ ಅನುಮತಿ ಕೊಟ್ಟಿದ್ದೇನೆಯೋ ಅದೇ ರೀತಿ ಕಾರ್ಯಕಲಾಪಗಳು ರೂಲ್ಸ್ ಪ್ರಕಾರ ಕ್ರಿಯಾಲೋಪ ಬಂದರೆ ಅದಕ್ಕೂ ಕೂಡ ನಾನು ಆದ್ಯತೆ ಕೊಡಬೇಕಾಗುತ್ತದೆ. ಆ ಕ್ರಿಯಾಲೋಪ ಏನು ಎಂದು ಕೇಳಬೇಕಾಗುತ್ತದೆ. ಅದರ ಮೇಲೆ ನಾನು ನನ್ನ ತೀರ್ಮಾನವನ್ನು ಕೊಡಬೇಕಾಗುತ್ತದೆ. ಇದು ನಡೆದುಕೊಂಡು ಬಂದಿರತಕ್ಕ ಸಂಪ್ರದಾಯ. ಆ ಪಾರ್ಲಿಮೆಂಟರಿ ಸಂಪ್ರದಾಯವನ್ನು ದಯವಿಟ್ಟು ತಾವೆಲ್ಲ ಮನ್ನಣೆ ಮಾಡಬೇಕೆಂದು ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳು

ತ್ತೇನೆ. ನಾವು ಕೆಲವು ಸಮಯ ಹೇಳತಕ್ಕ ವಿಚಾರಗಳು ತೀಕ್ಷ್ಣವಾಗಿರಬಹುದು, ಕಹಿಯಾಗಿರಬಹುದು. ಆದರೆ ಹೇಳತಕ್ಕಂಥಾದ್ದರಲ್ಲಿ ರೀತಿ ಇದೆ, ನೀತಿ ಇದೆ. ಇದನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.— ಅಧ್ಯಕ್ಷರೆ ನಾನು ಈ ಚರ್ಚೆ ಪ್ರಾರಂಭವಾಗುವುದಕ್ಕಿಂತಲೂ ಮುಂಚೆ ತಪ್ಪಾಗಿ....

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಧ್ಯಕ್ಷರೆ, ನಿಮ್ಮ ರೂಲಿಂಗ್ ಬಗ್ಗೆ ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದಾಗ ನಮ್ಮ ವಿರೋಧಪಕ್ಷದ ನಾಯಕರಿಗೆ ಈ ಸದನದಲ್ಲಿ ಮಾತನಾಡಲಿಕ್ಕೆ ಅವಕಾಶ ಇಲ್ಲದೆ ಹೋದರೆ ಹೇಗೆ ?

ಅಧ್ಯಕ್ಷರು.— ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಅಧ್ಯಕ್ಷರೆ ನೀವು ಅವಕಾಶ ಕೊಡಬಹುದು ಆದರೆ ಸಭಾನಾಯಕರು ಏನು ಮಾಡುತ್ತಿದ್ದಾರೆ, ಅವರನ್ನು ಕಂಟ್ರೋಲ್‌ಗೆ ತರಬೇಕು ಸ್ವಾಮಿ,

(ಗೊಂಡಲ)

ಅಧ್ಯಕ್ಷರು.— ಮಾನ್ಯ ಸಿಂಧ್ಯ ಅವರೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಅವಕಾಶವನ್ನು ಕೊಡತಕ್ಕವನು ನಾನು,...

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಧ್ಯಕ್ಷರೆ, ಅವರು ಈ ತರಹ ಮಾತನಾಡುವುದಾದರೆ ಮಾತನಾಡಲಿ, ನಾವು ಕೇಳುತ್ತೇವೆ.

(ಗೊಂದಲ)

MR. SPEAKER.— You were on a point of order. I would like to listen to your point of order. I would like to again listen to the Leader of the Opposition who was on his feet on a point of order. Does he have anything to submit ?

SRI D. B. CHANDRE GOWDA.— I have everything to submit, provided you allow me to do and this House allows me to do.

MR. SPEAKER.— I will allow you to speak.

ಶ್ರೀ ಡಿ. ಬಿ ಚಂದ್ರೇಗೌಡ.— ಅಧ್ಯಕ್ಷರೆ. ನನ್ನ ಸಂಸದೀಯ ಜೀವನ ಇಂದು, ನಿನ್ನೆಯದು ಅಲ್ಲ. ನಾನು ಹತ್ತಾರು ವರ್ಷಗಳ ಕಾಲ, ಸಂಸತ್ತಿನಲ್ಲಿ, ಶಾಸನಸಭೆಗಳಲ್ಲಿ ಕೆಲಸ ಮಾಡಿದ್ದೇನೆ. ಇತ್ತೀಚೆಗೆ ಬಂದವರು, ಪಾಯಿಂಟ್ ಆಫ್ ಆರ್ಡರ್ ಅಂದರೆ ಏನು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಹೀಗೆ ಆದರೆ ಹೇಗೆ ?

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಧ್ಯಕ್ಷರೆ, ಹೀಗೆ ಆದರೆ ನಾವು ಹೇಗೆ ಚರ್ಚೆ ಮಾಡಬೇಕು ಎಂದು ಹೇಳಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಬುದ್ಧಿಗೆ ಕೆಲಸ ಇಲ್ಲ, ಗಂಟಲಿಗೆ ಅಷ್ಟೇ ಕೆಲಸ ಅಂದರೆ ನನ್ನ ಪಾಯಿಂಟ್ ಆಫ್ ಆರ್ಡರ್ ಇಲ್ಲ, ಇಲ್ಲಿ ತೋಳುಬಲ, ಗಂಟಲುಬಲ ಅಷ್ಟೇ ಕೆಲಸ ಮಾಡುವುದಾದರೆ ಹಾಗೆಯೇ ನಡೆಸಿಕೊಂಡು ಹೋಗಲಿ.

(ಕೆಲವು ಸದಸ್ಯರು ಮಾತನಾಡುತ್ತಿದ್ದರು)

(ಗೊಂದಲ)

MR. SPEAKER.— I am unable to understand myself. When a point of order has been raised by the Leader of the Opposition, I have called upon him to give expression to his point of order. Would you kindly listen to me ? There is a limit to it. ನಾನು ಅವರನ್ನು ಕರೆದಿದ್ದೇನೆ. ಅವರು, ಅವರ ಕ್ರಿಯಾಲೋಪವನ್ನು ವಿಶ್ಲೇಷಣೆ ಮಾಡುತ್ತಾರೆ. ಅದರ ಮೇಲೆ ರೂಲಿಂಗ್ ಕೊಡುತ್ತೇನೆ. ಅವರಿಗೆ ಅವಕಾಶ ಕೊಡದೇ ಹೋದರೆ, ಈ ಸಭೆಗೆ ಗೌರವ ತರತಕ್ಕದ್ದಲ್ಲ, ದಯಮಾಡಿ ನನ್ನ ಜೊತೆ ಸಹಕಾರ ಮಾಡಿ. ಮತ್ತೆ ವಿರೋಧ ಪಕ್ಷದ ನಾಯಕರಲ್ಲಿ ನನ್ನ ಮನವಿ ಏನೆಂದರೆ, ನಿಮಗೆ ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡತಕ್ಕವನು ನಾನು ಆದ್ದರಿಂದ ನಾನು ತಮ್ಮನ್ನು ಕರೆಯುತ್ತಿದ್ದೇನೆ. ತಾವು ತಮ್ಮ ಕ್ರಿಯಾಲೋಪವನ್ನು ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಅಧ್ಯಕ್ಷರೆ, ಈ ವಿಚಾರವನ್ನು ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಮುಂಚೆ ನಾನು ತಮ್ಮಲ್ಲಿ ಒಂದು ಅರಿಕೆ ಮಾಡಿದೆ. ಈ ಚರ್ಚೆ ಸಂಸತ್ತು ಮತ್ತು ಶಾಸನ ಸಭೆಗಳ ಸಮರಕ್ಕೆ ನಾಂದಿಯಾಗಬಾರದು ಎನ್ನತಕ್ಕ ಮಾತನ್ನು ಹೇಳಿದ್ದೆ. ಈಗ ಸನ್ಮಾನ್ಯ ಸದಸ್ಯರು ರಾಜ್ಯಸಭೆಯ ವರದಿಯನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ, ಅದನ್ನು ಕೋಟ್ ಮಾಡುತ್ತಿದ್ದಾರೆ, ಅದಕ್ಕೆ ಅವಕಾಶ ಇದೆ ಅಂದರೆ ತಾವು ಅಪ್ಪಣೆ ಕೊಟ್ಟರೆ ನನ್ನದೇನೂ ಅಭ್ಯಂತರ ಇಲ್ಲ, My point of order is whether the report of the Committee of the Rajya Sabha could be discussed on the floor of this House, could be quoted here ? If it is allowed it is well and good. If it is not, I leave it to you.

ಶ್ರೀ ಎಂ. ವೀರಪ್ಪ ಮೊಯಿಲಿ.——ಮಾನ್ಯ ವಿರೋಧ ಪಕ್ಷದ ನಾಯಕರು ಏನು ವಿಧಿ ಬಿಂದುವನ್ನು ಎತ್ತಿದ್ದಾರೆ ಆ ವಿಧಿ ಬಿಂದುವಿನ ವಿಚಾರ ಏನೆಂದರೆ ರಾಜ್ಯ ಸಭೆಯ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ಏನು ಇದೆ ಅದರ ವರದಿಯನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲ ಎಂದು ಏನು ವಾದ ಹೇಳಿದ್ದಾರೆ. ಅದನ್ನು ನಾವೂ ಕೂಡ ಸರ್ವಥಾ ಒಪ್ಪುತ್ತೇವೆ, ಏಕೆಂದರೆ, ಅದನ್ನು ಚರ್ಚೆ ಮಾಡುವುದಿಲ್ಲ. ಸನ್ಮಾನ್ಯ ಸದಸ್ಯರ ಉದ್ದೇಶ ಕೂಡ ಅದು ಅಲ್ಲ, ಅದು ನಡೆಯುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನು ಕೆಲವು ಸದಸ್ಯರುಗಳು ಕೆಲವು ಅಂಶಗಳನ್ನು ಕ್ವೋಟ್ ಮಾಡುತ್ತಿದ್ದಾರೆ. ಇದು ಪತ್ರಿಕೆಯಲ್ಲಿ ಕೂಡ ಬಂದಿದೆ. This report which has been presented to the Rajya Sabha, has already became a public document...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.——ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಯಾರೂ ಕೂಡ ಸದ್ದು ಮಾಡಬಾರದು, ಅವರಿಗೆ ತೊಂದರೆ ಮಾಡಬಾರದೆಂದು ತಾವು ಹೇಳಿದ್ದೀರಿ ಅದೇ ರೀತಿ ನಾನು ಮಾತನಾಡಲು ಎದ್ದು ನಿಂತಿದ್ದೇನೆ, ನನಗೆ ಮಾತನಾಡಲು ಅವಕಾಶ ಕೊಡಬೇಕು. ತಾವು ಹೇಳಿದ್ದು ಎಲ್ಲರಿಗೂ ಅನ್ವಯವಾಗುತ್ತದೆ. ನಾನು ಕೂಡ ಈ ಸದನದಲ್ಲಿ ೧೦-೧೫ ವರ್ಷಗಳಿಂದ ಸದಸ್ಯನಾಗಿದ್ದೇನೆ, ಅನೇಕ ಬಾರಿ ಸಮಿತಿಗಳ ವರದಿಯನ್ನು We have quoted it for corroboration, for the purpose of discussion on some other subject...ಆದ್ದರಿಂದ ಇವತ್ತು ಈ ಸದನದಲ್ಲಿ ಆ ಸಮಿತಿಯ ವರದಿಯ ಮೇಲೆ ಚರ್ಚೆಗೆ ಅನುಮತಿಯನ್ನು ಕೊಟ್ಟಿಲ್ಲ. ನಾವು ಅದರಲ್ಲಿ ಬಗ್ಗೆ ಚರ್ಚೆ ಮಾಡತಕ್ಕಂತಹ ಸಾಹಸಕ್ಕೂ ಕೂಡ ಹೋಗುತ್ತಿಲ್ಲ. ಆ ಉದ್ದೇಶ ಸನ್ಮಾನ್ಯ ಸದಸ್ಯರಿಗೆ ಕೂಡ ಇಲ್ಲ. ಪತ್ರಿಕೆಯಲ್ಲಿ ಬಂದಂತಹ ವಿಚಾರ ಯಾವುದು ಇದೆ ಅದು ಸಾರ್ವಜನಿಕರ ಸ್ವತ್ತಾಗಿದೆ. ಅದನ್ನು ಕ್ವೋಟ್ ಮಾಡಬಾರದು, ಅದರ ವಿಷಯವನ್ನೇ ಹೇಳಬಾರದೆಂದು ಹೇಳಿದರೆ ಬಹುಶಃ ಸದನದ ಯಾವುದೇ ಸಂಪ್ರದಾಯಕ್ಕೆ ತಕ್ಕುದಾದಂತಹ ವ್ಯಾಖ್ಯಾನ ಅದು ಅಲ್ಲವೆಂದು ತಮ್ಮ ಅವಗಾಹನೆಗೆ ತರುವುದಕ್ಕೆ ಇಚ್ಛಿಪಡುತ್ತೇನೆ.

MR. SPEAKER.—While admitting this debate, it is a time honoured convention that no report of either House of Parliament could be a subject matter of discussion of this House. I stick by that but we have to draw a line whether any aspect of the report which has direct bearing on the subject matter—could it be or could

not be referred to. I am sure that the Member is entitled to refer to it. You cannot discuss upon it...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಅದಕ್ಕೇ ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಹಿಂದೆ ಚೀಫ್ ಸೆಕ್ರೆಟರಿಯವರು ಏನು ಒಂದು ಆಜ್ಞೆಯನ್ನು ಹೊರಡಿಸಿ ಅದರ ಪ್ರಕಾರ ಕೆಲವು ಹೆಸರುಗಳನ್ನು ಟೆಲಿಗ್ರಾಫ್ ಅಥಾರಿಟಿಗೆ ಕೊಟ್ಟಿದ್ದರು, ಅದಕ್ಕೆ ಪೂರಕವಾಗಿ ಸಪೋರ್ಟಿಂಗ್ ಎವಿಡೆನ್ಸ್ ಏನಿದೆ ಅದನ್ನು ಮಾತ್ರ ಹೇಳುತ್ತೇನೆ. ಆ ರಿಪೋರ್ಟ್ ಅನ್ನು ನಾನು ಚರ್ಚೆ ಮಾಡುತ್ತಿಲ್ಲ. ಅಂದರೆ ನಮ್ಮ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಸತೀಶ್ ಚಂದ್ರನ್‌ರವರು ಕಾಲದಲ್ಲಿ ಯಾವ ರೀತಿಯಾಗಿ ಒಂದು ಲೆಟರ್ ಇಷ್ಯೂ ಆಗಿತ್ತೋ ಅದೇ ರೀತಿಯಾಗಿ ಅಲ್ಲಿ ಮುಖ್ಯ ಕಾರ್ಯದರ್ಶಿಗಳನ್ನು ಎವಿಡೆನ್ಸ್‌ಗೆ ಕರೆದಾಗ ಆ ಕಮಿಟಿ ಮುಂದೆ ಅವರು ಏನು ಹೇಳಿದರು ಅನ್ನತಕ್ಕಂಥದ್ದನ್ನು ಮಾತ್ರ ನಾನು ಹೇಳುತ್ತೇನೆಯೇ ಹೊರತಾಗಿ ಆ ವರದಿಯ ಬಗ್ಗೆ ಚರ್ಚೆ ಮಾಡುವುದಿಲ್ಲ.

"to a pointed question during the course of evidence the Chief Secretary to Karnataka was asked whether there had been any misuse of...

ಳ-೦೫ ಪಿ. ಎಂ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೆ, ರಾಜ್ಯಸಭಾ ಕಮಿಟಿಯಾದ ಸಬಾರ್ಡಿನೇಟ್ ಲೆಜಿಸ್ಲೇಷನ್‌ನ ವರದಿಯ ಮೆರಿಟ್ಸ್ ಅಂಡ್ ಡೀಮೆರಿಟ್ಸ್ ಬಗ್ಗೆ ಇಲ್ಲಿ ಚರ್ಚೆ ಮಾಡಬಾರದೆಂಬಂದರಲ್ಲಿ ಅರ್ಥವಿದೆ. ಆದರೆ it is a report given to the people of this country. It has become a public document and for that matter illiterate farmer like me it is a first information I have received about what has happened in Karnataka. I treat this as a first information report and we can use it as a piece of evidence also. When we come to the stage of trial. ಅದ್ದರಿಂದ We should be clear about this. We are barred discussing merits and demerits of the report but not use it as a piece of evidence–definitely not...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದರಲ್ಲಿ ಚೀಫ್ ಸೆಕ್ರೆಟರಿಯವರು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಎವಿಡೆನ್ಸ್‌ನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. To a pointed question during the course of the evidence the Chief Secretary of Karnataka was asked whether there had been any misuse of authority in the telephone tapping incident of 1988 ರಲ್ಲಿ ನಾವು ಏನು ರೈಸ್ ಮಾಡಿದ್ದೇವೆ with reference to that ಆಗ ಕೇಳಿದಾಗ ಅವರು ಹೇಳಿದ್ದಾರೆ. The Chief Secretary informed the Committee that the power had been exercised by the competent authority. To a pointed query as to who were the persons authorised in this behalf and in whose possession the list of those people remained. The Chief Secretary informed that he would inform the Committee in due course in writing. The Committee was informed by the Chief Secretary vide his letter dated 30th April 1990, which is as under :

"How was the list drawn up ? Who had drawn up the list ? Who were kept advised and how ?

SRI R. V. DESHPANDE.—What is the number ?

ಶ್ರೀ ಡಿ. ಬಿ. ಚಂದ್ರೇಗೌಡ.—ಕ್ವೆಶ್ಚನ್ ನಂಬರ ಹೇಳಿ.

SRI M. MALLIKARJUNA KHARGE.—Whatever information I have got I am reading. You cannot ask me what is the number...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರ್ನನ್ನು ನೋಡಿಕೊಳ್ಳಿ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರ್ನನ್ನು ನೋಡಿಕೊಳ್ಳಿ. ಬೇಡ ಎಂದು ನಾನು ಹೇಳುವುದಿಲ್ಲ. ನಾನು ಏನು ಕ್ವೋಟ್ ಮಾಡಬೇಕೋ ಅದನ್ನು ಹೇಳುತ್ತಿದ್ದೇನೆ...

MR. SPEAKER.—Just mention it. Don't quote...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರ ಆನ್ಸರ್ ಮಾತ್ರ ಹೇಳಿ ಮುಗಿಸುತ್ತೇನೆ. Ans. The list of numbers to be intercepted and the orders thereon were made by the officers who were authorised to exercise the powers under sub-section (2) of Sec. 5 of the Indian Telegraphic Act. The numbers were added or deleted by the authorised officer in consultation and with prior permission of the Chief Minister. No other functionary was kept advised of the list...

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.—ಮುಖ್ಯ ಮಂತ್ರಿಗಳು ಆಜ್ಞೆ ಮಾಡಿದ್ದು ಅವರಲ್ಲಿದೆ. ಅವರೇ ಈಗ ಅಧಿಕಾರದಲ್ಲಿದ್ದಾರೆ. ಎಲ್ಲಾ ದಾಖಲೆಗಳೂ ಅವರ ಹತ್ತಿರ ಇವೆ. ಅವನ್ನು ತರಿಸಲಿ.

(ಗೊಂದಲ)

SRI D. B. CHANDRE GOWDA.—My point is this. This letter is in writing. I am trying to help...

(ಗೊಂದಲ)

SRI D. B. CHANDRE GOWDA.—I am on a point order. I am trying to bring it to your notice an important point. The important point is simply this. The Hon'ble Member while quoting said, whether there was any misuse of telephone. To the specific question, has he got any answer, he says that evidence is adduced through a letter dated 30th April 1990. Therefore, my submission to you is that if he has a full text of the letter, let him produce so that let the whole House know, let the whole world know through this House as to what the reply is. He cannot choose to quote a particular portion of it which is detrimental to the interest 'X', advantageous to...

MR. SPEAKER.—He is quoting from the public document.

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಹೇಳುವುದಕ್ಕೆ ಮುಂಚೆ ನಾನು ಅದನ್ನೇ ಹೇಳುತ್ತಿದ್ದೇನೆ. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಆ ಸಮಿತಿಗೆ ಕೊಟ್ಟಿರತಕ್ಕ ವಿವರಣೆ ಏನಿದೆ ಅದನ್ನು ಪತ್ರದ ಮುಖಾಂತರ ಕೊಟ್ಟಿದ್ದಾರೆಂದು ಹೇಳಿದರು. ಇವತ್ತು ಅದನ್ನು ತಾವು ಪಬ್ಲಿಕ್ ಡಾಕ್ಯುಮೆಂಟ್ ಅಂಥ ಹೇಳಿದಿರಿ. ಹಾಗಾದರೆ ಆ ರಿಪೋರ್ಟ್ ಕೂಡ ಪಬ್ಲಿಕ್ ಡಾಕ್ಯುಮೆಂಟ್ ಆಗುತ್ತದೆ.

MR SPEAKER.—The report, I said. I don't know what is in the report, whether it is part of the report. I don't know.

SRI D. B. CHANDRE GOWDA.—That is what he says.

SRI M. MALLIKARJUN KHARGE.—It is part of the report.

SRI D. B. CHANDRE GOWDA.—My submission is, let the whole letter is placed on the Table of the House. He cannot read a selective portion of it.

MR. SPEAKER.—Sri Mallikarjuna Kharge is also an Hon'ble Member of this House as much as you are. Now he does not have a copy of the letter of the then Chief Secretary. He is only quoting from some public document. If you have in possession, you can quote it or you can spell it out.

(ಗೊಂದಲ)

SRI D. B. CHANDRE GOWDA.—With your permission, I do it. I place the entire letter on the Table of the House. I will place the entire letter on the Table of the House with your kind permission.

I am now placing this document on the table of the House.

(The letter was given to the Chair by the Leader of the Opposition)

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೇ, ಯಾವುದೇ ಒಂದು ಭಾಗವನ್ನು ಓದಿ ಸದನವನ್ನು ತಪ್ಪುದಾರಿಗೆ ಎಳೆಯಬಾರದು. ಸಮಗ್ರವಾಗಿ ಎಲ್ಲವನ್ನು ಓದಿ ಹೇಳಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇನ್ಯಾವ ವಿಚಾರದಲ್ಲೂ ಅಲ್ಲ, ಫೋನ್ ಕದ್ದಾಲಿಕೆ ವಿಚಾರದಲ್ಲಿ ಹೆಗಡೆಯವರು ರಾಜೀನಾಮೆ ಕೊಟ್ರಲ್ಲ ಅದನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೊಡೆಯುವುದಕ್ಕೆ ಮುಂಚೆ ಅವರೇ ಅಳುತ್ತಿದ್ದಾರೆ.

MR. SPEAKER.—Nothing is going to the record.

x x

*(Not recorded as ordered by the Chair)

x x

(ಗೊಂದಲ)

ಅಧ್ಯಕ್ಷರು.—ನಾನು ಈಗಾಗಲೆ ರೂಲಿಂಗ್ ಕೊಟ್ಟಿದ್ದೇನೆ. ನಾನು ಯಾವ ಮಾನ್ಯ ಸದಸ್ಯರನ್ನು ಕರೆಯುತ್ತೇನೆ, ಅವರು ಏನು ಹೇಳುತ್ತಾರೆ, ಅದು ಮಾತ್ರ ಅಧಿಕೃತವಾದಂಥ ಕಡತಕ್ಕೆ ಹೋಗುತ್ತದೆ. ಬಾಕಿ ಸೈಡ್ ಕಾನ್‌ವರ್‌ಜೇಷನ್ಸ್ ಯಾವುದೂಕೂಡ ಅಧಿಕೃತ ಕಡತಕ್ಕೆ ಹೋಗುವುದಿಲ್ಲ.

SRI VEERENDRA PATIL.—I want to clarify the position so far as the letter written by the Chief Secretary to the Rajya Sabha committee on Subordinate Legislation, is concerned. We have received a communication from the Legislative council Secretariat i.e, the Secratary Legislative Council Wrote to our Chief Secretary that he wanted to have a discussion and he wanted to know whether any communication from the Chief Secretary or from the State Government to the Rajya Sabha Subordinate Legislation committee Whatever the Hon'ble Leader of the Opposition has tried to placce it on the table of the House, about 2-3 days back, I have already furnished that information to the Secretary, Legislative Council and in the covering letter, the Chief Secretary has made it clear that although we have furnished this information, before this information is made use of the Chairman should make sure whether disclosing this information would amount to breach of privilege because this is the information that has been furnished to the Rajya Sabha. So, it is not that something new or something which has

been leaved out from the Government that the Leader of the Opposition is trying to place it on the Table of the House. I have already furnished that information. I am prepared to furnish that information to you also, to the Chair. It is for you because suppossing if I, on my own, give that information or if I place that information on the Table of the House, then, tomorrow in the Rajya Sabha, some member might raise a point saying that the Chief Minister of Karnataka has committed a breach of privilege of this House, and he should not have furnished this information to the Legislature. that doubt was lrking in our mind. Therefore, we did not place that information on the Table of the House. Since the Leader of the Opposition has already placed it on the Table of the House, you can verify whether it is the same document or not, and let the Hon'ble Member make use of that document, I have absolutely no objection.

ಶ್ರೀ ರಾಮಕೃಷ್ಣ ಹೆಗಡೆ .—ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಪತ್ರದ ವಿಚಾರದಲ್ಲಿ ಮಾತನಾಡುತ್ತಾ, ಅದನ್ನು ಏನಾದರೂ ಕೌನ್ಸಿಲ್‌ಗೆ ಕಳುಹಿಸಿದ್ದನ್ನು ಸದನದ ಮುಂದೆ ಇಟ್ಟರೆ ಹಕ್ಕಿನ ಚ್ಯುತಿ ಆಗಬಹುದೇನೂ ಎಂಬ ಸಂದೇಹ ತಮ ಮನಸ್ಸಿನಲ್ಲಿ ಇದೆಯೆಂದು ಹೇಳಿದರು. ಆ ಭಯ ಅವರಿಗೆ ಬೇಕಾಗಿಲ್ಲ, ನನ್ನ ಅಥಾರಿಟಿಯನ್ನು ನೀವು ಒಪ್ಪಿಕೊಳ್ಳಬೇಡಿ, ಅದರ ಮೇಲೆ ನೀವು ಪೂರಾ ಡಿಫೆಂಡ್ ಆಗಬೇಕೆಂದು ಹೇಳುವುದಿಲ್ಲ. ಹಕ್ಕುಚ್ಯುತಿ ವಿಚಾರ ಯಾವಾಗ ಬರುತ್ತದೆ ಎಂದರೆ, ಆ ಕಮಿಟಿ ಅಥವಾ ಕಮಿಟಿ ಸದಸ್ಯರ ಮೇಲೆ ಯಾವುದಾದರೂ ಒಂದು ಆಪಾದನೆ ಮಾಡಿದಾಗ ಅಥವಾ ಸುಳ್ಳು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವಾಗ ಬಂದರೂ ಬರಬಹುದು. ಇದು ಸರ್ಕಾರಿ ರೆಕಾರ್ಡ್, ನೀವೇನಾದರೂ ಹೇಳಿದರೆ ಈ ರೆಕಾರ್ಡನ್ನು ಇಲ್ಲಿ ಇಟ್ಟರೆ, ಇದು ಅಫಿಷಿಯಲ್ ಸೀಕ್ರೆಟ್ ಆ್ಯಕ್ಟ್‌ಗೆ ವಿರೋಧವಾಗುತ್ತದೆ ಎಂದರೆ ಆಗ ನಾವು ಒಪ್ಪಬಹುದು. ಆದರೆ ಒಂದು ಪತ್ರ ಇದೆ, ಆ ಪತ್ರದಲ್ಲಿ ೫ ಪ್ರಶ್ನೆಗಳಿಗೆ ಉತ್ತರ ಇದೆ, ಆ ೫ ಪ್ರಶ್ನೆಗಳ ಉತ್ತರಗಳ ಪೈಕಿ ಕೇವಲ ಒಂದೇ ಒಂದು ಉತ್ತರವನ್ನು ಯಾವುದೇ ಕಮಿಟಿ ಇರಲಿ, ಅದು ಔಟ್ ಆಫ್ ಕಾಂಟೆಕ್ಸ್ಟ್‌ನ್ನು ಕ್ವೋಟ್ ಮಾಡಿರುವುದನ್ನು ಇಲ್ಲಿ ಇವರು ಕ್ವೋಟ್‌ಮಾಡಲು ನಾವು ಬಿಡುವುದಿಲ್ಲ.

SRI M. VEERAPPA MOILY .—We cannot allow.

SRI RAMAKRISHNA HEGDE .—Who are you to allow it or not. It is the Speaker.

MR SPEAKER .—I am trying to understand Mr. Ramakrishna Hegde. I am sorry.—I could not catch.

ಶ್ರೀ ರಾಮಕೃಷ್ಣ ಹೆಗಡೆ .—ಯಾವುದೇ ಒಂದು ಸರ್ಕಾರಿ ಕಾಗದ ಪತ್ರವನ್ನು ಅಂದರೆ ಒಂದು ಭಾಗವನ್ನು ಯಾವುದೇ ಸದಸ್ಯ ಅಥವಾ ಮಂತ್ರಿಗಳು ಕ್ವೋಟ್ ಮಾಡಿದರೂ ಇಡೀ ಡಾಕ್ಯುಮೆಂಟ್‌ನ್ನು ಈ ಸದನದ ಮೇಜಿನ ಮೇಲೆ ಇಡಬೇಕು ಎಂಬುದು ಕಡ್ಡಾಯವಾದುದು. ಅದು ತಮಗೆ ಗೊತ್ತುಂಟು

ಶ್ರೀ ಎಸ್. ಬಂಗಾರಪ್ಪ.—ಎಲ್ಲಿದೆ ?

ಅಧ್ಯಕ್ಷರು.—ದಯವಿಟ್ಟು ತಾವು ಮುಂದುವರೆಸಿ.

ಶ್ರೀ ರಾಮಕೃಷ್ಣ ಹೆಗಡೆ.—ಆದ್ದರಿಂದ ಯಾವುದೇ ಪತ್ರ ಇರಲಿ ಅಥವಾ ಫೈಲ್ ಇರಲಿ. ಅದರಿಂದ ಒಂದು ಭಾಗ ಯಾವುದು ನಿಮಗೆ ಅನುಕೂಲವಾಗುತ್ತದೋ ಅದನ್ನು ಮಾತ್ರ ಇಲ್ಲಿ ಓದಿ ಹೇಳುವುದು ಸತ್ಯಶೋಧನೆಗೆ ಅನುಕೂಲವಾಗುವುದಿಲ್ಲ, ಬೇರೆಯವರ ಚಾರಿತ್ರ್ಯ ವಧೆ ಮಾಡುವುದಕ್ಕೆ ಅನುಕೂಲವಾಗತಕ್ಕಂಥದ್ದು. ನಿಮ್ಮ ಉದ್ದೇಶ ಅದಿದ್ದರೆ ಅದು ಮಾಡಿ. ಆ ಮಾತು ಬೇರೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಆದರೆ ನಿಜವಾಗಿ ಸತ್ಯ ಎಲ್ಲಿದೆ ಎಂದು ಹೇಳುತ್ತೇನೆ. ಹಿಂದೆ ಕುಳಿತಿರುವ ಶಿವರಾಮೇಗೌಡರು ನಿಮಗೆ ಸತ್ಯ ಬೇಕಾಗಿಲ್ಲ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ.

ಸತ್ಯ ಇರತಕ್ಕದ್ದು ಆ ಕಾಗದದಲ್ಲಿ, ಆ ಪತ್ರದಲ್ಲಿ. ಸರ್ಕಾರಿ ಕಡತದಲ್ಲಿ ಸತ್ಯ ಇದೆ. ಆ ಕಡತ ತನಿಖೆ ಸತ್ಯ ಹೊರಗಡೆ ಬರುತ್ತದೆ.

(ವಿರೋಧಪಕ್ಷದ ಕೆಲವು ಸದಸ್ಯರು ಮೇಜು ಕುಟ್ಟಿದರು)

† ಶ್ರೀ ವೀರೇಂದ್ರ ಪಾಟೀಲ್.—ನಾನು ಒಂದು ಸ್ಪಷ್ಟೀಕರಣ ನೀಡಬೇಕಾದ ಆವಶ್ಯಕತೆ ಇದೆ. ನಮ್ಮ ಮುಖ್ಯ ಕಾರ್ಯದರ್ಶಿಗಳು ರಾಜ್ಯಸಭಾ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಗೆ ಏನು ಪತ್ರ ಬರೆದಿದ್ದಾರೆ ಅದು ಕೇವಲ ಆ ಕಮಿಟಿಗೆ ಮಾತ್ರ ಬರೆದಿದ್ದುದು. ಅದನ್ನು ಆ ಕಮಿಟಿಯವರು ಎಷ್ಟರ ಮಟ್ಟಿಗೆ ಉಪಯೋಗ ಮಾಡಬೇಕು, ಒಂದೇ ಕ್ಲಾಸ್ ಉಪಯೋಗ ಮಾಡಬೇಕೇ ಒಂದೇ ಕೊಶ್ಚನ್, ಆನ್ಸರ್ ಉಪಯೋಗ ಮಾಡಬೇಕಾ ಅಥವಾ ಎಲ್ಲಾ ಉಪಯೋಗ ಮಾಡಬೇಕೇ ಎಂಬುದು ಅವರಿಗೆ ಕೇಳಬೇಕೇ ಹೊರತು ನನಗೆ ಕೇಳಿದರೆ ಅಥವಾ ಇವರಿಗೆ ಕೇಳಿದರೆ ಅರ್ಥ ಇಲ್ಲ. ಈಗ ಪ್ರಶ್ನೆ ಏನು ಬಂತು ಎಂದರೆ, ನಮಗೆ ಮನಸ್ಸಿನಲ್ಲಿ ಅಳುಕು. ಈ ಇನ್‌ಫರ್ಮೇಷನ್ ಕೇವಲ ರಾಜ್ಯಸಭೆಗೆ ಕೊಟ್ಟಿರುವುದರಿಂದ ಕೆಳಮನೆಯಲ್ಲಿ ಅಥವಾ ಮೇಲ್ಮನೆಯ ಲೆಜಿಸ್ಲೇಚರ್‌ನಲ್ಲಿ ಇದನ್ನು ಉಪಯೋಗ ಮಾಡಬಹುದೋ ಇಲ್ಲವೋ ಅಥವಾ ಇದನ್ನು ಉಪಯೋಗ ಮಾಡುವುದಕ್ಕೆ, ಅವಕಾಶ ಮಾಡಿಕೊಟ್ಟಿದ್ದೇವೆ ಎಂದು ನಾಳೆ ಹಕ್ಕುಚ್ಯುತಿ ಪ್ರಶ್ನೆ ಬರುತ್ತದೋ ಎಂಬುದನ್ನು ವಿಚಾರಿಸಿ ಇದನ್ನು ಉಪಯೋಗ ಮಾಡಿ ಎಂದು ಹೇಳಿದ್ದೇವೆಯೇ ಹೊರತಾಗಿ ಕೊಡುವುದಿಲ್ಲ ಎಂದು ಹೇಳಿಲ್ಲ. ಒಂದು ಮಾತನ್ನು ಗಮನದಲ್ಲಿಡಬೇಕು. ಇವತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಛೇರ್ಮನ್ನರು ಏನು ಇನ್‌ಫರ್ಮೇಷನ್ ಕೇಳಿದ್ದರು. ಆ ಇನ್‌ಫರ್ಮೇಷನ್ ಕೊಟ್ಟಿದ್ದೇವೆ. ನಾವು ಕೊಟ್ಟಿಲ್ಲದೇ ಇದ್ದಿದ್ದರೆ ಏನೋ ಕುಂಟುನೆಪ ಹಾಕಿ ತಪ್ಪಿಸಿಕೊಳ್ಳುತ್ತಿದ್ದಾರೆ ಎಂಬ ಆರೋಪಕ್ಕೆ ನಾವು ಗುರಿಯಾಗಬೇಕಾಗಿತ್ತು. ಆದರೆ ಅವರು ಕೇಳಿದ ಇನ್‌ಫರ್ಮೇಷನ್ ಕೊಟ್ಟಿದ್ದೇವೆ. ಕೊಟ್ಟು ಕವರಿಂಗ್ ಲೆಟರ್‌ನಲ್ಲಿ ನಾವು ಕೇಳಿದಂಥ ಇನ್‌ಫರ್ಮೇಷನ್ ಕೊಟ್ಟಿದ್ದೇವೆ, ಅದನ್ನು ಉಪಯೋಗ ಮಾಡಿದರೆ ಏನಾದರೂ ಹಕ್ಕುಚ್ಯುತಿ ಆಗುತ್ತದೆಯೇ ಎನ್ನುವುದರ ಬಗ್ಗೆ ತಾವು ಪರಿಶೀಲನೆ ಮಾಡಿ ಉಪಯೋಗ ಮಾಡಿ ಎಂದು ಹೇಳಿದ್ದೇವೆ. ಅದರಲ್ಲಿ ತಪ್ಪೇನಿಲ್ಲ. ಅವರಿಗೆ ಏನು ಕೊಟ್ಟಿದ್ದೇನೊ ಅದನ್ನು ತಮಗೂ (ಸಭಾಧ್ಯಕ್ಷರಿಗೆ) ಕೊಡುವುದಕ್ಕೆ ನಾನು ತಯಾರಿದ್ದೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಕೇಳಿದ್ದು, ಬಹುಶಃ ನನ್ನ ಸ್ನೇಹಿತರೂ ಈ ಮನೆಯ ಸದಸ್ಯರೂ ಆದ ಮಲ್ಲಿಕಾರ್ಜುನ ಖರ್ಗೆಯವರು ಕ್ವಶ್ಚನೇರ್‌ನಲ್ಲಿ ಒಂದೇ ಕ್ವಶ್ಚನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಎಂದು ಬಹುಶಃ ಈ ಮನೆಯಲ್ಲಿ ಅನೇಕರು ಹೊಸಬರಲ್ಲ. ಅನೇಕ ವರ್ಷಗಳಿಂದ ಇದ್ದೇವೆ. ಈ ಸಭೆಯ ಕಾರ್ಯಕಲಾಪಗಳು ಸರಿಯಾಗಿ ನಡೆಯಬೇಕಾದರೆ ಅವರು ತಮಗೆ ತಿಳಿದಂತೆ ಭಾಷಣ ಮಾಡುತ್ತಾರೆ. ಇದನ್ನು ಏತಕ್ಕೆ ಪ್ರಸ್ತಾಪ ಮಾಡಲಿಲ್ಲ, ಅದನ್ನು ಏತಕ್ಕೆ ಪ್ರಸ್ತಾಪ ಮಾಡಲಿಲ್ಲ. ಹೀಗೆ ಏತಕ್ಕೆ ಭಾಷಣ ಮಾಡಲಿಲ್ಲ ಎಂಬುದರಲ್ಲಿ ಅರ್ಥವಿಲ್ಲ. ನೀವು ನಿಮಗೆ ತಿಳಿದದ್ದು ಭಾಷಣ ಮಾಡುತ್ತೀರಿ. ನಿಮ್ಮ ವಿಚಾರಗಳನ್ನು ನೀವು ತಿಳಿದಂತೆ ಹೇಳುತ್ತೀರಿ. ನಮ್ಮ ವಿಚಾರಗಳನ್ನು ನಾವು ತಿಳಿದಂತೆ ಹೇಳುತ್ತೇವೆ. ಹೆಗಡೆಯವರು ಹೇಳಬಹುದು, ಏನ್ರಿ ಪಾಟೀಲರೆ ಮುಖ್ಯಮಂತ್ರಿಗಳಾಗಿ ನೀವು ಐದಾರು ಕ್ವಶ್ಚನ್‌ಗೆ ಉತ್ತರ ಕೊಟ್ಟು, ಒಂದೇ ಒಂದು ಕ್ವೆಶ್ಚನ್ ಬಗ್ಗೆ ಪ್ರಸ್ತಾಪ ಮಾಡುತ್ತೀರಿ ಎಂದು ನನ್ನ ಮೇಲೆ ದೋಷ ಮಾಡಬಹುದೇ ಹೊರತಾಗಿ ಮಾನ್ಯ ಸದಸ್ಯರ ಮೇಲೆ ಮಾಡುವಂಥ ಅಧಿಕಾರ ಯಾರಿಗೂ ಇಲ್ಲ. ಏಕೆಂದರೆ ನಮಗೆ ತಿಳಿದದ್ದು ಮಾತನಾಡುತ್ತೇವೆ. ಈಗ ನಿಮಗೆ ಅನುಕೂಲವಾಗುವಂತೆ ಭಾಷಣ ಮಾಡು ಎಂದರೆ ಅವರು ಮಾಡುವ ಹಾಗಿಲ್ಲ. ಅದನ್ನು ನೀವು ತಿಳಿದುಕೊಳ್ಳಬೇಕು, ಅಥವಾ ಅವರಿಗೆ ಅನುಕೂಲವಾಗುವ ಹಾಗೆ ನೀವು ಭಾಷಣ ಮಾಡಿ ಎಂದು ನಿಮಗೆ ಅವರು ಹೇಳುವಹಾಗಿಲ್ಲ. ಅವರು ತಮ್ಮ ಅನುಭವಗಳನ್ನು ಹೇಳಬಹುದು. ಮಾನ್ಯ ಸದಸ್ಯರು ನಮಗೆ ಈ ರೀತಿಯಿಂದ ಆಯಿತು ಎಂದು ಹೇಳಬಹುದು. ನನಗೆ ಆಶ್ಚರ್ಯವಾಗುತ್ತದೆ. ಯಾವುದೋ ಪೇಪರ್ ಕೋಟ್ ಮಾಡಿದ ಕೂಡಲೆ ಎಲ್ಲಿದೆ ಆ ಫೈಲ್ ಎಂದರೆ ಪಾಪ, ಖರ್ಗೆಯವರು ಫೈಲ್ ಪುಟಾ ಅಪ್ ಮಾಡುತ್ತಾರಾ? ಫೈಲ್ ಸರ್ಕಾರದ ಹತ್ತಿರ ಇರುತ್ತದೆ. ಏನಾದರೂ ಕೇಳಬೇಕಾದರೆ ಸರ್ಕಾರವನ್ನು ಕೇಳಬೇಕೇ ಹೊರತಾಗಿ ಯಾರಾದರೂ ಒಬ್ಬ ಮಾನ್ಯ ಸದಸ್ಯರು ಯಾವುದಾದರೂ ಪ್ರಸ್ತಾಪ ಮಾಡಿದ ಕೂಡಲೆ ಅವರನ್ನು ಫೈಲ್ ಇಡಿರಿ ಎಂದು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ಈ ರೀತಿ ಚರ್ಚೆ ಮಾಡುತ್ತಾ ಹೋದರೆ, ಬಹುಶಃ ಚರ್ಚೆ ಅಪೂರ್ಣವಾಗುತ್ತದೆ. ಯಾವ ಉದ್ದೇಶಕ್ಕಾಗಿ ನಾವು ಚರ್ಚೆ ಮಾಡುತ್ತಿದ್ದೇವೆಯೋ ಆ ಉದ್ದೇಶ ಸಾರ್ಥಕವಾಗುವ ಹಾಗೆ ಇಲ್ಲ, ಆದ್ದರಿಂದ ದಯಮಾಡಿ ಅವರು ಹೇಳುವಂತಹ ವಿಚಾರವನ್ನು ತಾವು ಶಾಂತ ಚಿತ್ತತೆಯಿಂದ ಕೇಳಿ. ತಾವು ಹೇಳುವಂತಹ ವಿಚಾರಗಳನ್ನು ಶಾಂತ ಚಿತ್ತತೆಯಿಂದ ಇವರು ಕೇಳುತ್ತಾರೆ. ಕೊನೆಗೆ ಇದರ ಬಗ್ಗೆ ಸರ್ಕಾರದ ಹತ್ತಿರ ಏನು ಇದೆ ? ಇದರ ಬಗ್ಗೆ ಸರ್ಕಾರದ ನಿಲುವೇನು? ಸರ್ಕಾರದ ಧೋರಣೆ ಏನು? ಎನ್ನುವುದನ್ನು ಮುಖ್ಯಮಂತ್ರಿಯಾಗಿ ನಾನು ಹೇಳುತ್ತೇನೆ. ಎಲ್ಲ ಸಮಾಧಾನದಿಂದ ಕೇಳಿದರೆ ಈ ಪ್ರಶ್ನೆ ಸಮಾಧಾನಕರವಾಗಿ ಇತ್ಯರ್ಥವಾಗುತ್ತದೆ. ಇಲ್ಲದಿದ್ದರೆ

ಯಾರಾದರೂ ಒಂದು ಪ್ರಶ್ನೆ ಎತ್ತಿದ ಕೂಡಲೇ ಇದು ಡಾಕ್ಯುಮೆಂಟ್ ಎಂದು ವಾದ ಮಾಡುವುದಕ್ಕೆ ಹೋದರೆ ಯಾರೂ ಇಡುವುದಕ್ಕೆ ಸಾಧ್ಯವಿಲ್ಲ. ಮತ್ತು ಇದೇನೂ ಹೊಸದಲ್ಲ. ಅನೇಕ ವರ್ಷಗಳಿಂದ ಚರ್ಚೆ ಮಾಡುತ್ತಿದ್ದೇವೆ. ಚರ್ಚೆ ಮಾಡುವವರು ಅನೇಕ ವಿಚಾರಗಳನ್ನು ಹೇಳುತ್ತಾರೆ. ವಿರೋಧ ಪಕ್ಷದ ಸದಸ್ಯರಾಗಲಿ ಅಥವಾ ವಿರೋಧಪಕ್ಷದ ನಾಯಕರಾಗಲಿ ಹೇಳಬಹುದು. ಖರ್ಗೆಯವರು ಈ ರೀತಿ ಹೇಳಿದ್ದು ತಪ್ಪು, ಅದಕ್ಕಾಗಿ ನಾನು ಈ ರೀತಿಯಾಗಿ ಸ್ಪಷ್ಟೀಕರಣ ಕೊಡುತ್ತೇನೆ ಎನ್ನುವಂತಹ ರೀತಿಯಲ್ಲಿ ಹೇಳಿದರೆ ಚರ್ಚೆ ಸುಗಮವಾಗಿ ನಡೆಯುತ್ತದೆ. ಯಾರಾದರೂ ಏನಾದರೂ ಹೇಳಿದ ತಕ್ಷಣ ಅವರಿಗೆ ರೆಕಾರ್ಡ್‌ಇಡಿರಿ ಅಂತ ಕೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನನಗೆ ಈ ವಿಚಾರದಲ್ಲಿ ಮಾರ್ಗದರ್ಶನ ಮಾಡುತ್ತಾರೆಂದು ಅಂದುಕೊಂಡಿದ್ದೆ, ಇಲ್ಲಿ ಈ ಕಾರಣದಿಂದಲೇ ಈ ವಿಚಾರಗಳು ನನ್ನ ತಲೆಗೆ ಅಥವಾ ನಮ್ಮ ಕಡೆಯ ಸದಸ್ಯರ ತಲೆಗೆ ಹೋಗಲಿಲ್ಲ ಅಂತ ಅಲ್ಲ. ಆ ಕಾರಣದಿಂದ ನಾನು ಅವರನ್ನು ಕೇಳಿದ್ದಾದರೂ ಇಷ್ಟೆ. ನೀವು ಒಂದು ಕೋಟ್ ಮಾಡುತ್ತಿದ್ದೀರಿ, ಕೊಶ್ಚನ್ (ಬಿ)ಗೆ ಹೋಗಿದ್ದೀರಿ. ''ಎ'' ಏನು? ಇದ್ದರೆ ಹೇಳಿ. ''ಸಿ'' ಏನು? ಇದ್ದರೆ ಹೇಳಿ. "ಡಿ" ಏನು ? ಇದ್ದರೆ ಹೇಳಿ ಅಂತ ಕೇಳಿದ್ದೇನೆ. ಅಷ್ಟೇ ಹೊರತಾಗಿ ಈಗಲೇ ಆ ಡಾಕ್ಯುಮೆಂಟನ್ನು ಇಟ್ಟು ಬಿಡಿ ಎಂದು ನಾನು ಕೇಳುವುದಕ್ಕೆ ಹೋಗಲಿಲ್ಲ. ನೀವು ಏಕೆ ಅದನ್ನು ಆ ತರಹ ಇಂಟರ್‌ಪ್ರಿಂಟ್ ಮಾಡುತ್ತೀರಿ. ಆ ರೀತಿ ನಾನು ಹೇಳುವುದಕ್ಕೆ ಹೋಗಿಲ್ಲ. ಅವರ ಕೈಯಲ್ಲಿ ಡಾಕ್ಯುಮೆಂಟ್ ಇಲ್ಲ ಎನ್ನುವುದು ತಿಳಿಯದೆ ಇದ್ದಷ್ಟು ಮೂರ್ಖನೇ ನಾನು ಈ ಸಭೆಯಲ್ಲಿ ಕುಳಿತು ಕೆಲಸ ಮಾಡುವುದಕ್ಕೆ. ನಾನು ಕೇಳಿದ್ದು. ನಿಮ್ಮ ಹತ್ತಿರ ಇದ್ದರೆ ಒಂದೇ ಸಲ ಇಟ್ಟುಬಿಡಿ, ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳಿದಾಗ, ಮಾನ್ಯ ಅಧ್ಯಕ್ಷರು ಏನು ಅಪ್ಪಣೆ ಕೊಟ್ಟರು ಅಂದರೆ, ನಿಮ್ಮ ಹತ್ತಿರ ಇದ್ದರೆ ಇಡಿ ಅಂತ ಎಂದು ಹೇಳಿದರು. ಅದಕ್ಕೆ ನಾನು ಇದೆ ಸ್ವಾಮಿ ಇಡುತ್ತೇನೆ ಅಂತ ಹೇಳಿದೆ. ಅದರಂತೆ ಇಟ್ಟಿದ್ದೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಬಂದು ಕೌನ್ಸಿಲ್ ಛೇರ್ಮನ್‌ರವರು ಕೇಳಿದರು ಕೊಟ್ಟೆ, ನೀವು ಕೇಳಿದ್ದರೆ ಕೊಡುತ್ತಿದ್ದೆ ಅಂತ ಹೇಳುತ್ತಾರೆ, ಇದನ್ನೇ ಬೆಳಗ್ಗಿನಿಂದಲೂ ಚರ್ಚೆ ಮಾಡುತ್ತಿದ್ದೇವೆ. ಇದೇ ಮಾತನ್ನು ಬೆಳಗ್ಗೆ ಏಕೆ ಹೇಳಲಿಲ್ಲ? ಇದೇ ವಿಚಾರದಲ್ಲಿ ಬೆಳಗ್ಗೆ ಸುಮಾರು ಎರಡೂವರೆ ಗಂಟೆಗಳ ಕಾಲ ಚರ್ಚೆಯಾಗಿದೆ. ಡಾಕ್ಯುಮೆಂಟ್ ಇದೆಯೋ ಅಥವಾ ಇಲ್ಲವೋ ಅದನ್ನು ವಿಚಾರ ಮಾಡಿ ನೋಡಬಹುದಿತ್ತು. ನೋಡುತ್ತೇನೆಂದು ಒಂದು ಸಾರಿ ಎದ್ದರು. ನಾನು ಆಗ ಇದನ್ನು ಹೇಳುತ್ತಾರೆಂದು ಅಂದುಕೊಂಡಿದ್ದೆ. ಆಗ ಸರ್ಕಾರದ ದಾಖಲೆ ಕೊಡುವುದಕ್ಕೆ ಏಕೆ ಆಗಲಿಲ್ಲ. ಎಲ್ಲಿ ನಿಮಗೆ ಅನುಕೂಲವಾಗುತ್ತದೆ, ಅಲ್ಲಿ ವಿಚಾರವನ್ನು ಪ್ರಸ್ತಾಪ ಮಾಡುವುದು. ನಾವು ದಾಖಲೆಯನ್ನು ಇಟ್ಟ ಮೇಲೆ, ಪ್ರಿವಿಲೇಜ್ ಆಗುವುದು ಇದ್ದರೆ, ಅವರಿಗೆ ಆಗಲಿ. ಶಿಕ್ಷೆಯಾಗುವುದು ಇದ್ದರೆ, ಅವರಿಗೆ ಆಗಲಿ. ನಾವು ಅದನ್ನು ತೆಗೆದುಕೊಳ್ಳುವುದು ಬೇಡ ಎನ್ನುವಂತಹ ನೀತಿ ಇದೆಯಲ್ಲ ಅದು ಮುಖ್ಯಮಂತ್ರಿಗಳಿಗೆ ಸಲ್ಲದು. ಅದರ ಹಿರಿತನಕ್ಕೆ, ಅವರ ನಾಯಕತ್ವಕ್ಕೆ ನಾನು ಗೌರವ ಕೊಡುತ್ತೇನೆ. ಸಮರ್ಥನೆ ಮಾಡಿ ಹೇಳುತ್ತೇನೆ. ತಾವು ಈ ಮಾತನ್ನು ಬೆಳಗ್ಗೆಯೇ ಹೇಳಿದ್ದರೆ ಈ ಚರ್ಚೆಗೆ ಇಷ್ಟೊಂದು ಸಮಯ ವ್ಯರ್ಥವಾಗುತ್ತಿರಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಒಂದು ವಿಚಾರವನ್ನು ತಾವು ತಿಳಿದುಕೊಳ್ಳಬೇಕು. ಇವತ್ತೂ ಇದೇ ಇದ್ದರೆ ನಾನು ಸ್ವಾಗತ ಮಾಡುತ್ತೇನೆ. ಏನಾಗಿದೆ ಎಂದರೆ, ನಿಮ್ಮಲ್ಲೇ ಕನ್‌ಫ್ಯೂಸನ್ ಇದೆ. ಒಬ್ಬರು ಒಂದನ್ನು ಕೇಳುತ್ತಾರೆ. ಇನ್ನೊಬ್ಬರು ಇನ್ನೊಂದನ್ನು ಕೇಳುತ್ತಿದ್ದಾರೆ. ನಾನು ಹೇಳುವಂತಹ ವಿಚಾರವನ್ನು ತಾವು ಕೇಳಬೇಕು, ಬೆಳಗ್ಗೆ ನನಗೆ ಗೊತ್ತಿದ್ದ ಹಾಗೆ, ಅಧ್ಯಕ್ಷರ ಜೊತೆ ನಾನು ಮಾತನಾಡಲಿಲ್ಲ, ನಮ್ಮ ಪಾರ್ಲಿಮೆಂಟರಿ ಅಫೈರ್ಸ್ ಮಿನಿಸ್ಟರ್ ಮಾತನಾಡಿದ್ದಾರೆ. ರಾಜ್ಯಸಭಾ ಕಮಿಟಿಗೆ ಮುಖ್ಯ ಕಾರ್ಯದರ್ಶಿಗಳು ಏನು ಪತ್ರ ಬರೆದಿದ್ದಾರೆ, ಅದರ ಪ್ರತಿಯನ್ನು ಇಡಿ ಅಂತ ತಾವು ಕೇಳಿದಿರಿ. ಆದರೆ ನಿಮ್ಮ ಹಿಂದೆ ಕುಳಿತಂತಹ ಅನೇಕ ಮಾನ್ಯ ಸದಸ್ಯರುಗಳು ಈ ಸೆಕ್ರೆಟರಿಯೇಟ್‌ನಲ್ಲಿ ಮುಖ್ಯ ಕಾರ್ಯದರ್ಶಿಗಳು ಬರೆದಿರುವಂತಹ ಫೈಲ್ ಇಡಿರಿ ಅಂತ ಕೇಳಿದರು. ಕಡತ ಇಡ್ರಿ ಅಂತ ಕೇಳಿದರು, ಕಡತ ಅಂದರೆ ಫೈಲು ಎಂದು ಇರಬೇಕು. ನನಗೆ ಸರಿಯಾಗಿ ಕನ್ನಡ ಬರುವ ಹಾಗೆ ಇಲ್ಲ. ಇವಾಗ ಶ್ರೀಮಾನ್ ಹೆಗಡೆಯವರು ಆ ಕಡತಗಳನ್ನು ತಂದು ನಮ್ಮ ಮುಂದೆ ಇಡಿರಿ ಎನ್ನುವ ಮಾತನ್ನು ಹೇಳಿದರು. ನಾನು ಹೇಳುವುದು ಏನೆಂದರೆ, ಆ ಒಂದು ಪತ್ರ ಏನು ಬರೆದಿದ್ದಾರೆ, ಅದರ ಪ್ರತಿಯನ್ನು ಇಡಿ ಅಂತ ಕೇಳಿದ್ದರೆ, ನಾನು ಇಡುತ್ತೇನೆ ಅಂತ ಆಗಿಂದ ಆಗಲೇ ಹೇಳುತ್ತಿದ್ದೆ. ಇಡುತ್ತೇನೆಂದು ನಾನು ಏಕೆ ಹೇಳುವುದಕ್ಕಾಗಲಿಲ್ಲ ಅಂದರೆ, ಈ ರೀತಿ ಪತ್ರವನ್ನು ಮೊಲ್ಮನೆಯ ಛೇರ್ಮನ್‌ರವರಿಗೆ ಕೊಟ್ಟಿದ್ದೇವೆ. ಈ ಮನೆಯ ಸ್ಪೀಕರ್ ಏನು ಇದ್ದಾರೆ ಅವರು ನನಗೆ ರೂಲಿಂಗ್ ಕೊಟ್ಟು ಇಡಬೇಕು ಅಂತ ಹೇಳಿದರೆ ಇಡುತ್ತೇನೆ. ಅದನ್ನು ಬಿಟ್ಟು ನಾನಾಗಿಯೇ ಇಟ್ಟರೆ ನಮ್ಮ ಅನ

ಮತಿಯಿಲ್ಲದೆ ನೀವು ಏಕೆ ಲೆಜಿಸ್ಲೇಚರ್‌ಗೆ ಆ ಮಾಹಿತಿಯನ್ನು ಕೊಟ್ಟಿದ್ದೀರಿ ಎಂಬುದಾಗಿ ನಾಳೆ ರಾಜ ಸಭಾದವರು ಕೇಳಿಯಾರು ಎನ್ನುವ ಭಯದಿಂದ ನಾನು ಅದನ್ನು ಹೇಳಲಿಲ್ಲ. ಆದರೆ ನೀವು ಕೇಳಿದ್ದು ಒಂದು, ನಿಮ್ಮ ಹಿಂದೆ ಕುಳಿತಂತಹ ಅನೇಕ ಮಾನ್ಯ ಸದಸ್ಯರು ಕಡತ ಇಡಿ, ಕಡತ ಇಡಿ ಅಂತ ಕೇಳಿದ್ದಾರೆ. ಕಡತ ಇಡುವ ಪ್ರಶ್ನೆ ಅಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದೇ ಒಂದು ವಾಕ್ಯ ವಿವರಣೆಗಾಗಿ ಹೇಳಬೇಕಾಗಿದೆ. ಮಾನ್ಯ ಖರ್ಗೆಯವರು ಸರ್ಕಾರ ಅಂದರೆ ಏನು ಎಂದು ಒಂದು ದೀರ್ಘವಾದ ವ್ಯಾಖ್ಯೆಯನ್ನು ಕೊಟ್ಟರು.

ಮುಖ್ಯ ಕಾರ್ಯದರ್ಶಿ ಸರ್ಕಾರವೋ, ಮುಖ್ಯಮಂತ್ರಿಗಳ ಸರ್ಕಾರವೋ, ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಸರ್ಕಾರವೋ, ನಾನು ಕಡತ ಎನ್ನುವ ಒಂದು ಶಬ್ದ ಉಪಯೋಗಿಸಿದ್ದಕ್ಕೆ ತಾವು ಹೇಳಿದ್ದ ರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಮಾನ್ಯ ಖರ್ಗೆಯವರು ಸಾಕಷ್ಟು ಕಾಲ ಮಂತ್ರಿಗಳಾಗಿದ್ದರು. ಅವರ ಡಿಪಾರ್ಟ್‌ಮೆಂಟ್‌ನಿಂದ ಸರ್ಕಾರದ ಆಜ್ಞೆ ಏನು ಹೊರಡುತ್ತಾ ಇತ್ತು ಅಥವಾ ಪ್ರಪೋಸಲ್ಸ್‌ಗೆ ಅಪ್ರೂವಲ್ ಆಗುತ್ತಾ ಇತ್ತು ಆ ಪ್ರತಿಯೊಂದು ಫೈಲ್‌ಗೆ ಅವರು ಸಹಿ ಹಾಕಿದ್ದಾರಾ ? ಅವರ ಒಪ್ಪಿಗೆ ತೆಗೆದುಕೊಂಡು ಆಗಿದೆಯೋ ಅದರಲ್ಲಿ ಅಧಿಕಾರದ ವಿಕೇಂದ್ರೀಕರಣ ಕಾಂಗ್ರೆಸ್‌ನಲ್ಲೂ ಸ್ವಲ್ಪ ಮಟ್ಟಿಗೆ ಆಗುತ್ತಾ ಇತ್ತು. ಬರೀ ನಮ್ಮಲ್ಲಿ ಅಷ್ಟೇ ಅಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಕಾಂಗ್ರೆಸ್‌ನಲ್ಲಿ ಸ್ವಲ್ಪ ಮಟ್ಟಿಗೆ ಆಗುತ್ತಾ ಇತ್ತು ಎಂದು ಹೇಳುತ್ತಿದ್ದೀರಿ. ನೀವು ಅಸ್ತಿತ್ವಕ್ಕೆ ಬಂದು ಬರೇ ಆರು ತಿಂಗಳು ಆಯಿತು ಅಷ್ಟೆ, ಅದಕ್ಕೂ ಮೊದಲು ಅಲ್ಲಿ ಆಗುತ್ತಾ ಇದ್ದದು ಬರೀ ಕಾಂಗ್ರೆಸ್‌ನಲ್ಲೇ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಸೆಕ್ರೆಟೇರಿಯೇಟ್ ರೂಲ್ಸ್‌ನಲ್ಲಿ ಇದೆ. ಅದರಲ್ಲಿ ಯಾವ ಪ್ರಪೋಸಲ್‌ಗೆ ಮಂತ್ರಿಯ ಅಪ್ರೂವಲ್ ಬೇಕು, ಯಾವ ಪ್ರಪೋಸಲ್‌ಗೆ ಉಪ ಮಂತ್ರಿಗಳು ಇದ್ದರೆ ಅಥವಾ ಮಿನಿಸ್ಟರ್ ಆಫ್ ಸ್ಟೇಟ್ ಇದ್ದ ರೆ ಅವರದು ಅಪ್ರೂವಲ್ ಸಾಕು ಅಥವಾ ಉಪ ಮಂತ್ರಿ ಸಾಕು ಅಥವಾ ಸೆಕ್ರೆಟರಿ ಸಾಕು ಅಥವಾ ಇಲಾಖೆಯ ಮುಖ್ಯಸ್ಥ ಸಾಕು ಎಂದು ಇರುತ್ತದೆ. ಆದ್ದರಿಂದ ಮುಖ್ಯ ಕಾರ್ಯದರ್ಶಿ ಪಾಸ್ ಮಾಡಿದಂಥ ಸರ್ಕ್ಯುಲರ್‌ಗೆ ಅಥವಾ ಅವರ ಮುಖ್ಯಕಾರ್ಯದರ್ಶಿ ಪಾಸ್ ಮಾಡಿದ ಸರ್ಕ್ಯುಲರ್ಸ್‌ಗೆ ಮುಖ್ಯಮಂತ್ರಿಗಳ ಅಥವಾ ಸಂಬಂಧಪಟ್ಟ ಮಂತ್ರಿಗಳ ಒಪ್ಪಿಗೆ ಬೇಕೆಂದು ಏನೂ ಇಲ್ಲ. ಅವರಿಗೂ ಅಧಿಕಾರ ಇರುತ್ತದೆ. ಅವರು ಮಾಡತಕ್ಕಂಥಾದ್ದು ಕಾಯ್ದೆ ಬದ್ಧವಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು, ಹಿಂದೆ ಕುಳಿತಿರುವವರು ಎಂದು ಹೇಳಿದ್ದರಿಂದ ನಾನು ಇದನ್ನು ಹೇಳಬೇಕಾಗಿ ಬಂತು, ಈ ಸದನದಲ್ಲಿ ಇರುವ ಚಿಕ್ಕ ಪಕ್ಷಕ್ಕೆ ನಾಲ್ಕೂ ಕಡೆಯಿಂದ ನೀವು ಕೇರ್ ಹಾಕಿದ್ದೀರಿ. ನನಗೆ ಹಿಂದೆ ಕಣ್ಣು ಇಲ್ಲ. ಹಿಂದೆ ಏನು ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಕಡತ ಎಂದು ಏಕೆ ಹೇಳಿದೆ ಎಂದರೆ, ಅವರು ಆ ವಿಚಾರವನ್ನು ಎತ್ತಿದ್ದಕ್ಕೆ ಮಾತ್ರ ಅದು ಬಂತು. ಇಲ್ಲಿ ಇರತಕ್ಕ ಅನೇಕ ಸದಸ್ಯರ ಮನಸ್ಸಿನಲ್ಲಿ ಬಂದಿರಬಹುದು. ಇಲ್ಲವೇ ಮುಖ್ಯಮಂತ್ರಿ ಯವರ ಒಪ್ಪಿಗೆ ಇಲ್ಲದೇ ಮುಖ್ಯಕಾರ್ಯದರ್ಶಿಯವರು ಈ ಒಂದು ಆಥರೈಸೇಷನ್ ಕೊಡುತ್ತಾರೋ ಹೇಗೆ, ಈ ಸತ್ಯ ಸಂಗತಿಯನ್ನು ತಿಳಿಯುವುದು ಹೇಗೆ ?

ಶ್ರೀ ಅಜೀಜ್ ಸೇಠ್.—ಅದು ಬರುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಓಕೆ ಅದಕ್ಕಾಗಿ ತೋರಿಸಿಬಿಡಿ. ಅದನ್ನು ತೋರಿಸಬೇಕಲ್ಲವೇ ? ಅದು ಬರುವುದಿಲ್ಲ ಎಂದರೆ ಮುಖ್ಯಮಂತ್ರಿಯವರದ್ದು ಸಹಿ ಇರಬೇಕಲ್ಲವೇ ? ಅವರ ಒಪ್ಪಿಗೆ ಇರಬೇಕಲ್ಲವೇ ? ಮಾನ್ಯ ಮೊಯಿಲಿಯವರು ಹಿಂದಿನ ಸಲ ಇದೇ ವಿಚಾರ ಚರ್ಚೆಗೆ ಬಂದಾಗ ಬಹಳ ವಿವರವಾಗಿ ತಿಳಿಸಿ ಹೇಳಿದ್ದಾರೆ. ಏನೆಂದರೆ ಒಂದು ಆಜ್ಞೆಗೆ ಮುಖ್ಯಮಂತ್ರಿಯವರ ಅಥವಾ ಮಂತ್ರಿಯವರ ಆರ್ಡರ್ ಅಗತ್ಯ ಇದ್ದರೆ. ಒಂದು ಅವರೇ ನೋಡುತ್ತಾರೆ. ಸಹಿ ಹಾಕುತ್ತಾರೆ, ಇಲ್ಲದಿದ್ದರೆ ಸೆಕ್ರೆಟರಿ ನೋಡಿ ಮುಖ್ಯಮಂತ್ರಿಗಳು ನೋಡಿದ್ದಾರೆ ಅಥವಾ ಮಂತ್ರಿಗಳು ನೋಡಿದ್ದಾರೆಂದು ಸಹಿ ಹಾಕುತ್ತಾರೆ, ಅಥವಾ ಮುಖ್ಯಮಂತ್ರಿಯೋ ಅಥವಾ ಮಂತ್ರಿನೋ ಸೀನ್ ಎಂದು ಸಹಿ ಹಾಕುತ್ತಾರೆ. ಅವರು ನಡವಳಿಕೆ ಬಗ್ಗೆ ಸಾಕಷ್ಟು ವಿವರವನ್ನೂ ಇಲ್ಲಿ ಕೊಟ್ಟಿದ್ದಾರೆ. ಅದೇ ವಿಚಾರ ವನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಯಾವ ದೃಷ್ಟಿಯಿಂದ ಇನ್‌ಡೈರೆಕ್ಟಾಗಿ ಒಪ್ಪಿಗೆ ಕೊಟ್ಟಿದ್ದಾರೆ ಅಥವಾ ಡೈರೆಕ್ಟಾಗಿ ಒಪ್ಪಿಗೆ ಕೊಟ್ಟಿದ್ದಾರಾ ಎಂದು ಅದನ್ನು ನೋಡಿದರೆ ಗೊತ್ತಾಗುತ್ತದೆ. ಅದಕ್ಕಾಗಿ ನಾನು ಹೇಳಿದೆ. ಆ ಕಡತದ ಕೆಂಪು ಪಟ್ಟಿ ಇದೆಯೆಲ್ಲ ಅದನ್ನು ತೆಗೆದು ನೀವು ಬಿಚ್ಚಿ, ಸತ್ಯ ಹೊರಗಡೆ ಬರುತ್ತದೆ ಅಷ್ಟೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದನ್ನು ಅವರು ಪುಷ್ಟೀಕರಿಸಿದ್ದಾರೆ. ನಾನು ಮಾನ್ಯ ಹೆಗಡೆಯವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ವಿರೋಧ ಪಕ್ಷದ ನಾಯಕರು ಕೇಳಿದ್ದು ಬರೀ ಒಂದು ಲೆಟರ್ ಕಾಪಿ ಇಡಿ ಎಂದು ಅದನ್ನು ಬೆಳಿಗ್ಗೆ ಏಕೆ ಇಟ್ಟಿಲ್ಲ ಎಂದು ಕೇಳಿದಾಗ ನಾನು ಹೇಳಿದೆ ಇದು ಒಂದೇ ಕೇಳಿದ್ದರೆ ಇರಬಹುದಾಗಿತ್ತು, ಆದರೆ ಅದರ ಬಗ್ಗೆಯೂ ನಮಗೆ ಸಂಶಯ ಬರುವುದರಿಂದ, ಅದನ್ನು ನಾವಾಗಿಯೇ ಇಟ್ಟರೆ ಬಹುಶಃ ಬ್ರೀಚ್ ಆಫ್ ಪ್ರಿವಿಲೇಜ್ ಪ್ರಶ್ನೆ ಬರಬಹುದು ಎಂದು ನಾನು ಇಟ್ಟಿಲ್ಲ ಎಂದು ಹೇಳಿದೆ. ಇದು ಒಂದೇ ಪ್ರಶ್ನೆ ಇದ್ದಿದ್ದರೆ ಬೆಳಿಗ್ಗೆಯೇ ಏನಾದರೂ ಇತ್ಯರ್ಥ ಮಾಡಬಹುದಾಗಿತ್ತು. ಬೆಳಿಗ್ಗೆ ತಾವು ಕೇಳಿದ್ದು ಒಂದು. ಆದರೆ ತಮ್ಮ ಹಿಂದೆ ಕುಳಿತವರು ಎಲ್ಲಾ ಕಡತಗಳನ್ನು ಕೇಳಿದರು. ಸಂಬಂಧಪಟ್ಟ ಎಲ್ಲಾ ಕಡತಗಳನ್ನು ಇಡಿ ಎಂದು ಹೇಳಿದರು. ಅದಕ್ಕಾಗಿ ನಾನು ಅದರ ಬಗ್ಗೆ ಏನನ್ನೂ ಹೇಳಲಿಲ್ಲ. ಮಾನ್ಯ ಖರ್ಗೆಯವರು ತಮಗೆ ತಿಳಿದಿದ್ದನ್ನು ಭಾಷಣದಲ್ಲಿ ಹೇಳಿದರು ಅವರು ಕಡತ ಇಡುತ್ತಾರೋ. ಅವರಿಗೆ ಕಡತ ಕೇಳುವುದರಲ್ಲಿ ಏನು ಅರ್ಥವಿದೆ ? ನನಗೆ ಅರ್ಥವಾಗುವುದಿಲ್ಲ. ಮಾನ್ಯ ಖರ್ಗೆಯವರು ಅವರಿಗೆ ತಿಳಿದ ಹಾಗೆ ಹೇಳಿದ್ದಾರೆ.

೪–೩೫ ಪಿ.ಎಂ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರನ್ನು ಮಂತ್ರಿ ಮಾಡಿದ ತಕ್ಷಣ ಕಡತ ಇಡಿರಿ ಎಂದು ಕೇಳುತ್ತೇನೆ, ಅಲ್ಲಿಯವರೆಗೆ ಕೇಳುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರಶ್ನೆ ಬೇರೆ. ಇವತ್ತಿನ ಪ್ರಶ್ನೆ ಏನೆಂದರೆ, ನಾನು ಅದನ್ನೇ ಸ್ಪಷ್ಟೀಕರಿಸುತ್ತಿದ್ದೇನೆ. ಈ ಚರ್ಚೆ ನಾಳೆಗೂ ಮುಂದುವರಿಯುವ ಹಾಗೆ ಇದೆ, ಇದರ ಲಕ್ಷಣ ನೋಡಿದರೆ ಹಾಗೆ ಕಾಣುತ್ತದೆ. ನಾನು ಹೇಳುವುದೇನೆಂದರೆ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳುತ್ತಿದ್ದಾರೆ. ಆ ರೀತಿ ಹೇಳಿದ್ದಕ್ಕೆಲ್ಲ ನೀವು ಪ್ರೂಫ್ ಕೊಡಿ, ಡಾಕ್ಯುಮೆಂಟ್ ಕೊಡಿರಿ, ಎಂದು ವಾದ ಮಾಡಲಿಕ್ಕೆ ಹೊರಟರೆ ಇದು ಮುಗಿಯುವುದಿಲ್ಲ. ಅವರು ಹೇಳುವುದನ್ನು ಕೇಳುತ್ತಾರೆ. ನೀವು ಹೇಳುವುದನ್ನು ಹೇಳಿರಿ. ಇದೀಗ ಮಾನ್ಯ ಹೆಗಡೆಯವರು ಹೇಳಿದರು. ತಮ್ಮ ಉತ್ತರದಲ್ಲಿ ಇದನ್ನೆಲ್ಲ ಸ್ಪಷ್ಟೀಕರಿಸಬಹುದಾಗಿತ್ತು. ಈಗ ಹೇಳತಕ್ಕ ಅವಶ್ಯಕತೆ ಇರಲಿಲ್ಲ. ಸರ್ಕಾರ ಹೇಗೆ ನಡೆಯುತ್ತದೆ, ಅಧಿಕಾರ ವಿಕೇಂದ್ರೀಕರಣ ಹೇಗೆ ಮಾಡಿರುತ್ತಾರೆ, ಗೌರ್ನಮೆಂಟ್ ಆರ್ಡರ್ ಯಾವ ರೀತಿ ಆಗುತ್ತದೆ ಎನ್ನುವುದನ್ನು ತಮಗೆ ತಿಳಿದಹಾಗೆ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಾರೆ. ಅದು ನಿಮಗೆ ಬಹುಶಃ ಸಮಂಜಸ ಅನಿಸದಿದ್ದರೆ ನಿಮ್ಮ ಉತ್ತರದಲ್ಲಿ ಅದನ್ನೆಲ್ಲ ಹೇಳಬಹುದು. ಯಾರಾದರೂ ಏನಾದರೂ ಹೇಳಿದ ತಕ್ಷಣ ಅದಕ್ಕೆ ಪ್ರೂಫ್ ಡಾಕ್ಯುಮೆಂಟ್, ಫೈಲ್ ಪ್ರೊಡ್ಯೂಸ್ ಮಾಡಿಯೆಂದು ಕೇಳಬೇಡಿ ಎಂದು ಇಷ್ಟೇ ನಾನು ಹೇಳುವುದು.

ಅಧ್ಯಕ್ಷರು.—ಮಾನ್ಯ ಖರ್ಗೆಯವರು ಭಾಷಣವನ್ನು ಈಗ ಮುಗಿಸುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ...

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು.—ಮಾನ್ಯ ಸದಸ್ಯರು ಈಲ್ಡ್ ಆಗುತ್ತಾರೋ ಇಲ್ಲವೋ ಅವರನ್ನು ಕೇಳಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಸದಸ್ಯರಾದ ಖರ್ಗೆಯವರೇ ಒಂದು ನಿಮಿಷ, ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಪತ್ರವನ್ನು ಸಭೆಯ ಮುಂದಿಟ್ಟಿದ್ದಾರೆ ಆ ಪತ್ರವನ್ನು ಸಭೆಯ ಮುಂದಿಡಲಿಕ್ಕೆ ಸರ್ಕಾರ ಮುಂದೆ ಬರಲಿಲ್ಲ. ಅವರು ಏನೊಂದು ಪತ್ರವನ್ನು ಸಭೆಯ ಮುಂದಿಟ್ಟಿದ್ದಾರೆ, ಅದು ಮುಖ್ಯ ಕಾರ್ಯದರ್ಶಿಯವರು ರಾಜ್ಯಸಭಾ ಸೆಕ್ರೆಟರಿಯೇಟ್‌ಗೆ ಬರೆದಿರತಕ್ಕ ಪತ್ರವೆ ? ಅಥವಾ ಯಾವ ಪತ್ರ ಎಂಬುದು ನಮಗೆ ಗೊತ್ತಾಗಬೇಕು. ಅದರಲ್ಲಿ ಏನಿದೆ ಎಂದು ಅವರಿಗೆ ಗೊತ್ತಿದೆ. ಅದನ್ನು ಸರ್ಕಾರ ಪುಷ್ಟೀಕರಿಸುತ್ತದೆಯೆ ? ಆ ಪತ್ರ ಯಾವುದೆಂಬುದನ್ನು ಹೇಳಬೇಕಾಗುತ್ತದೆ. ಮುಂದೆ ನಾವು ಮಾತನಾಡಬೇಕಾಗುತ್ತದೆ. ಅದೇನೆಂಬುದು ಸದನಕ್ಕೆ ಗೊತ್ತಾಗಬೇಕು. ಆದ್ದರಿಂದ ದಯವಿಟ್ಟು ಸರ್ಕಾರದವರು ಅದನ್ನು ತಿಳಿಸಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ತಿಳಿಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಮೇಲೆ ಸಾಕಷ್ಟು ಚರ್ಚೆಯಾಗಿದೆ. ನಾನು ಈಗಾಗಲೇ ಸಬಾರ್ಡಿನೇಟ್ ಲೆಜಿಸ್‌ಲೇಷನ್ ಕಮಿಟಿಯ ಒಂದು ಪ್ಯಾರಾವನ್ನು ರೆಫರ್ ಮಾಡಿದ್ದೇನೆ. ಅದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರು ನಾನು ಕೋಟ್ ಮಾಡತಕ್ಕದ್ದು ಸರಿಯಲ್ಲವೆಂಬ ವಾದವನ್ನು ಮಂಡಿಸಿದ್ದಾರೆ. ಆದರೆ ಅದರಲ್ಲಿ ಸ್ಪಷ್ಟವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರೇ ಒಂದು ಪತ್ರವನ್ನು ಬರೆದಿದ್ದಾರೆಂದು ಹೇಳಿದ್ದಾರೆ. ದಿನಾಂಕ ೩೦-೪-೯೦ರಲ್ಲಿ ಬರೆದ ಪತ್ರವನ್ನು ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯಮಂತ್ರಿಗಳ ಹೇಳಿಕೆಯ ಮೇಲೆ ನಾವು ಟೆಲಿಫೋನ್ ಟ್ಯಾಪಿಂಗ್ ಮಾಡುತ್ತೇವೆಂದು ಹೇಳಿದ ಮೇಲೆ ಸತೀಶ್ಚಂದ್ರರವರು ಪತ್ರ ಕೊಟ್ಟಿದ್ದು ಕೂಡ ಮುಖ್ಯಮಂತ್ರಿಗಳು ಹೇಳಿಲ್ಲವೆಂದು ಯಾವ ಆಧಾರದ ಮೇಲೆ ಹೇಳುವುದಕ್ಕಾಗುತ್ತದೆ ? ಯಾವ ಚೀಫ್ ಸೆಕ್ರೆಟರಿಯವರು ಆಥರೈಸ್ ಮಾಡುತ್ತಾರೊ. ಅದೇ ಚೀಫ್ ಸೆಕ್ರೆಟರಿಯವರು ಸ್ಪಷ್ಟವಾಗಿ ಎವಿಡೆನ್ಸ್ ಹೇಳುವಾಗ ನಾವು ಅದನ್ನು ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಅಂದರೆ ಮುಖ್ಯಮಂತ್ರಿಗಳನ್ನು ಕನ್‌ಸಲ್ಟ್ ಮಾಡದೆ ಎಡಿಷನ್ ಮಾಡುವುದಿಲ್ಲ, ಡೆಲಿಷನ್ ಮಾಡುವುದಿಲ್ಲವೆನ್ನುವ ಮಾತನ್ನು ಅವರು ಹೇಳಿದಾಗ ಅದನ್ನು ನಾವು ನಂಬಬೇಕಾಗುತ್ತದೆ. ನಾನು ಓರಲ್ ಆಗಿ ಹೇಳಿದ್ದಾರೆಂದು ತಿಳಿದುಕೊಂಡಿದ್ದೆ. ಅದನ್ನು ರೈಟಿಂಗ್‌ನಲ್ಲಿ ಕಳುಹಿಸಿದ್ದಾರೆ. ರೈಟಿಂಗ್‌ನಲ್ಲಿ ಕಮಿಟಿ ಮಾಡಬೇಕಾದರೆ, ಇವರು ೧೯೮೮ರಲ್ಲೂ ಕೂಡ ಮುಖ್ಯಕಾರ್ಯದರ್ಶಿ ಸತೀಶ್ಚಂದ್ರರವರಿಗೆ ಹೇಳಿರಲೇಬೇಕು. ಅವರ ಕನ್ಸಲ್ಟೇಷನ್‌ನಿಂದ ಈ ಹೆಸರುಗಳನ್ನು ಕೊಟ್ಟಿರಲೇಬೇಕು. ಇವರ ಸಲಹೆ ತೆಗೆದುಕೊಳ್ಳದೆ ಇವರನ್ನು ಕೇಳದೆ ಆ ಲಿಸ್ಟ್ ಪ್ರಿಪೇರ್ ಆಗಿಲ್ಲ. ಒಂದು ವೇಳೆ ಇವರು ಕೊಟ್ಟಂತಹ ಲಿಸ್ಟನ್ನು ಅವರು ಒಪ್ಪದೆ ಹೋಗಿದ್ದರೆ ಆಗ ಅವರು ಶಿಕ್ಷೆಗೆ ಗುರಿಯಾಗುತ್ತಿದ್ದರು. ಐ.ಪಿ.ಸಿ. ಪ್ರಕಾರ any public servant. if he disobeys, he is liable for punishment, ಏನಾದರೂ ಗೌರ್ನಮೆಂಟ್ ಆರ್ಡರನ್ನು ಡಿಸ್‌ಓಬೆ ಮಾಡಿದರೆ ಅವರಿಗೆ ಒಂದು ವರ್ಷ ಶಿಕ್ಷೆ ಇದೆ. ಇಲ್ಲವೇ ಚೀಫ್ ಸೆಕ್ರೆಟರಿಯವರಿಗಾದರೂ ಒಂದು ವರ್ಷ ಶಿಕ್ಷೆ ಕೊಡಬೇಕಾಗುತ್ತದೆ. ಇವರ ಆದೇಶದ ಪ್ರಕಾರ ಅವರು ನಡೆದಿಲ್ಲವೆಂದರೆ ಶಿಕ್ಷೆಗೆ ಗುರಿಯಾಗುತ್ತಾರೆ. ಸೆಕ್ರೆಟರಿಯೇಟ್‌ನ ಬಿಸಿನೆಸ್ ಟ್ರಾನ್ಸಾಕ್ಷನ್ ರೂಲ್ಸ್ ಪ್ರಕಾರ ಅದು ಸೀಕ್ರೇಟ್ ಇರುತ್ತದೆ.

ಬೇರೆ ಸದಸ್ಯರಿಗಾಗಲೀ, ಬೇರೆಯವರಿಗಾಗಲೀ ಗೊತ್ತಿರುವುದಿಲ್ಲ, ಯಾರಿಗೆ ಎಷ್ಟು ಪವರ್ ಕೊಟ್ಟಿದ್ದಾರೆ ಎನ್ನತಕ್ಕದ್ದು ಸೀಕ್ರೆಟ್ ರೂಲ್ಸ್ ಪ್ರಕಾರ ಅವರಿಗೆ ಕೊಡುತ್ತಾರೆಯೇ ಹೊರತಾಗಿ ಅದನ್ನು ಬಹಿರಂಗವಾಗಿ ಎಲ್ಲರಿಗೂ ತಿಳಿಸುವುದಿಲ್ಲ. ಅದು ಮುಖ್ಯಮಂತ್ರಿಗಳ ಒಂದು ಡಿಸ್ಕ್ರಿಶನರಿ ಇದ್ದ ಕಾರಣ, ಯಾವ್ಯಾವ ಸೆಕ್ರೆಟರಿಗೆ ಏನೇನು ಪವರ್ ಕೊಡಬೇಕು, ಅಂಡರ್ ಸೆಕ್ರೆಟರಿಗಳಿಗೆ ಏನು ಕೊಡಬೇಕು, ಮಂತ್ರಿಗಳಿಗೆ ಏನೇನು ಪವರ್ ಕೊಡಬೇಕು ಎಂಬುದು ಅವರಿಗೆ ಬಿಟ್ಟಿದ್ದು. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ನಮ್ಮ ಪ್ರಶ್ನೆ ಇಷ್ಟೆ. ಮುಖ್ಯ ಕಾರ್ಯದರ್ಶಿಯವರು ಸ್ಪಷ್ಟವಾಗಿ ಪತ್ರ ಬರೆದು ಹೇಳಿದ್ದಾರೆ. ನಾವು ಮುಖ್ಯಮಂತ್ರಿಗಳನ್ನು ಕನ್‌ಸಲ್ಟ್ ಮಾಡಿಯೇ ಇದನ್ನು ಮಾಡುತ್ತೇವೆ ಎಂದಿದ್ದಾರೆ ಇದು ಒಂದು ಕಡೆ. ಎರಡನೆಯದು ೧೯೮೮ರಲ್ಲಿ ನಾವು ಪ್ರಶ್ನೆ ಎತ್ತಿದ್ದಕ್ಕೂ, ೧೯೮೮ರಲ್ಲಿ ಶ್ರೀ ಸತೀಶ್‌ಚಂದ್ರನ್ ಅವರು ಏನು ಪತ್ರ ಬರೆದಿದ್ದರು, ಅದಕ್ಕೂ ಅಂದರೆ ಇವೆರಡಕ್ಕೂ ಹೊಂದಾಣಿಕೆ ಇದೆ. ಅದಕ್ಕಾಗಿ ಈ ಸಂಪೂರ್ಣವಾದ ಜವಾಬ್ದಾರಿಯನ್ನು ಹಿಂದಿನ ಮುಖ್ಯಮಂತ್ರಿಗಳು ವಹಿಸಿಕೊಳ್ಳಬೇಕಾಗುತ್ತದೆ. ಇದನ್ನು ಅವರೇ ಮಾಡಿದ್ದಾರೆ. ನಾನು ಮಾಡಿದ್ದೇನೆ ಎಂದು ಅವರು ಒಪ್ಪಿಕೊಂಡರೆ, ನಮಗೆ ಏನೂ ಇಲ್ಲ. ನೀವು ಯಾವ ರೀತಿಯಾಗಿ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಒಂದು ರೆಸಲ್ಯೂಶನ್ ಪಾಸ್ ಮಾಡಿ ಮೆಂಬರ್‌ಶಿಪ್‌ನಿಂದ ಎಕ್ಸ್‌ಪೆಲ್ ಮಾಡಿದಿರಲ್ಲ, ನಾವು ಹಾಗೆ ಮಾಡುವುದಿಲ್ಲ. ನೀವು ರಾಜೀನಾಮೆ ಕೊಟ್ಟು ಹೋದರೆ ಸರಿ. ಇದೆಲ್ಲ ನಾವು ಮಾಡಿದ್ದು ತಪ್ಪು ಎಂದು ಹೇಳಿ ಒಪ್ಪಿಕೊಂಡರೆ ನಮಗೆ ಏನೂ ಇಲ್ಲ. ಏಕೆಂದರೆ, ನೀವು ಮೌಲ್ಯಾಧಾರಿತ ರಾಜಕಾರಣ ಮಾಡತಕ್ಕಂಥವರು ಇದರ ಬಗ್ಗೆ ನೀವು ಯಾವಾಗಲೂ ಹೇಳುತ್ತಿದ್ದಿರಿ. ನಾನು ಮೌಲ್ಯಾಧಾರಿತ ರಾಜಕಾರಣ ಮಾಡುತ್ತೇನೆ. ಯಾರಾದರೂ ಇದನ್ನು ಸಾಬೀತು ಮಾಡಿದರೆ ನಾನು ರಾಜೀನಾಮೆ ಕೊಡುತ್ತೇನೆ ಎಂದು ಇಲ್ಲೂ ಘೋಷಣೆ ಮಾಡಿದಿರಿ, ಹೊರಗಡೆಯೂ ಘೋಷಣೆ ಮಾಡಿದಿರಿ. ಸಂತೋಷ ಏನು ಎಂದರೆ, ನಾವು ಗಂಟೆಗಟ್ಟಲೆ ಮೂರು ದಿವಸ ಕೂಗಿದರೂ ಆಗ ಅವರು ಸದನಕ್ಕೆ ಬರಲಿಲ್ಲ. ಈಗ ಪುಣ್ಯಕ್ಕೆ ಬಂದಿದ್ದಾರೆ. ಇವತ್ತಿನ ದಿವಸ ಸ್ಪಷ್ಟವಾದಂಥ ಕೊರೆಬರೇಟಿವ್ ಎವಿಡೆನ್ಸ್ ಇದೆ. ಅಂದರೆ ಹಿಂದೆ ಯಾವ ರೀತಿ ನಡೆದಿತ್ತು, ಆ ನಡವಳಿಕೆಗಳನ್ನು ತೆಗೆದುಕೊಂಡು ಮತ್ತು ಇವತ್ತು ಕೊಟ್ಟಂಥ ಎವಿಡೆನ್ಸ್, ಎರಡನ್ನೂ ಹೋಲಿಸಿದರೆ ಖಂಡಿತವಾಗಿಯೂ ಹಿಂದೆ ನಮ್ಮ ಸದಸ್ಯರ ಟೆಲಿಫೋನ್ ಏನು ಟ್ಯಾಪಿಂಗ್ ಆಗುತ್ತಿತ್ತು ಅದರ ಸಂಪೂರ್ಣವಾದಂಥ ಹೊಣೆಗಾರಿಕೆ ಜವಾಬ್ದಾರಿ ಅವರ ಮೇಲೆ ಇದೆ. ಮತ್ತು ಇನ್ನೊಂದು ಮಾತು ಏನು ಎಂದರೆ

ಇಷ್ಟು ಇದ್ದರೂ ಕೂಡ ಮೊನ್ನೆವರೆಗೂ ಅವರು, ನಾನು ರಾಜೀನಾಮೆ ಕೊಡತಕ್ಕ ಅವಶ್ಯಕತೆ ಇಲ್ಲ, ಇದರಲ್ಲಿ ನನ್ನ ಇನ್ವಾಲ್ವ್‌ಮೆಂಟ್ ಇಲ್ಲ ಎಂದು ಹೇಳಿದರು. ನಮ್ಮದು ಇಷ್ಟೆ. ನೀವು ರಾಜಿನಾಮೆ ಕೊಡಿ ಬಿಡಿ...

MR. SPEAKER.—We are only confined to the phone-tapping. ಅವರ ರಾಜೀನಾಮೆ ಅದೆಲ್ಲ ಅಪ್ರಸ್ತುತ. ಫೋನ್ ಟ್ಯಾಪಿಂಗ್ ವಿಷಯಕ್ಕೆ ಸಂಬಂಧಪಟ್ಟಿದ್ದು ಅಷ್ಟೇ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಫೋನ್ ಟ್ಯಾಪಿಂಗ್ ಎಂದರೆ ನಮಗೆ ಕೊಟ್ಟಂಥ ಫಂಡಮೆಂಟಲ್ ರೈಟ್ಸ್ ಏನಿದೆ ಅದನ್ನು ಅವರು ಕರ್ಟೈಲ್ ಮಾಡಿದ್ದಾರೆ. ಅದಕ್ಕೆ ಏನು ಶಿಕ್ಷೆ ?

ಅಧ್ಯಕ್ಷರು.—ಫಂಡಮೆಂಟಲ್ ರೈಟ್ಸ್ ಬಗ್ಗೆ ಬೇಕಾದರೆ ಮಾತನಾಡಿ. ಆದರೆ ರಾಜೀನಾಮೆ ವಿಷಯ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಪ್ರೂವ್ ಆಯಿತಲ್ಲ. ಎಲ್ಲಾ ಎವಿಡೆನ್ಸ್ ಪ್ರಕಾರ...

ಅಧ್ಯಕ್ಷರು.—ನೀವು ಭಾಷಣ ಮಾಡಿದ ತಕ್ಷಣ ಪ್ರೂವ್ ಆಯಿತು ಎಂದು ನಿಮ್ಮ ಅಭಿಪ್ರಾಯವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಭಾಷಣ ಅಂತ ಅಲ್ಲ. ರಾಜ್ಯಸಭೆಯ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಗೆ ಹಿಂದೆ ಶ್ರೀ ಸತೀಶ್‌ಚಂದ್ರನ್ ಅವರು ಏನು ಪತ್ರ ಬರೆದಿದ್ದಾರೆ, ಅವರು ಬರೆದಂಥ ಪತ್ರ ಇವೆಲ್ಲ ನೋಡಿದರೆ ಏನಾಗುತ್ತದೆ ? ಅವರು ಮಾಡಿದ್ದು ನಿಜ ಎಂದು ಸಾಬೀತಾಗುತ್ತದೆ, ಇದನ್ನು ಅವರ ನಜರಿಗೆ ತಂದ ಮೇಲೆ ನಾನು ಮಾಡಿದ್ದು ತಪ್ಪು ಎಂದು ಈಗಲಾದರೂ ಅವರಿಗೆ ಸ್ಪಷ್ಟವಾಗಿ ಅರ್ಥವಾಗಿರಬಹುದು, ಅದಕ್ಕೆ ನಾನು ಹೇಳುತ್ತೇನೆ ಏನೆಂದರೆ, ನಾನು ಮಾಡಿದ್ದು ತಪ್ಪು, ಈ ಸದಸ್ಯರ ಹಕ್ಕುಗಳನ್ನು ಮೊಟಕುಗೊಳಿಸಿದ್ದೇನೆ ಎನ್ನತಕ್ಕಂಥದ್ದು ಅವರ ಮನಸ್ಸಿಗೆ ಈಗಾಗಲೇ ರುಜುವಾತು ಆಗಿರಬಹುದು. ಅದಕ್ಕೆ ಅವರಾಗಿಯೇ ರಾಜೀನಾಮೆ ಕೊಟ್ಟರೆ ನಮ್ಮದು ಏನೂ ಅಭ್ಯಂತರ ಇಲ್ಲ, ಅದಕ್ಕಾಗಿ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೇ ಇದೇ ರೀತಿ ಟೆಲಿಫೋನ್ ಟ್ಯಾಪಿಂಗ್ ನಡೆದರೆ ಯಾವ ಸದಸ್ಯರು ಕೂಡ ಫ್ರೀಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದು ಅವರ ಕಾಲದಲ್ಲಿ ಆಗಿದೆ. ಇದನ್ನು ತುಂಬುವುದು ಹೇಗೆ ? ಈಗ ಅವರು ರಾಜೀನಾಮೆ ಕೊಟ್ಟರೂ ಅದನ್ನು ತುಂಬುವುದಕ್ಕಾಗುವುದಿಲ್ಲ. ಗಲ್ಲಿಗೆ ಏರಿಸಿದರೂ ತುಂಬಿ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಹಿಂದೆ ನಮ್ಮ ಮೇಲೆ ಆಗಿರುವ ಅನ್ಯಾಯ ಇದೆಯಲ್ಲ...

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಇದೇ ಗೊಂದಲ ೬೨ ರಿಂದ ನಡೆಯುತ್ತಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಮೌಲ್ಯಾಧಾರಿತ ರಾಜಕಾರಣ ಅಂದಿರಿ. ಬೇರೆ ಯಾವರು ಹೀಗೆ ಹೇಳಲಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಸೆಕ್ರೆಟರಿಯವರೇ ಹೇಳಿದ್ದಾರೆ. ನಿಮ್ಮ ಕೈಕೆಳಗೆ ಕೆಲಸ ಮಾಡತಕ್ಕಂಥ...

ಶ್ರೀ ಆರ್. ವಿ. ದೇಶಪಾಂಡೆ.—ಅಲ್ಲಿ ಫೈಲ್ ಇದೆಯಲ್ಲ ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇನ್ನೊಂದು ವಿಷಯವೇನೆಂದರೆ, ಆರ್ಟಿಕಲ್ ೧೯ರ ಪ್ರಕಾರ, "Protection of certain rights regarding freedom of speech, etc., (1) All citizens shall have the right (a) to freedom of speech and expression ; (b) to assemble peacably and without arms ; ಇದಕ್ಕೆ ಬರುವುದಿಲ್ಲ. "ಎ" ಮಾತ್ರ ನಮಗೆ ಮುಖ್ಯ. ಆರ್ಟಿಕಲ್ ೧೯ರ ಪ್ರಕಾರ ನಮಗಿರತಕ್ಕ ಹಕ್ಕನ್ನು ಮೊಟಕುಗೊಳಿಸಿದ್ದಾರೆ. ಅದಕ್ಕೆ ತಾವು ಏನು ಶಿಕ್ಷೆ ಸೂಚಿಸುತ್ತೀರೋ ಸೂಚಿಸಿ. ಅದನ್ನು ನಾನಂತೂ ಹೇಳುವುದಿಲ್ಲ. ನಾನು ಹೇಳಿದರೆ ಏನು ಇದನ್ನು ಪ್ರಜುಡೀಸ್ ಆಗಿ ಮಾತನಾಡಂತ್ತಾರೆಂದು ಅನ್ನಿಸುತ್ತದೆ. ಆಮೇಲೆ ಆರ್ಟಿಕಲ್ ೨೧ Protection of life and personal liberty : No person shall be deprived of his life or personal liberty except

according to procedure established by law. ಇದರ ಪ್ರಕಾರ ಮಾತ್ರ ನಮಗೆ ತಾವು restrain ಹಾಕಬಹುದು. ಸೆಕ್ಷನ್ 5. ಸಬ್ ಕ್ಲಾಸ್ 2 ಟೆಲಿಗ್ರಾಫ್ ಆಕ್ಟ್‌ನಲ್ಲಿ ಎಷ್ಟರ ಮಟ್ಟಿಗೆ ನೀವು ನಿಮ್ಮ ಹಕ್ಕನ್ನು ಚಲಾಯಿಸಬೇಕೆಂಬ ನಿಯಮವನ್ನು ಹಾಕಿದ್ದಾರೆ. ಅದನ್ನು ಮೀರಿ ಆಕ್ಟ್ ಮಾಡಿದರೆ, ಅದಕ್ಕೆ ವ್ಯತಿರಿಕ್ತವಾಗಿ ತಮ್ಮ ಹಕ್ಕನ್ನು, ಅಧಿಕಾರವನ್ನು ಚಲಾವಣೆ ಮಾಡಿದರೆ, ಶಿಕ್ಷೆಗೆ ಗುರಿಯಾಗಲೇಬೇಕಾಗುತ್ತದೆ. ಅದಕ್ಕೆ ನಾವು ಅವರಿಗೆ expel ಮಾಡಿ ಎನ್ನುವ ಮಟ್ಟಕ್ಕೆ ಹೋಗುವುದಿಲ್ಲ. ಅವರಾಗಿಯೇ ರಾಜೀನಾಮೆ ಕೊಡಬೇಕೆಂದು ನಾನು ಕೇಳುತ್ತೇನೆ.

ಅಧ್ಯಕ್ಷರು.—ಖರ್ಗೆಯವರೆ, ನಿಯಮ ೬೮, ೬೯ ಮತ್ತು ೭೦ ಈ ಮೂರನ್ನೂ ಓದಿ ಹೇಳಿದ್ದೇನೆ. There is no motion ; no vote , do not exert yourself too much.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಎಕ್ಸ್‌ಟ್ರಾರ್ಡಿನರಿ ಕೇಸ್. ಈ ರೀತಿಯಾಗಿ ಹಿಂದೆ ಯಾರೂ ಕೂಡ ಈ ಸದನದ ಸದಸ್ಯರನ್ನಾಗಲೀ, ವಿರೋಧಪಕ್ಷದ ನಾಯಕರನ್ನಾಗಲೀ ಅವಮಾನ ಮಾಡಿಲ್ಲ ಏಕೆಂದರೆ, ಆಕ್ಟ್‌ನಲ್ಲಿ ಕ್ಲಿಯರ್ ಆಗಿದೆ. ಯಾರಾದರೂ ಸದಸ್ಯರ ಟೆಲಿಫೋನ್ ಟ್ಯಾಪಿಂಗ್ ಮಾಡಬೇಕಾದರೆ, ಅವರು ಏನಾದರೂ ಎಕನಾಮಿಕ್ ಅಫೆಂಡರ್ ಇರಬೇಕು ಅಥವಾ ಅವರು ಸ್ಮಗ್ಲರ್ ಇರಬೇಕು ಅಥವಾ ಅವರಿಂದ ಸಮಾಜಕ್ಕೆ ಧಕ್ಕೆಯಾಗುತ್ತಿರಬೇಕು. ಅಂತವರ ಟೆಲಿಫೋನ್ ಮಾತ್ರ ಟ್ಯಾಪ್ ಮಾಡಬೇಕೆಂದು ಇದ್ದ ಮೇಲೆ, ಇವರೆಲ್ಲರೂ ಯಾರು ? ಇವರ ಟೆಲಿಫೋನ್ ಟ್ಯಾಪಿಂಗ್ ಹೇಗೆ ಮಾಡಿದರು. ರಘುಪತಿಯವರಾಗಲೀ, ದೇವೇಗೌಡರಾಗಲೀ ಇವರೆಲ್ಲರೂ ಅದರಲ್ಲಿ ಇನ್‌ವಾಲ್ವ್ ಆಗಿದ್ದಾರೆಯೇ ? ನಾನು ಒಬ್ಬ ಸಾಮಾನ್ಯ ಸದಸ್ಯನಾಗಿ, ನನ್ನ ಹಕ್ಕಿನ ಪ್ರಶ್ನೆ ಇದೆ, ಅದಕ್ಕಾಗಿ ಕೇಳುತ್ತಿದ್ದೇನೆ, ಕೇಂದ್ರದಲ್ಲಿ ನಿಮ್ಮ ಸರ್ಕಾರ ಇದೆ, ಶ್ರೀ ಜೈಲ್‌ಸಿಂಗ್ ಅವರನ್ನು ಏನು ಮಾಡಬೇಕೆಂದು ಕೇಳಿ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಏನೆಂದರೆ ಇವರು ಎಲ್ಲಾ ನಾರ್ಮ್ಸ್ ವಯಲೇಟ್ ಮಾಡಿದ್ದಾರೆ, ಎಲ್ಲಾ ಡೀಸೆನ್ಸಿನ್ನೂ ತೆಗೆದುಹಾಕಿದ್ದಾರೆ ಮತ್ತು ಮೌಲ್ಯಾಧಾರಿತ ರಾಜಕಾರಣ ಎಂದು ಹೇಳಿ, ಇವತ್ತು ಎಲ್ಲರಿಗೂ ತೊಂದರೆ ಕೊಡತಕ್ಕ ಕೆಲಸವನ್ನು ಮಾಡಿದ್ದಾರೆಯೇ ಹೊರತು, ಮೌಲ್ಯಾಧಾರಿತ ರಾಜಕಾರಣ ಮಾಡಿಲ್ಲ. ಅದಕ್ಕಾಗಿ ಇದರ ಬಗ್ಗೆ ತಾವು ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೀವು, ನನಗೆ ಏನು ಅಧಿಕಾರ ಇದೆಯೆಂದು ಹೇಳಬಹುದು. ಇವತ್ತು ಇದೇರೀತಿಯಾಗಿ ಬಿಟ್ಟರೆ, ನಾಳೆ ಏನಾಗುತ್ತದೆ, ಬೇರೆಯವರೂ ಕೂಡ ಇದೇರೀತಿ ಮಾಡುತ್ತಾರೆ. ಅವರು ರಾಜೀನಾಮೆ ಕೊಡುವುದಿಲ್ಲ, ನೀವು ಹೋಗಿ ಎಂದು ಹೇಳಿದರೂ ಹೋಗುವುದಿಲ್ಲ. ಅದಕ್ಕಾಗಿ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ, ತಾವು ಸಂಪೂರ್ಣ ರೆಕಾರ್ಡ್ಸ್‌ನ್ನ ತರಿಸಿಕೊಂಡು, ಅವರಿಗೆ ಏನು ಶಿಕ್ಷೆ ಕೊಡಬೇಕೋ ಅದನ್ನು ಕೊಡಿ. ಅವರ ಮನವೊಲಿಸಿ, ಇಲ್ಲ ನಾನೇ ಕನ್‌ವಿನ್ಸ್ ಆಗಿದ್ದೇನೆ, ನಾನೇ ಈ ಸದನವನ್ನು ಬಿಟ್ಟು ಹೋಗುತ್ತೇನೆಂದು ಅವರೇ ಹೇಳಿದರೆ ಸಂತೋಷ. ಇಷ್ಟು ಹೇಳಿ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂಧಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ನಾವು ೬೮ನೇ ನಿಯಮದ ಪ್ರಕಾರ ತಂದಿರತಕ್ಕ ಈ ವಿಷಯದ ಚರ್ಚೆಗೆ ಕೊಟ್ಟಿರತಕ್ಕ ಅವಕಾಶ ಏನಿದೆ, ಇದರ ವ್ಯಾಪ್ತಿಯನ್ನು ತಾವು ಹೇಳಿ, ಈ ವ್ಯಾಪ್ತಿಯನ್ನು ಮೀರದೆ, ನಾವು ಭಾಷಣ ಮಾಡಬೇಕೆಂದು ಹೇಳಿದ್ದೀರಿ, ಮತ್ತು ಇವರ ಉದ್ದೇಶವಾದರೂ ಏನು ಎನ್ನುವುದನ್ನು ಹೇಳಿದ ಮೇಲೆ ತಾವು ಅಪ್ಪಣೆ ಕೊಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದು ಮಾತು ಹೇಳಿದರು. ಈ ಅವಕಾಶವನ್ನು ಉಪಯೋಗಿಸಿಕೊಂಡು, ನನ್ನನ್ನು ಚಾರಿತ್ರ್ಯವಧೆ ಮಾಡಬಹುದು ಎನ್ನುವ ಶಂಕೆಯಿಂದ ಹೇಳಿದರು. ನಮ್ಮ ವಿರೋಧಪಕ್ಷದವರ ಭಾವನೆ ಆ ರೀತಿ ಇದೆ. ಈ ವಿಷಯ ಅವರನ್ನು ಕೆರಳಿಸಿರಬಹುದು ಎಂದು ನನ್ನ ಭಾವನೆ. ಬಹುಶಃ ನಾವು ಯಾರ ಚಾರಿತ್ರ್ಯವಧೆ ಮಾಡುವುದಕ್ಕೂ ಕೂಡಾ ಹೋಗುವುದಿಲ್ಲ. ಹೆಗಡೆಯವರು ನಾವು ಬಹಳ ವರ್ಷಗಳಿಂದ ಸ್ನೇಹಿತರು. ಬಹಳ ವರ್ಷಗಳಿಂದ ಅಸೆಂಬ್ಲಿಯಲ್ಲಾಗಲೀ, ಸಂಸತ್ತಿನಲ್ಲಾಗಲೀ ಕೆಲಸ ಮಾಡಿದಂಥವರು. ನಾವು ಅವರ ಚಾರಿತ್ರ್ಯವಧೆ ಮಾಡುವುದಕ್ಕೆ ಇಲ್ಲಿ ಬಂದು ನಿಂತಿಲ್ಲ, ಮತ್ತು ನಿರ್ಣಯವನ್ನೂ ತಂದಿಲ್ಲ. ಮಾನ್ಯ ರಾಮಕೃಷ್ಣಹೆಗಡೆಯವರು ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ, ಕೇಂದ್ರ ಸರಕಾರದ ತಂತಿ ವ್ಯವಹಾರ ಇಲಾಖೆಯ ಕಾನೂನು ಹೇಗೆ ಹರಣವಾಗಿದೆ ಎಂಬ ವಿಚಾರದಲ್ಲಿ, ಇದರಿಂದ ಉಂಟಾಗಿರತಕ್ಕಂಥ ನೋವುಗಳು, ಇದರಿಂದ ಉಂಟಾಗಿರತಕ್ಕಂಥ ಹಕ್ಕುಬಾಧ್ಯತೆಗಳು ಏನಾಗಿದೆ, ನಮ್ಮ ಗೌರವ ಘನತೆ ಸಂಸತ್ತಿನಲ್ಲಾಗಲೀ, ವಿಧಾನಸಭೆಯಲ್ಲಾಗಲೀ ಏನಾಗಿದೆಯೆಂದು ಇರತಕ್ಕಂಥ ವಿಚಾರವನ್ನು ಈ ಸಭೆ ಚರ್ಚೆಯ ಮೂಲಕ ಸಾರ್ವಜನಿಕರ ಗಮನಕ್ಕೆ ಜೊತೆಗೆ ಸರಕಾರದ ಗಮನಕ್ಕೆ ತಂದು ಈ ಬಗ್ಗೆ ತೀರ್ಮಾನ ತೆಗೆದು

ಕೊಳ್ಳಬೇಕೆಂಬ ಉದ್ದೇಶದಿಂದ ನಾವು ತಂದಿದ್ದೇವೆ. ಶ್ರೀಮಾನ್ ಖರ್ಗೆಯವರು ಈ ಕಾನೂನುಗಳನ್ನು ಉಲ್ಲೇಖ ಮಾಡಿದಾಗ ರಾಜ್ಯ ಸಭೆಯ ಒಂದು ಅಧೀನ ಸಮಿತಿಯು ಸಭೆಯಲ್ಲಿ ಕೊಟ್ಟಂಥ ಹೇಳಿಕೆಯನ್ನಾಗಲೀ, ವರದಿಯನ್ನಾಗಲೀ, ಅದರ ಆಗುಹೋಗುಗಳನ್ನಾಗಲೀ, ತಪ್ಪು ನೆಪ್ಪುಗಳನ್ನಾಗಲೀ, ಚರ್ಚೆ ಮಾಡಬಾರದೆಂದು ತಾವು ಹೇಳಿದಿರಿ. ಇಲ್ಲಿ ಸೀಮಿತವಾಗಿರತಕ್ಕಂಥ ಚರ್ಚೆ ಏನೆಂದರೆ, Telephone tapping is a heinous crime...... ಎಲ್ಲಾ ಪತ್ರಿಕೆಗಳೂ ಕೂಡಾ ಇದನ್ನು ಹೇಳಿದ್ದಾವೆ. ಹೀನಸ್ ಕ್ರೈಮ್ ಎಂದು ಹೇಳಿದರೂ ಟೆಲಿಫೋನ್ ಟ್ಯಾಪಿಂಗ್ ಮಾಡುವುದಕ್ಕೆ ಅವಕಾಶ ಇದೆ. ಅದಕ್ಕೆ ಸಂಬಂಧಪಟ್ಟ ಜನರನ್ನು ಈ ಆಕ್ಟ್‌ನಲ್ಲಿ ಇರುವಂಥವರನ್ನು ಆಗಲೇ ಹೇಳಿದ್ದಾರೆ. ಪುನಃ ನಾನು ಅದನ್ನು ಪ್ರಸ್ತಾಪ ಮಾಡಬೇಕಾಗಿಲ್ಲ. ಆಂಟಿ ಸೋಷಿಯಲ್ ಎಲಿಮೆಂಟ್ಸ್ ಆಗಲೀ ಅಥವಾ ಬ್ಲಾಕ್ ಮಾರ್ಕೆಟಸ್ ಆಗಲೀ ಇದ್ದರೆ ಅವರ ಟೆಲಿಫೋನ್ ಟ್ಯಾಪ್ ಮಾಡುವುದಕ್ಕೆ ಅವಕಾಶ ಇದೆ. ಆದರೆ ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿ, ಈ ರಾಜ್ಯದ ಜವಾಬ್ದಾರಿಯನ್ನು ಹೊತ್ತು ಈ ರಾಜ್ಯದಲ್ಲಿ ಅವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಅವರು ಮಾಡಿರತಕ್ಕಂಥ ಈ ಟೆಲಿಫೋನ್ ಹಗರಣ ಬಗ್ಗೆ ಬಹುಶಃ ರಾಜ್ಯಕ್ಕೆ ಸೀಮಿತವಾಗಿ, ಇದರ ಒಂದು ತಪ್ಪು ನೆಪ್ಪುಗಳು ಏನಾಗಿವೆ ಎನ್ನತಕ್ಕಂಥಾದ್ದನ್ನು ಆಗ ಈ ರಾಷ್ಟ್ರ ವ್ಯಾಪ್ತಿಯಲ್ಲಿ ಚರ್ಚೆಯಾಗುತ್ತಿದೆ. ರಾಜ್ಯ ವ್ಯಾಪ್ತಿಯಲ್ಲಿ ಚರ್ಚೆಯಾಗುತ್ತಿದೆ, ಇದ್ದಂಥ ಈ ರಾಜ್ಯದ ಮುಖ್ಯಕಾರ್ಯದರ್ಶಿಗಳು, ಇವರ ಅಧೀನದಲ್ಲಿದ್ದಂಥವರು, ಮಾಡಿದಂಥ ಒಂದು ಹೇಳಿಕೆ, ಕಳುಹಿಸಿದಂಥ ಒಂದು ವಿಚಾರದ ಬಗ್ಗೆ ಈ ರಾಜ್ಯದಲ್ಲಿ ಅನುಮಾನ ಬಂದಿದೆ. ಏತಕ್ಕೆಂದು ಹೇಳಿದರೆ, ನಾವು ನಿರ್ಧಾರ ಮಾಡತಕ್ಕಂಥ ಕಾಲದಲ್ಲಿ ಈ ಒಂದು ಚೀಫ್ ಸೆಕ್ರೆಟರಿಯವರ ಕಮ್ಯೂನಿಕೇಷನ್ ಆಧಾರದ ಮೇಲೆ ಸಂಪೂರ್ಣವಾಗಿ ಜವಾಬ್ದಾರಿ ಮುಖ್ಯಮಂತ್ರಿಯವರದ್ದು, ಇದಕ್ಕೆ ಮಂತ್ರಿಯವರೇ ಕಾರಣ. ಯಾರು ಯಾರನ್ನು ಟೆಲಿಫೋನ್ ಕದ್ದಾಲಿಕೆಯ ವಿಚಾರದಲ್ಲಿ ಸೇರಿಸಬೇಕು ಎಂದು ಅವರ ಹೆಸರುಗಳನ್ನು ಹೇಳಿದಂಥವರು ಅವರು. ಮುಖ್ಯಮಂತ್ರಿಗಳ ಆದೇಶದಂತೆ ಇದು ನಡೆದಿದೆ ಎಂಬ ವಿಚಾರ ಇದೆಯಲ್ಲ ಇದನ್ನು ನಾವು ಚರ್ಚೆ ಮಾಡದೇ ಹೋದರೆ ಈ ರಾಜ್ಯದ ಎಲ್ಲ ಜನರಿಗೆ ಮತ್ತು ಈ ಸದನಕ್ಕೆ ಅಗೌರವವನ್ನು ಸೂಚಿಸಿದಂತಾಗುತ್ತದೆ. ಇದರ ಜೊತೆಗೆ ಮುಖ್ಯಮಂತ್ರಿಗಳಾಗಿ ಈ ಕಮ್ಯೂನಿಕೇಷನ್ ಹೇಳಿದರು ಎಂಬುದು ರುಜುವಾತಾಗಿ ಅಧಿಕೃತ ನಿಯಮದಲ್ಲಿ ಸೇರಿದೆ. ಏಕೆಂದರೆ, ನಮ್ಮ ರಾಜ್ಯದಿಂದ ಅವರು ರಾಜ್ಯಸಭೆಗೆ ಕಳುಹಿಸಿದ್ದಾರೆ. ಆದುದರಿಂದ ನಮ್ಮ ರಾಜ್ಯದಲ್ಲಿ ಟೆಲಿಫೋನ್ ಹರಣ ನಡೆದಿದೆ. ಈ ಹೆಸರುಗಳು ಈಗಾಗಲೇ ಪತ್ರಿಕೆಗಳ ಮೂಲಕ ಗೊತ್ತಾಗಿದೆ. ಆದುದರಿಂದ ಸಂವಿಧಾನದ ಹರಣ ಹೇಗೆ ನಡೆದಿದೆ ಎಂದು ಹೇಳಿದರೆ, ಇದು ನಮ್ಮ ನಾಗರೀಕ ಹಕ್ಕು ಮತ್ತು ನಮ್ಮ ಸ್ವಾತ್ರಂತ್ರ್ಯಕ್ಕೆ ಧಕ್ಕೆ ಬರತಕ್ಕಂಥ ವಿಚಾರ ಎಂದು ಈ ಒಂದು ಸಭೆಯಲ್ಲಿ ಚರ್ಚೆಯ ಮೂಲಕ ಹೇಳಬೇಕಾಗಿದೆ. ಈ ಒಂದು ಸಂವಿಧಾನದ ಹರಣವನ್ನು ಯಾರು ಸಂವಿಧಾನದ ರಕ್ಷಣೆ ಮಾಡುತ್ತೇವೆಂದು ಹೇಳಿ ಪ್ರತಿಜ್ಞೆ ಮಾಡಿ, ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಜವಾಬ್ದಾರರಾಗಿದ್ದರೋ ಅವರೇ ಸಂವಿಧಾನದ ಹರಣ ಮಾಡಿದರೆ ಅವರೇ ನಾಗರೀಕ ಹಕ್ಕುಗಳನ್ನು ಬಂಧಿಸಿದರೆ ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿದ್ದರೆ ಇದು ನಮ್ಮ ಸಂವಿಧಾನದಲ್ಲಿರತಕ್ಕಂಥ ಅಪರಾಧ ಅಲ್ಲವೆ ಎಂದು ನಾವು ವಿಚಾರ ಮಾಡಬೇಕಾಗಿದೆ.

ಈ ಸಭೆಯ ಸದಸ್ಯರು ಕೂಡ ಈ ಬಗ್ಗೆ ಗಮನಹರಿಸಬೇಕಾಗಿದೆ. ಆದ್ದರಿಂದ ಸಂವಿಧಾನದ ಹರಣ ಅವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ನಡೆದಿದೆ ಎನ್ನುವುದಕ್ಕೆ ರುಜುವಾತು ಕೂಡ ನಾವು ಹೇಳಬೇಕಾಗಿಲ್ಲ, ರುಜುವಾತು ಆಗಿದೆ. ನಾವು ಭಾಷಣಗಳನ್ನು ಮಾಡಿ ರುಜುವಾತು ಮಾಡಬೇಕೆಂದು ಹೇಳಬೇಕಾಗಿಲ್ಲ, ಈಗಾಗಲೆ ಪತ್ರಿಕೆಗಳ ಮೂಲಕ ಕಮ್ಯುನಿಕೇಷನ್ಸ್ ಮೂಲಕ ಈ ಸಂವಿಧಾನದ ಹರಣ ಮಾಡಿದ್ದಾರೆ ಎನ್ನತಕ್ಕಂಥ ಉಲ್ಲೇಖ ಮಾಡಿದ್ದಾರೆ. ೧೯೮೮ರಲ್ಲಿ ಮೌಲ್ಯಾಧಾರಿತ ರಾಜಕಾರಣಿಗಳೆಂದು ಹೇಳಿದರು. ಅವರು ಮೌಲ್ಯಾಧಾರಿತವಾಗಿರಲಿ, ನಾವು ಅವರ ಶ್ರೇಷ್ಠತೆಗಾಗಲಿ, ಅವರ ಗೌರವಕ್ಕಾಗಲಿ, ಅವರ ಘನತೆಗಾಗಲಿ ಧಕ್ಕೆ ಬರತಕ್ಕಂಥ ಮಾತನ್ನು ಆಡುವುದಿಲ್ಲ. ಅವರು ೧೯೮೮ರಲ್ಲಿ ರಾಜೀನಾಮೆ ಕೊಟ್ಟರು. ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯಲ್ಲಿ ಒಂದು ರೈಟಿಂಗ್ ಇದೆ. ಅವರು ರಾಜೀನಾಮೆ ಕೊಟ್ಟಂತಹ ಕಾಲದಲ್ಲಿ ಏನು ಹೇಳಿದ್ದಾರೆ ಎಂದರೆ,

"There was no choice for Mr. Ramakrishna Hegde but to quit. He has entangled in the tapping his Government used to spy on his political friends and foes. This has clearly tarnished the image of the man who has been pleading for a value based and principled politics. The Minister of Power quit causing and the rest of the responsibility for

> the telephone tapping and the Centre's refusal to set up a judicial enquiry on the issue did not exonerate him in the least for allowing the infringement of the liberty of the citizens and the encroachment on their privacy."

This is a clear cut statement and writing and I think that everybody should know that how far the power wing operates and how power corrupts absolutely, absolute power. This is a question where the Member's rights are involved. What are the Members rights involved in this? He has suggested and he has given permission to tap telephones of certain People. Some of them are today respectable Members of this House and some of them are Ministers and they are very responsible. Even journalists phones have been tapped. The Telegraph Act says whose Phones should be tapped. Tapping of phones, of course, is not an offence. It is an offence only when they tap the phones of persons who are innocent. Therefore, this is a political vendetta in order to malign our party, the Opposition Party at that time viz., the Congress Party and they have included the names of the prominent congress leaders as well as to disown his own enemies in his own ranks. This is a conspiracy that has been hatched. ಈಗ ನಮ್ಮ ಸದನದ ಹರಣ, ನಮ್ಮ ಸದನದ ಗೌರವದ ಹರಣ ಆಗಿದೆ. ಇದಕ್ಕೆ ಯಾರು ಕಾರಣರು ? ಕಳೆದ ಎರಡು ವರ್ಷಗಳ ಹಿಂದೆ ಆಗಲಿ. ಈಗ ನಮ್ಮ ಸಭೆಯಲ್ಲಿ ಕುಳಿತು ಕೊಂಡಿರತಕ್ಕಂಥ ಸದಸ್ಯರ ಗೌರವ, ಘನತೆ, ಅವರು ಕೆಲಸ ಮಾಡತಕ್ಕಂಥ ಹಕ್ಕು ಇವುಗಳ ಹರಣ ಮಾಡಿದ್ದಾರೆ. ಇದಕ್ಕೆ ಯಾರು ಹೊಣೆ? ಇವರನ್ನು ಶಿಕ್ಷೆ ಮಾಡತಕ್ಕಂಥವರು ಯಾರು ? ಆಗ ಎಲ್ಲಾ ಮಂತ್ರಿಗಳ ಸದಸ್ಯರ ಟೆಲಿಫೋನ್‌ಗಳ ಟ್ಯಾಪಿಂಗ್ ಮಾಡಿದ್ದಾರೆ. ಟೆಲಿಫೋನ್ ಟ್ಯಾಪಿಂಗ್ ಮಾಡಿದಂತಹ ಸದಸ್ಯರನ್ನು ಜನ ಅನುಮಾನಾಸ್ಪದವಾಗಿ ನೋಡುತ್ತಾರೆ, ಇವರ ಟೆಲಿಫೋನ್ ಟ್ಯಾಪಿಂಗ್ ಮಾಡಿದ್ದರಂತೆ, ಇವರು ಏನೋ ತಪ್ಪು ಕೆಲಸವನ್ನು ಮಾಡುತ್ತಿದ್ದರಂತೆ, ಇವರು ಏನೋ ಕಳ್ಳತನ ಮಾಡುತ್ತಿದ್ದರಂತೆ ಹೀಗೆ ನಾನಾ ರೀತಿಯಲ್ಲಿ ಅವರ ಒಂದು ಘನತೆ, ಅವರ ಒಂದು ಭಾವನೆಗೆ ಅವರ ಒಂದು ಗೌರವಕ್ಕೆ ಧಕ್ಕೆ ತರತಕ್ಕಂಥ ಹರಣ ಮಾಡತಕ್ಕಂಥದ್ದು ಮಹಾಪರಾಧ ಅಲ್ಲವೆ. ಇದನ್ನು ಈ ಸಭೆ ತೀರ್ಮಾನ ಮಾಡಬೇಕಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ನಾನು ಅವರಲ್ಲಿರತಕ್ಕಂಥ ರಾಜಕೀಯ ಗುಣಗಳನ್ನು ಹೇಳಿದೆ. ಅದೇ ಮುಖ್ಯಮಂತ್ರಿಯಾಗಿದ್ದಂಥ ಬೊಮ್ಮಾಯಿಯವರು ಒಂದು ಹೇಳಿಕೆಯನ್ನು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ,—ಮಾನ್ಯ ಅಧ್ಯಕ್ಷರೇ, ಇದ್ಯಾಕೆ ಬೇಕು ? ಬೊಮ್ಮಾಯಿಯವರು ಹೇಳಿದ್ದಾರೆ, ದೇವೇಗೌಡರು ಹೇಳಿದ್ದಾರೆಂದು ಇದು ಏಕೆಬೇಕು.

ಅಧ್ಯಕ್ಷರು,—ಅದು ಅಪ್ರಸ್ತುತ.

(ಗೊಂದಲ)

SRI M. MALLIKARJUNA KHARGE.—Telephone network is through out the country

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ ಟೆಲಿಫೋನ್ ಕದ್ದಾಲಿಕೆಗೆ ಬಗ್ಗೆ ಅಷ್ಟಕ್ಕೆ ಸೀಮಿತ ಮಾಡಿಕೊಳ್ಳಿ.

ಶ್ರೀ ಕೆ. ಲಕ್ಕಪ್ಪ.—ಪೇಪರನ್ನು ಇನ್‌ಸರ್ಟ್ ಮಾಡಿದ್ದಾರೆ. ಬೇಕಾದವರ ಹೆಸರು ತೆಗೆದಿದ್ದಾರೆ. ಬೇಡವಾದವರ ಹೆಸರನ್ನು ಹಾಕಿದ್ದಾರೆ, ಇದನ್ನು ಯಾರು ಹೇಳಿದ್ದಾರೆ? ಇವರ ಕಲೀಗ್ ಇವರ ಕೆಳಗೆ ಕೆಲಸ ಮಾಡಿದಂಥವರೇ, ಈಗ ಅವರು ಅಧ್ಯಕ್ಷರಾಗಿದ್ದಾರೆ, ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಬೊಮ್ಮಾಯಿಯವರು ಮಾಡಿರಲಿ, ಅಥವಾ ಮಾನ್ಯ ಹೆಗಡೆಯವರೇ ಮಾಡಿರಲಿ, ಇದು ಮಹಾಪರಾಧವಲ್ಲವೇ ಅನ್ನತಕ್ಕಂಥಾದ್ದನ್ನು ನೋಡಬೇಕು. ಹಾಗೆ ಮಾಡಿದರೆ. it is a violation of the Telegraphic Act. The Centre and the State have always joined

together in the operation of this Act. It is not that we are making a statement of the Centre and concealing the statement of the State or making the statement of the State and concealing the statement of the Centre. Therefore, the flagrant violation of the Telegraph Act by the then Chief Minister and this is a clear cut case of breach of trust. What is that breach of trust? We have entrusted a responsibility on him and the people have voted for him. He was a popular leader at that time, he was a Chief Minister at that time. How these things have been violated openly and how he has operated olitically in order to take vendatta against political opponents. p it Value-based politics ?

ಇವರದು ಮೌಲ್ಯಾಧಾರಿತ ರಾಜಕಾರಣ. ತಾವೇ ಹೇಳಿ ಸ್ವಾಮಿ. ಇದರಲ್ಲಿ ಮೌಲ್ಯಾದಾರಿತ ಏನಿದೆ?

ಶ್ರೀ ಬಿ. ಹೆಚ್. ಬನ್ನಿಕೋಡ್.—ಅದರಲ್ಲಿ ನಿಮಗೆ ವಿಶ್ವಾಸ ಇಲ್ಲ.

Sri K. Lakkappa.— Insertion of papers also gives suspicion. If there is insertion of paper in the official or secret document, it is a very serious offence, tampering of the document, either Mr. Bommai has done it or our former Chief Minister, I do not want to mention anybody's name. Is it not a crime ? Does it not amount to forgery ? Does it not amount to tampering under Criminal Procedure Code and who is going to take action against them ? I am asking our Government also, to take serious action on this matter. The crime involves flagrant violation of the Constitution and privacy of the Indian citizens and the rights and privileges of the members of this House and casting aspersion on this House. ಮಾನ್ಯ ಹೆಗಡೆಯವರು ಒಂದು ಸ್ಟೇಟ್‌ಮೆಂಟನ್ನು ಮಾಡಿದ್ದಾರೆ. ಅದು ಪೇಪರ್‌ನಲ್ಲಿ ಬಂದಿದೆ. ಸಾಮಾನ್ಯವಾಗಿ ಪೇಪರಿನಲ್ಲಿ ಬರುವುದರ ಬಗ್ಗೆ ನಾನು ಅಷ್ಟಾಗಿ ಗಮನ ಕೊಡುವುದಿಲ್ಲ, ಅವರು ನಾನು ಏಕೆ ಸಭೆಗೆ ಹೋಗಬೇಕೆಂದು ಬಹಳ ಲಘುವಾಗಿ ಮಾತನಾಡಿರುವುದು ಕೆಲವು ಪತ್ರಿಕೆಗಳಲ್ಲಿ ರಿಪೋರ್ಟ್ ಆಗಿದೆ. ಆ ರೀತಿ ಮಾತನಾಡಿದ್ದಾರೆಂಬುದನ್ನು ನಾನು ನಂಬುವುದಿಲ್ಲ ಒಂದು ವೇಳೆ ಆ ರೀತಿ ಅವರು ಮಾತನಾಡಿದ್ರೆ, ಬಹುಶಃ ಅದು ಸದನದ ಸದಸ್ಯರ ಮತ್ತು ಸದನದ ಗೌರವಕ್ಕೆ ಅಪರಾಧ ಮಾಡಿದಂತಾಗುತ್ತದೆಂದು ನಾನು ತಿಳಿದಿದ್ದೇನೆ. ಇಂಥಾ ಪರಿಸ್ಥಿತಿ ಇರುವಾಗ ಈಗಲೇ ನಾವು ಮೋಷನ್ ಮಾಡಬೇಕಾಗುತ್ತದೆ. ಒಂದು ಸಾರಿ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಮೇಲೆ ಪಾರ್ಲಿಮೆಂಟಿನಲ್ಲಿ ಪ್ರಿವಿಲೇಜ್ ಮೋಷನ್ ತಂದು ಅಧಿಕಾರಿಗಳಿಗೆ threat, coercion, force fear ಎಲ್ಲ ಹುಟ್ಟಿಸಿ, ಪಾರ್ಲಿಮೆಂಟಿಗೆ ಕ್ವೆಶ್ಚನ್‌ಗೆ ಸರಿಯಾಗಿ ಕಳುಹಿಸಲಿಲ್ಲವೆಂಬ ಒಂದು ಸಣ್ಣ ಕಾರಣಕ್ಕಾಗಿ ಶ್ರೀಮತಿ ಇಂದಿರಾಗಾಂಧಿಯವರ ಅಧಿಕಾರವನ್ನೇ ಕಿತ್ತುಹಾಕಿದರು ೧೯೭೮ ರಲ್ಲಿ. ಆದರೆ ಇಲ್ಲಿ ನಡೆದಿರತಕ್ಕಂಥ ಹಗರಣದ ಬಗ್ಗೆ ಹೇಳುವುದಾದರೆ, ಈಗ ಈ ಕೃತ್ಯ ಹೇಗೆ ಆಗಿದೆ ಅಂದರೆ ಇಲ್ಲಿ. ಏನಾದರೂ ಡಾಕ್ಯುಮೆಂಟ್ಸ್‌ನ್ನು ಬರೆದು ಕಳುಹಿಸಿದ್ದರೆ, ಅವರು ಪೋಸ್ಟ್. ತ್ರಿಟ್ಟೊ ಅಧಿಕಾರವನ್ನು ಉಪಯೋಗಿಸಿ ಈ ಹೆಸರುಗಳನ್ನೆಲ್ಲ ಬರೆಯಿಸಿ, ಅವರು ಟೆಲಿಫೋನ್ ಟ್ಯಾಪ್ ಮಾಡಿಸಿದ್ದರೆ, ಇದಕ್ಕಿಂತ ಮಹಾಪರಾಧ ಯಾವುದೂ ಇಲ್ಲ. ಆದಕ್ಕೋಸ್ಕರ ನಾನು ತಮಗೆ ಒಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೇನೆ. It involves breach of privilege of this House, of the State, of the Constitution, of individual liberty and privacy of all the citizens and what not ? Therefore, all the laws of the land have been violated and all norms, democratic system, democratic value attached to this House, and the Members, have been completely violated. Therefere, Sir, this discussion should be very fruitful because it cannot bring out anything, I want you to use your prudence and see that the House has inherent powers and

also to see that the discussion will bring some meaningful change in the society, in the democratic functioning and also restoring our prestige, decency and dignity of this House. Therefore. I humbly request that action should be taken; also in the alternative I have already submitted a notice of breach of privilege, that of course, you have said that it is under your consideration. I seek your protection and see that the privilege motion is also admitted regarding that matter. Thank you so much.

MR. SPEAKER.— Mr. Swamy Rao.

೫-೦೫ ಪಿ.ಎಂ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಪಕ್ಷದ ಅನೇಕ ಜನ ನಾಯಕರುಗಳು ಈ ವಿಚಾರದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಈಗಾಗಲೇ ಈ ರಾಜ್ಯದಲ್ಲಿ ನಡೆದ ಟೆಲಿಫೋನ್ ಕದ್ದಾಲಿಕೆ ಪ್ರಕರಣದ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಬಂದು, ರೇಡಿಯೋ ದಲ್ಲಿ ಸುದ್ದಿ ಹರಡಿದ ಕಾರಣದಿಂದಾಗಿ ಈ ಸುದ್ದಿಯನ್ನು ತಿಳಿದಿರತಕ್ಕಂಥ ಗಂಡ-ಹೆಂಡಿರು ಕೂಡ ಇತ್ತೀಚೆಗೆ ಟೆಲಿಫೋನ್‌ನಲ್ಲಿ ಮಾತನಾಡುವುದನ್ನು ಬಿಟ್ಟಿದ್ದಾರೆ. ಮತ್ತೆ ಪ್ರೇಮಿಗಳು ಫೋನ್ ಮೂಲಕ ಮಾತನಾಡುವುದನ್ನು ಬಿಟ್ಟಿದ್ದಾರೆ. ಅಷ್ಟೇ ಅಲ್ಲದೆ, ಗುಟ್ಟು ಮಾತನಾಡುತ್ತಿದ್ದ ಜನರು ಇಂದು ಫೋನ್‌ನಲ್ಲಿ ಗುಟ್ಟು ಮಾತನಾಡುವುದಿಲ್ಲ. ಒಟ್ಟಿನಲ್ಲಿ ಇದು ರಾಜ್ಯದಲ್ಲಿ ಒಂದು ದೊಡ್ಡ ದುರಂತವಾಗಿ social crime ಆಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದು ಮೌಲ್ಯಾಧಾರಿತ ರಾಜಕಾರಣಕ್ಕೆ ತದ್ವಿರುದ್ಧವಾಯಿತು. ಕದ್ದು ಕೇಳುವುದು, ಕದ್ದು ನೋಡುವುದು, ಕದ್ದು ಓದುವುದು, ಕದ್ದು ಹೋಗುವುದು, ಕದ್ದು ಕೆಲಸ ಮಾಡುವುದು, ಮುಂತಾಗಿ ಕದ್ದು ಮಾಡುವು ದೆಲ್ಲವೂ ಅಪರಾಧಗಳಾಗಿವೆ. ಇದು ಗೊತ್ತಿದ್ದರೂ ಕೂಡ ರಾಜ್ಯದ ಮುಖ್ಯ ಮಂತ್ರಿಗಳಾಗಿ ಮಾಡಿದ ಅಪರಾಧವು ಅಕ್ಷಮ್ಯ ಅಪರಾಧ ಅನ್ನಿಸುತ್ತದೆ. ಅವರು ಇತ್ತೀಚೆಗೆ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು. ನಾನು ಫೋನ್ ಕದ್ದು ಕೇಳಿದ್ದರ ಬಗ್ಗೆ ಸಾಬೀತು ಆದರೆ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದರು. ಅವರು ಹೇಳಿದಂತೆ ನಡೆದುಕೊಳ್ಳುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಟೆಲಿಫೋನ್ ಪ್ರಕರಣವನ್ನು ಪತ್ತೆ ಹಚ್ಚಿದಾಗ ಸುಮಾರು ೫೦ ಪರ್ಸೆಂಟ್‌ನಷ್ಟು ಒಪ್ಪಿಕೊಂಡು ರಾಜಿನಾಮೆ ಕೊಟ್ಟಿದ್ದಾರೆ. ಅದೇ ಒಂದು ಕೆಲಸವನ್ನು ಈಗಲೂ ಕೂಡ ಮಾಡುವುದು ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಈ ಕುರಿತು ರಾಜ್ಯದ ಜನರಲ್ಲಿ ಇರತಕ್ಕಂಥ ಸಂದೇಹವನ್ನು, ಮನಸ್ಸಿನಲ್ಲಿರತಕ್ಕಂಥ ಕಲ್ಮಶವನ್ನು ತೊಳೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳಾಗಿದ್ದವರು ಮತ್ತು ಅಧಿಕಾರ ಸ್ಥಾನದಲ್ಲಿರುವವರು ಇಂತಹ ಕೃತ್ಯವನ್ನು ಮಾಡಬಾರದು, ತಾವು ಹೇಳಿದಂತೆ ನಡೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ರಾಜಕೀಯ ದಲ್ಲಿ ಟೇಪಿನ ಯುಗ ಅಂದರೆ ಟೇಪ್ ಮಾಡಿ, ಪ್ರಚಾರ ಮಾಡಿ ದೇಶದ ಜನಕ್ಕೆ ತಿಳಿಸುವ ತಂತ್ರ ಒಂದು ಸಮಯದಲ್ಲಿ ನಡೆಯಿತು. ಇದರ ಬಗ್ಗೆ ಕೆಲವು ಹಿರಿಯರು ಬಹಳ ಸೂಕ್ಷ್ಮವಾಗಿ, ಗಂಭೀರವಾಗಿ ಹೇಳಿದ್ದಾರೆ. ಈ ಸದನದ ಸದಸ್ಯರಾದ ನಮ್ಮ ಹಕ್ಕಿನ ಪ್ರಶ್ನೆ ಇದರಲ್ಲಿ ಬರುತ್ತದೆ. ಸಂವಿಧಾನದ ರಕ್ಷಕರು, ರಾಜಕೀಯದಲ್ಲಿ ನಡೆದು ದೇಶದ ಪ್ರಗತಿಗೆ ಕಾರಣವಾಗುವ ನಾವು ನಮ್ಮ ನಡವಳಿಕೆ ಹೇಗೆ ಇರಬೇಕೆಂಬ ಬಗ್ಗೆ ಸ್ಪಷ್ಟವಾಗಿ ಸಂವಿಧಾನದಲ್ಲೇ ಬರೆದಿದೆ. ಅದರ ಪ್ರಕಾರ ನಡೆಯಬೇಕು. ಹಿಂದೆ 'ಟೆಲಿಫೋನ್ ಕದ್ದಾಲಿಕೆ', ಎಂಬ ವಿಚಾರ ಬಂದಾಗ ಟೆಲಿಗ್ರಾಫಿಕ್ ಆಕ್ಟಿನಲ್ಲಿರುವಂತೆ ಯಾರು ರಾಷ್ಟ್ರ ವಿರೋಧಿಗಳೂ, ಯಾರು ದೇಶದ್ರೋಹಿಗಳೋ ಅವರ ಟೆಲಿಫೋನನ್ನು ಆಲಿಸಿ ಸೂಕ್ತ ಕ್ರಮ ತೆಗೆದು ಕೊಂಡಿರುವ ನಿದರ್ಶನಗಳೂ ಇವೆ. ಆದರೆ ಇಲ್ಲಿ ಇವರ ಪಟ್ಟಿಯಲ್ಲಿ ಬಂದಿರುವವರ ಹೆಸರುಗಳೆಲ್ಲ ಕೆಪಿಸಿಸಿ (ಐ) ಅಧ್ಯಕ್ಷರು, ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು, ಕೆಲವು ಜರ್ನಲಿಸ್ಟ್ ಹೆಸರು ವಿರೋಧ ಪಕ್ಷಗಳ ನಾಯಕರು, ಅವರ ಪಕ್ಷದ ಆಗಿನ ಸ್ನೇಹಿತರುಗಳ ಹೆಸರುಗಳಿವೆ. ಇದು ಏನು ತೋರುತ್ತದೆ ಎಂದರೆ, it is nothing but a revenge ನಾವು ರಿವೆಂಜ್ ತೆಗೆದುಕೊಳ್ಳು ವುದಕ್ಕಾಗಿ ಇಲ್ಲಿ ಇಲ್ಲ. ಮಾತನಾಡಬೇಕಾದರೆ ಎತ್ತರದ ಚಾರಿತ್ರ್ಯ ನಿರ್ಮಿಸಿರುವ ಪ್ಲಾನಿಂಗ್ ಕಮಿಷನ್ನಿನ ಡೆಪ್ಯುಟಿ ಚೇರ್ಮನ್ ಆದರೂ ಅಡ್ಡಿಯಿಲ್ಲ. ಅಂಥವರೂ ಕೂಡ ನಮ್ಮಂಥವರ

ಚಾರಿತ್ರ್ಯವಧೆ ಮಾಡುತ್ತಾರಲ್ಲ ಎಂಬುದೇ ಪ್ರಶ್ನೆ. ನಿಮ್ಮ ಕಾಲದಲ್ಲಿ ಇದು ನಡೆದು ಹೋಯಿತು. ರಾಜಕೀಯ ವಿರೋಧಿಗಳನ್ನು ರಾಜಕೀಯವಾಗೇ ಅವಸಾನ ಮಾಡುವ ನಿಮ್ಮ ಕುತಂತ್ರಕ್ಕೆ ನಾನೂ ಒಬ್ಬ ಬಲಿ. ನಿಮ್ಮದು ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಅಲ್ಲ ಕೊನೆಗೆ ಪಾಲಿಟಿಕ್ಸ್ ಬೇಸ್ಡ್ ಆನ್ ವಾಲ್ಯೂ ಆಯಿತು. ಬೋಫೋರ್ಸ್ ಬಗ್ಗೆ ಬಹಳಷ್ಟು ಮಾತಾಡಿದ್ದಾರೆ.

ಅಧ್ಯಕ್ಷರು.— ಪುನ: ಬೋಫೋರ್ಸ್‌ನ್ನು ಇಲ್ಲಿಗೇಕೆ ತೆಗೆದುಕೊಂಡುಬಂದಿರಿ. ಅದು ಅಪ್ರಸ್ತುತ.

ಶ್ರೀ ಕೆ. ಶಿವಮೂರ್ತಿ.— ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಅನ್ನೋ ಪದ ಚರಿತ್ರೆಯಲ್ಲಿ ಎಲ್ಲಾದರೂ ಸಿಗುತ್ತದೆಯೋ ? ಇದನ್ನು ಯಾವ ಡಿಕ್ಷನರಿಯಲ್ಲಿ ಹುಡುಕಿದರೂ ಗೊತ್ತಾಗಲಿಲ್ಲ. ಪ್ಲೇಟೊ, ಅರಿಸ್ಟಾಟಲ್‌ಗಳೂ ಈ ಪದವನ್ನು ಬಳಸಲಿಲ್ಲ. ಅವರೆಲ್ಲರಿಗಿಂತ ಮುಂದೆ ಹೋಗಿ ಹೇಳಿದ್ದಾರೆ. ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಎನ್ನುವ ಪದವನ್ನು ಎರವಲಾಗಿ ಇವರು ದೇಶಕ್ಕೆ ಕೊಟ್ಟಿದ್ದಾರೆ. ರಾಜೀವಗಾಂಧಿಯವರು ಬೋಫೋರ್ಸ್‌ನಲ್ಲಿದ್ದಾರೆಂದರು, ಆದರೆ ಅವರ ಕೈಲಿ ರಿಕಾರ್ಡ್ಸ್ ತರಲಿಕ್ಕಾಗಲಿಲ್ಲ ಚೀಫ್ ಸೆಕ್ರೆಟರಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರೇನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ಸರ್ಕಾರದ ಅನುಮತಿ ಇಲ್ಲದೆ ಸಾಧ್ಯವೇ ಇಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ, ಮುಖ್ಯಮಂತ್ರಿಯವರಿಗೂ ಗೊತ್ತಿದೆ. ಏನೇ ಕೆಲಸ ನಡೆದರೂ ಕೂಡ ಚೀಫ್ ಮಿನಿಸ್ಟರ್ ಅನುಮತಿಯಿಂದಲೇ ನಡೆಯುತ್ತದೆ. Chief Minister is directly connected. Chief Minister is directly connected to assassinate the character of Members, to take a political revenge, and to damage the reputation of particular Members. This has happened. ಆದುದರಿಂದ ಇದು ಅವರ ಕಾಲದಲ್ಲಿ ವ್ಯವಸ್ಥಿತವಾಗಿ ನಡೆದಿದೆ. ಅಧ್ಯಕ್ಷರೇ, ತಾವು ಹಿಂದಿನ ಚೀಫ್ ಸೆಕ್ರೆಟರಿಯವರನ್ನು ಕರೆಸಿ ಏನೇನು ಹೇಳುತ್ತಾರೆ ಎನ್ನುವುದನ್ನು ವಿಚಾರಣೆ ಮಾಡಬಹುದು, ಡಿಐಜಿ ಇಂಟೆಲಿಜೆನ್ಸ್ ಯಾರಿದ್ದಾರೆ ಅವರನ್ನು ಕರೆಯಿಸಿ ಮಾತನಾಡಿ. ಯಾರ instructions ನಲ್ಲಿ ಇದು ಆಯಿತು? ಹೇಗೆ ಆಯಿತು ಈ ಹೆಸರುಗಳು ಬರುವುದಕ್ಕೆ ಕಾರಣವೇನು ? ಟೆಲಿಫೋನ್ ಟ್ಯಾಪ್ ಆಗಿರತಕ್ಕಂಥದ್ದರ ಬಗ್ಗೆ ಆ್ಯಕ್ಟ್‌ನಲ್ಲಿ ಸಮಾಜಘಾತುಕ ಶಕ್ತಿಗಳು ಎಂದು ಇದೆ. ಇವರು ಸಮಾಜಘಾತುಕ ಶಕ್ತಿಗಳೇ ? ಇವರು ಆ್ಯಂಟಿ ಸೋಷಿಯಲ್ ಎಲಿಮೆಂಟ್ಸೇ ? ಎಂದು ಹೇಳತಕ್ಕಂಥ ಪ್ರಶ್ನೆ ಇಲ್ಲಿದೆ. ಆದುದರಿಂದ ನಾನಾ ರೀತಿಯಲ್ಲಿ ಈ ಒಂದು ಟೇಪನ್ನು ಸೃಷ್ಟಿ ಮಾಡಿ ದೇಶದ ಎಲ್ಲಾ ಜನತೆಗೋಸ್ಕರ ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್‌ನ್ನು preach ಮಾಡಿರತಕ್ಕಂಥದ್ದು ಒಂದು. ಇವರು ಟೇಪಿನ ಸರಮಾಲೆಯನ್ನು ತಾವೇ ಕೊರಳಿಗೆ ಹಾಕಿಕೊಂಡು ಬಿಟ್ಟಿದ್ದಾರೆ. ಬೇರೆಯವರ ಟೆಲಿಫೋನ್ ಟ್ಯಾಪ್ ಮಾಡುವುದಕ್ಕೆ ಹೋಗಿ ತಮ್ಮನ್ನು ತಾವೇ ಹಾಕಿಕೊಂಡುಬಿಟ್ಟಿದ್ದಾರೆ. ಯಾವಾಗಲೂ ಮನುಷ್ಯ ಅತಿಯಾಗಿ ಹೋಗಿಬಿಟ್ಟರೆ ಸರ್ವಜ್ಞ ಒಂದು ಮಾತನ್ನು ಹೇಳಿರತಕ್ಕಂಥದ್ದು ಉಂಟು. ಈ ರೀತಿ ಅತಿಯಾಗಿ ಹೋಗಿಬಿಟ್ಟರೆ ಕೊನೆಗೆ ಅವರೇ ಟ್ಯಾಪ್ ಆಗಿ ಬಿಡುತ್ತಾರೆ. ನಮ್ಮಂಥ ಕಿರಿಯ ಸದಸ್ಯರು, ನಾವು ಏನು ಮಾಡಿದ್ದೇವೆ ಸ್ವಾಮಿ ? ರಾಮಕೃಷ್ಣ ಹೆಗಡೆಯವರು ದೆಹಲಿಯಲ್ಲಿ ಪಾಲಿಟಿಕ್ಸ್‌ನ್ನು ಮಾಡುವವರು. ನಾವು ಏನು ಮಾಡಿದ್ದೇವೆ. concocted tape ನನ್ನ ವಿರುದ್ಧವಾಗಿ ಇಟ್ಟುಬಿಟ್ಟಿದ್ದಾರೆ. ನಾನು ಮರ್ಡರ್ ಮಾಡುವುದಕ್ಕೆ ಹೋಗಿದ್ದೆ ಎನ್ನತಕ್ಕಂಥದ್ದು ಅವರಲ್ಲಿ ಇದೆ. Am I such a political criminal to commit such a mistake ? ಆ ಮಟ್ಟದಲ್ಲಿ ಹೋಗುತ್ತೀನಾ ? Did I commit such a mistake of going to kill somebody else ? That is what they have posed to the public. ಆ ರೀತಿ ಟೇಪನ್ನು ಸೃಷ್ಟಿ ಮಾಡಿ ಮಾಡಿ ಈ ದೇಶದ ಜನತೆಗೆ ಹೇಳತಕ್ಕಂಥದ್ದು. ಈ ರೀತಿ ಟೇಪನ್ನು ಇಟ್ಟು ನಮಗೆ ವಿಕ್ಟಿಮೈಸ್ ಮಾಡಿದ್ದಾರೆ. ನಮ್ಮ ಕ್ಯಾರೆಕ್ಟರ್‌ನ್ನು assassinate ಮಾಡಿದರು, ನಮ್ಮ ರಾಜಕೀಯ ವಧೆಯನ್ನು ಮಾಡಿದರು. ನೀವು ಬೇರೆಯವರನ್ನು, ನಿಮಗೆ ಸರಿಸಾಟಿ ಆಗಿರುವಂಥವರನ್ನು ಮಾಡಿ, ನಾವು ಬೇಡ ಎಂದು ಹೇಳುವುದಿಲ್ಲ. ನೀವು ದೇವಿಲಾಲರ ಮಟ್ಟದಲ್ಲಿ ಮಾತನಾಡಿ. ನಮ್ಮಂಥವರ ಬಗ್ಗೆ ಏತಕ್ಕೆ ಈ ರೀತಿ ಮಾಡುತ್ತೀರಿ ? ಒಬ್ಬ ಆರ್ಡಿನರಿ ಮೆಂಬರ್‌ಗೆ ಅವನ ಕ್ಯಾರೆಕ್ಟರ್ assassinate ಮಾಡಿದ್ದೀರಿ. ನಾವು ಏನು ಮಾಡಿದ್ದೇವೆ, ಹೆಗಡೆ ಸಾಹೇಬರಿಗೆ ಎನ್ನತಕ್ಕಂಥ ಪ್ರಶ್ನೆ. ಆದುದರಿಂದ ಏನು ಶಿಕ್ಷೆ ಕೊಡಬೇಕು ಎಂದು ಅಧ್ಯಕ್ಷರು ತಾವೇ ಹೇಳಬೇಕು. ಏನೂ ಶಿಕ್ಷೆಯನ್ನು ಕೊಡುವುದಕ್ಕೆ ಬರುವುದಿಲ್ಲ ಎಂತಲೂ ಹೇಳಬಹುದು ವಾಲ್ಯೂ ಬೇಸ್ಡ್ ಪಾಲಿಟಿಕ್ಸ್‌ನ್ನು ಮಾತನಾಡತಕ್ಕಂಥ ಜನ, ನಿಮಗೆ ಯಾವ ಶಿಕ್ಷೆಯನ್ನು ಕೊಡಬೇಕು ಹೇಳಿ ? ಈ ರೀತಿಯಾಗಿ ಇವತ್ತು ಅವರ ಪಕ್ಷದಲ್ಲಿ ಬಹಳಷ್ಟು ಚರ್ಚೆ ನಡೆಯುತ್ತಿದೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದು ಅವರವರ ಪಕ್ಷದಲ್ಲಿ ಇರತಕ್ಕಂಥ ಮಾತು. ನಾವೊಬ್ಬರೇ

ರಾಜೀನಾಮೆಯನ್ನು ಕೇಳುತ್ತಿರುವುದು. ಇದನ್ನು ನೀವು ಪ್ರೂವ್ ಮಾಡಿಬಿಟ್ಟರೆ ರಾಜಕೀಯದಿಂದಲೇ ನಾನು ನಿವೃತ್ತನಾಗುತ್ತೇನೆ ಎಂದು ಹಲವಾರು ಸಲ ಅವರು ಹೇಳಿದ್ದಾರೆ. ಅವರ ಪಕ್ಷದವರು ಅದನ್ನು ಕೇಳಿದ್ದಾರೆ.

ಅಧ್ಯಕ್ಷರು.— ಶಿವಮೂರ್ತಿಯವರು ಮುಗಿಸಬೇಕು.

ಶ್ರೀ ಕೆ. ಶಿವಮೂರ್ತಿ.— ಇದು ಸಂವಿಧಾನದ ಪ್ರಶ್ನೆಯಾಗುತ್ತದೆ. ನಮ್ಮ ಹಕ್ಕಿನ ಪ್ರಶ್ನೆಯಾಗಿದೆ. ಈ ರೀತಿ concocted ಟೇಪನ್ನು ಮಾಡಿ ನಮ್ಮ ಕ್ಯಾರೆಕ್ಟರ್‌ನ್ನು assassinate ಮಾಡಿರತಕ್ಕಂಥ ನಿದರ್ಶನ ಯಾವ ಸ್ಟೇಟ್‌ನಲ್ಲಿ ನಡೆಯಿತು ? ಯಾರು ಕಾರಣಕರ್ತರು ? ಯಾವ ರೀತಿ ಟೆಲಿಫೋನ್ ಕದ್ದಾಲಿಕೆ ಮಾಡಿದರು ? ಇದು ಕಾನೂನು ಬರತಕ್ಕಂಥದ್ದೇ ಅಥವಾ ವಿರುದ್ಧ ಆಗಿರತಕ್ಕಂಥದ್ದೇ ? ಇದರ ಬಗ್ಗೆ ತಾವು ಸಮಜಾಯಿಷಿಯನ್ನು ನೀಡಬೇಕು ನಾವ್ಯಾರೂ ಕೂಡ ಇವತ್ತು ರಾಮಕೃಷ್ಣ ಹೆಗಡೆಯವರು ಸದನಕ್ಕೆ ಬರುತ್ತಾರೆಂದು ತಿಳಿದುಕೊಂಡಿರಲಿಲ್ಲ. ಅವರು ಸದನಕ್ಕೆ ಬರುವುದಿಲ್ಲ ಎಂದು ಪತ್ರಿಕೆಯಲ್ಲಿ ಬಂದಿದೆ. ಅವರು ಬಂದಿದ್ದಾರೆ, ಅದಕ್ಕೆ ಮೆಚ್ಚಬೇಕು. ಇಲ್ಲಿ ಏನು ನಡೆಯುತ್ತಿದೆ, ಅದನ್ನು ಡೈರೆಕ್ಟಾಗಿ ಫೇಸ್ ಮಾಡುತ್ತಿದ್ದಾರೆ. ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಮಾಡುವುದಲ್ಲ ಮಾಡಿದ್ದಾರೆ. ಏನೇನು ಮಾಡಿದ್ದಾರೆ, ಈ ದೇಶದಲ್ಲಿ ಏನ್ನತಕ್ಕಂಥದ್ದು ಅವರಿಗೇ ಗೊತ್ತು. ಈ ರೀತಿ ನಮ್ಮನ್ನು ಮೂಲೆಗುಂಪು ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಮಗೆ ಸಾಕಷ್ಟು ಬೆದರಿಕೆಯನ್ನು ಹಾಕಿದ್ದಾರೆ. ಸಾಕಷ್ಟು ಬೆದರಿಕೆ ಎಂದು ಹೇಳಿದರೆ ನಮ್ಮ ಕ್ಯಾರೆಕ್ಟರ್ assassinate ಮಾಡತಕ್ಕಂಥದ್ದು, ನಮಗೆ ಡ್ಯಾಮೇಜ್ ಮಾಡತಕ್ಕದ್ದು ಈ ರೀತಿ concocted ಟೇಪನ್ನು ಸೃಷ್ಟಿ ಮಾಡಿದ್ದಾರೆ. ಅದು ಒರಿಜಿನಲ್ ಟೇಪೊ concocted ಟೇಪೊ ಅದರ ಬಗ್ಗೆ ನಾನು ಕಾಮೆಂಟ್‌ನ್ನು ಮಾಡುತ್ತಿಲ್ಲ. ಆದುದರಿಂದ ನಮ್ಮ ಹಕ್ಕಿನ ಪ್ರಶ್ನೆ ಇಲ್ಲಿದೆ. ಇದು ಸಂವಿಧಾನದ ಪ್ರಶ್ನೆ. ಅವರು ಹಿರಿಯ ಸದಸ್ಯರು ಇದ್ದಾರೆ, ದಯ ಮಾಡಿ ಅವರಿಗೆ ಒಂದು ಇತಿಮಿತಿಯಲ್ಲಿ ಎಲ್ಲೆಯನ್ನು ರೂಪಿಸಿ. ಇಂಥ ಪ್ರಕರಣಗಳು ಮುಂದೆ ಆಗದ ಹಾಗೆ ತಡೆಗಟ್ಟಬೇಕು, ಎಂದು ಪ್ರಾರ್ಥನೆ ಮಾಡುತ್ತೇನೆ. ಕೊನೆಯದಾಗಿ, ಇವರು ಯಾವರೀತಿ ಮಾತನಾಡುತ್ತಾರೆ ಎಂದು ಹೇಳಿದರೆ ಪ್ರಜಾವಾಣಿ ಪೇಪರ್‌ನಲ್ಲಿ ಒಂದು ಕಾಮೆಂಟ್ ಬಂದಿದೆ. ಇವರು ಸದನದ ಕಲಾಪಗಳ ಯಾವ ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುತ್ತಾರೆ ಎಂಬುದೇ ಗೊತ್ತಿಲ್ಲ.

ಅಧ್ಯಕ್ಷರು.— ಅದರ ಬಗ್ಗೆ ಚರ್ಚೆ ಆಯಿತು.

ಶ್ರೀ ಕೆ. ಶಿವಮೂರ್ತಿ.— ನಾನೇನು ಪೇಪರನ್ನು ಓದುತ್ತಿಲ್ಲ. ಸ್ವಲ್ಪ ಹೇಳಿಬಿಡುತ್ತೇನೆ. ರಾಜ್ಯಸಭೆಯ ವರದಿಯ ಮೇಲಂತೂ ಚರ್ಚಿಸುವುದಿಲ್ಲ. ಚರ್ಚಿಸುವುದಕ್ಕೂ ಹೋಗುವುದಿಲ್ಲ, ಹಿಂದೆ ಚರ್ಚಿಸಿದ ನಿದರ್ಶನಗಳೂ ಇಲ್ಲ. ಚರ್ಚೆಗೆ ಪ್ರಮುಖವಾದ ವಿಷಯಗಳು ಕಾರ್ಯಕಲಾಪಗಳಲ್ಲಿ ಇರಲಿಲ್ಲ ಎಂದು ಕಾಣುತ್ತದೆ. ನಮಗೆ ಬೇರೆ ಕೆಲಸ ಇರಲಿಲ್ಲವಂತೆ. ಇದೇ ಒಂದು ಕೆಲಸ ಎಂದು ಚರ್ಚೆ ಮಾಡುತ್ತಿದ್ದೇವೆ. ತಮ್ಮ ಬಗ್ಗೆ ಚರ್ಚೆ ಮಾಡಿ ಏತಕ್ಕೆ ನಿಮ್ಮನ್ನು ದೊಡ್ಡವರನ್ನಾಗಿ ಮಾಡುವುದು? ವಾಲ್ಯೂ ಬೇಸ್ ಪಾಲಿಟಿಕ್ಸ್‌ನ್ನು ಹೇಳಿ. ತಮ್ಮಷ್ಟಕ್ಕೇ ತಾವೇ ದೊಡ್ಡವರಾಗುತ್ತಿದ್ದೀರಿ, ಈ ರೀತಿ ವ್ಯಂಗ್ಯವಾಗಿ ಹೇಳಿದರು ಎನ್ನತಕ್ಕಂಥ ಮಾತು ಪತ್ರಿಕೆಯಲ್ಲಿ ಬಂದಿದೆ. ನಮ್ಮ ಸಂವಿಧಾನದ ಪ್ರಶ್ನೆಯನ್ನು, ನಮ್ಮ ಹಕ್ಕಿನ ಪ್ರಶ್ನೆಯನ್ನು ತಾವು ಕಾಪಾಡಬೇಕು ಎಂದು ಹೇಳಿ. ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೆ, ಕಳೆದ ೨-೩ ಘಂಟೆಗಳ ಕಾಲದಿಂದ ಟೆಲಿಫೋನ್ ಕದ್ದಾಲಿಕೆ ವಿಚಾರದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ನಾನು ಕೇಳಿದೆ. ನಾನು ತಿಳಿದಿರುವುದು ಏನೆಂದರೆ, ಅಪರಾಧ ಮಾಡುವುದು ತಪ್ಪು. ತಪ್ಪು ಮಾಡುವುದೇ ಒಂದು ಘೋರ ಅಪರಾಧ. ಆದರೆ ಮಾಡಿರುವ ತಪ್ಪನ್ನು ಸಮರ್ಥಿಸಿಕೊಂಡು ಹೋಗುವುದು, ಅದೂ ತಿಳಿದೂ–ತಿಳಿದೂ ಸಮರ್ಥಿಸಿಕೊಂಡು ಹೋಗುವುದು ದೇವರ ದೃಷ್ಟಿಯಲ್ಲಿ, ಸಮಾಜದ ದೃಷ್ಟಿಯಲ್ಲಿ ಮತ್ತು ದೇಶದ ದೃಷ್ಟಿಯಲ್ಲಿ ಘೋರ ಅಪರಾಧ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಒಂದು ಸಾರಿ ದೈವ ಸಂಭೂತರನ್ನು ಒಬ್ಬ ಶಿಷ್ಯ ಒಂದು ಪ್ರಶ್ನೆ ಕೇಳಿದನಂತೆ ಸ್ವಾಮಿ, ತಿಳಿಯದೇ ಮಾಡುವ ತಪ್ಪಿಗೆ ಏನು ಶಿಕ್ಷೆ? ತಿಳಿದೂ ಮಾಡುವ ತಪ್ಪಿಗೆ ಏನು ಶಿಕ್ಷೆ ಎಂದು ಕೇಳಿದಾಗ ಅವರು ಹೇಳಿದರಂತೆ, ತಿಳಿಯದೇ ಮಾಡುವ ಅಪರಾಧ ಅಪರಾಧನೇ ಅಲ್ಲ, ತಿಳಿದೂ ತಿಳಿದೂ ಮಾಡುವಂಥ ಅಪರಾಧಕ್ಕೆ ಕ್ಷಮಾಪಣೆಯೇ ಇಲ್ಲ ಎಂದು ಹೇಳಿದ್ದನ್ನು ನಾನು ಒಂದು ಕಡೆ ಓದಿದ್ದೇನೆ. ಇದು ಏನು ಆಗಿದೆ ಅಂದರೆ, ನಾವು ಜನಗಳಿಂದ ಎಲೆಕ್ಟಾಗಿ ಬಂದಿದ್ದೇವೆ. ಎಲೆಕ್ಟಾಗುವ ಟೈಮ್‌ನಲ್ಲಿ ನ್ಯಾಯ ನೀತಿಗಳ ಬಗ್ಗೆ, ಜನರ ಹಕ್ಕನ್ನು ಪ್ರತಿಪಾದನೆ ಮಾಡುವ ಬಗ್ಗೆ ಮತ್ತು ಅವರ ಕೆಲಸ ಕಾರ್ಯಗಳನ್ನು ಮಾಡುವ ಬಗ್ಗೆ, ಅವರಿಗೆ ಅನೇಕ ಆಶೋತ್ತರಗಳನ್ನು ಕೊಟ್ಟು ವಚನಗಳನ್ನು

ಕೊಟ್ಟು ನಾವು ಚುನಾವಣೆಯಲ್ಲಿ ಆಯ್ಕೆಯಾಗಿ ಬರುತ್ತೇವೆ. ಆ ಮುಗ್ಧ ಜನ ನಮ್ಮ ಮಾತುಗಳಿಗೆ ಮಾರು ಹೋಗಿ ಸಿಕ್ಕ ಸಿಕ್ಕ ದೇವರಿಗೆಲ್ಲ ಕೈಮುಗಿದು ಅಯ್ಯೋಪಾಪ ಅವರು ಹೋಗಲಿ ಚುನಾವಣೆಯಲ್ಲಿ ಆಯ್ಕೆಯಾಗಲಿ ಈ ದೇಶಕ್ಕೆ ಒಳ್ಳೆಯದನ್ನು ಮಾಡುತ್ತಾರೆ, ಒಳ್ಳೆಯ ಆದರ್ಶ ವ್ಯಕ್ತಿಗಳಾಗಿ ನಡೆದುಕೊಳ್ಳುತ್ತಾರೆ, ಇವರ ಆದರ್ಶದಿಂದ ನಮಗೆ ಒಳ್ಳೆಯದಾಗುತ್ತದೆ ನಮ್ಮ ಸಂಸಾರಕ್ಕೆ ಒಳ್ಳೆಯದಾಗುತ್ತದೆ, ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಜನರು ಸಿಕ್ಕ ಸಿಕ್ಕ ದೇವರಿಗೆಲ್ಲ ಕೈ ಮುಗಿದು ಅಡ್ಡ ಬಿದ್ದು ಚುನಾವಣೆಯಲ್ಲಿ ಆಯ್ಕೆ ಮಾಡಿ ಕಳಿಸುತ್ತಾರೆ ನಾವು ಇಲ್ಲಿಗೆ ಬಂದ ಮೊದಲನೆಯ ದಿವಸ ನ್ಯಾಯ ನೀತಿಗಳ ಬಗ್ಗೆ ಸಂವಿಧಾನದ ಬಗ್ಗೆ ಪ್ರಮಾಣ ವಚನ ಸ್ವೀಕರಿಸುತ್ತೇವೆ. ಇಷ್ಟೆಲ್ಲಾ ಮಾಡಿ, ಇಷ್ಟೆಲ್ಲಾ ವಿಚಾರಗಳನ್ನು ತಿಳಿದುಕೊಂಡರೂ ಕೂಡ ನಾವು ಇಂತಹ ಅಪರಾಧ ಮಾಡುವುದು ಅಂದರೆ ಯಾವ ದೇವರೂ ಕ್ಷಮಿಸುವುದಿಲ್ಲ. ಮಾನ್ಯ ಅಧ್ಯಕ್ಷರೆ, ಮೇಲೆ ತಕ್ಕಡಿ ಇದೆ ನೋಡಿ, ಅದು ನ್ಯಾಯದ ತಕ್ಕಡಿ. ನಾವು ಅದನ್ನು ಅಲ್ಲಿ ಇಟ್ಟುಕೊಂಡು ತಿಳಿದೂ ತಿಳಿದೂ ಮಾಡಿರತಕ್ಕ ಅಪರಾಧವನ್ನು ಎಷ್ಟರಮಟ್ಟಿಗೆ ಸಮರ್ಥನೆ ಮಾಡಿಕೊಂಡು ಹೋಗುತ್ತೇವೆ ಇದು ಬಹಳ ನೋವು ಆಗುತ್ತದೆ. ಅದು ಯಾರಿಗೂ ಶ್ರೇಯಸ್ಸು ತರತಕ್ಕ ವಿಚಾರ ಅಲ್ಲ. ನನಗೆ ಒಂದು ಅನಿಸುತ್ತದೆ. ಮಾನ್ಯಮುಖ್ಯಮಂತ್ರಿಗಳು ಇದ್ದಾರೆ. ಚೀಫ್ ಸೆಕ್ರಟರಿಯವರು ಡಿ.ಐ.ಜಿ. (ಇಂಟೆಲಿಜೆನ್ಸ್)ಗೆ ಏನಾದರೂ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ ಅಂದರೆ ಅವರ ಸ್ವಂತ ಇಚ್ಛೆ ಮೇಲೆ ಏಕೆ ಕೊಡುತ್ತಾರೆ. ಅವರಿಗೆ ಏನು ಅಂತಹ ಕೆಲಸ ಇದೆ. ಇವರು ಕೊಟ್ಟಿರುವ ಟೆಲಿಫೋನ್ ನಂಬರ್ಸ್ ಎಲ್ಲಾ ರಾಜಕೀಯ ವಿರೋಧಿಗಳು ಆಗಿರುವವರದ್ದು ಅವರ ಹೆಸರನ್ನು ಕೊಟ್ಟಿದ್ದಾರೆ. ಅವರು ಇತರ ರಾಜಕೀಯ ವಿರೋಧಿಗಳೇ ಹೊರತು ಚೀಫ್ ಸೆಕ್ರಟರಿಯವರಿಗೆ ವಿರೋಧಿಗಳಲ್ಲ. 50-52 ಹೆಸರುಗಳನ್ನು ಮಾನ್ಯ ಲಕ್ಕಪ್ಪನವರ ಹತ್ತಿರ ಇದ್ದುದನ್ನು ನಾನು ಓದಿದೆ ಅವರು ಅಂದಿನ ಚೀಫ್ ಸೆಕ್ರಟರಿಗೆ ವಿರೋಧಿಗಳಾಗಿರಲಿಲ್ಲ. ಅವರುಗಳು ಅಂದಿನ ಮುಖ್ಯಮಂತ್ರಿಗಳಿಗೆ ಅಥವಾ ಹೋಂ ಮಿನಿಸ್ಟರಿಗೆ ವಿರೋಧಿಗಳಾಗಿರಬಹುದು. ಇಂತಹ ಕೆಲಸವನ್ನು ಇವರ ಇನ್‌ಸ್ಟ್ರಕ್ಷನ್ ಇಲ್ಲದೇ ಅವರು ಮಾಡಿಲ್ಲ. ಒಂದು ಪಕ್ಷ ಮಾಡಿದರೂ ಈ ರೀತಿ ನಡೆದು ಹೋಗಿದೆ ಎಂದು ಹೇಳಿದರೂ ಕೂಡ ನಿಜವಾಗಿಯೂ ಅವರ ದೊಡ್ಡತನವನ್ನು ನಾನು ಮೆಚ್ಚಿಕೊಳ್ಳುತ್ತಿದ್ದೆ. ಇದೆಲ್ಲಾ ಏನು? ನೋಡಿದ ಜನ ಏನು ತಿಳಿದುಕೊಳ್ಳುತ್ತಾರೆ. ಮಾಡುವುದೇ ಒಂದು, ಹೇಳುವುದೇ ಒಂದು. ಹಾಗಾದರೆ ನಿಮಗೆ ಆತ್ಮ ಎನ್ನುವುದು ಇಲ್ಲವೇ? ಕಾನ್‌ಷಿಯಸ್ ಎನ್ನುವುದು ಇಲ್ಲವೇ? ಇಷ್ಟೆಲ್ಲಾ ಮಾಡಿಕೊಂಡು ಜನಗಳಿಂದ ಓಟುಗಳನು ತೆಗೆದುಕೊಂಡು ಬಂದು ಮಾಡಿರುವ ತಪ್ಪನ್ನೇ ಸಮರ್ಥಿಸಿಕೊಂಡು ಹೋಗುತ್ತಿದ್ದರೆ ಹೊರಗಡೆ ಜನ ನಮ್ಮನ್ನು ನೋಡಿ ನಗುವುದಿಲ್ಲವೇ. ಅಥವಾ ದೇವರಾದರೂ ಕೂಡ ಅಯ್ಯೋ ಮುಂಡೇ ಗಂಡರು ಇದಕ್ಕೋಸ್ಕರ ಈ ಹುದ್ದೆಗೆ ನಿಮ್ಮನ್ನು ನಾನು ತಂದಿದ್ದು ಎಂದು ದೇವರಾದರೂ ಕೂಡ ಆಲೋಚನೆ ಮಾಡುವುದಿಲ್ಲವೇ ? ಇದರ ವಿಚಾರದಲ್ಲಿ ನನಗೆ ಬಹಳ ಸಂಕಟ ಆಗುತ್ತದೆ.

ಅಧ್ಯಕ್ಷರು: ಆ ಪದವನ್ನು ನೀವು ವಾಪಸ್ ತೆಗೆದುಕೊಳ್ಳಿ...

ಶ್ರೀ ಕೆ. ಹೆಚ್. ಹನುಮೇಗೌಡ: ಯಾವ ಪದವನ್ನು ಸ್ವಾಮಿ. ಅದು ನಮ್ಮ ಕಡೆ ಬಳಸುವ ಭಾಷೆ. ಹೊರಗಡೆ ನಾವು ಯಾರಾದರೂ ತಪ್ಪು ಮಾಡಿದರೆ ಜನ ಈ ರೀತಿ ನಮ್ಮನ್ನು ಬೈಯ್ಯುತ್ತಾರೆ. ಆ ರೂಢಿಯಲ್ಲಿ ನಾನು ಹಾಗೆ ಹೇಳಿದೆ. ಅದು ಏನಾದರೂ ತಪ್ಪಾಗಿದ್ದರೆ ನಾನು ಅದನು ವಾಪಸ್ ತೆಗೆದುಕೊಳ್ಳುತ್ತೇನೆ. ನಾವು ಎಲ್ಲಾ ವಿದ್ಯಾವಂತರು, ಸಮಾಜದ ಮುಖಂಡರುಗಳು. ನಾವು ಆದರ್ಶವಾಗಿ ನಡೆದುಕೊಳ್ಳದೇ ಹೋದರೆ ಹೇಗೆ? ರಾಮಾಯಣ ಓದಿದ್ದೇವೆ. ಟಿ.ವಿ.ಯಲ್ಲಿ ಕೂಡ ರಾಮಾಯಣ ಬಂತು. ಒಂದು ಸಣ್ಣ ಮಾತಿಗೋಸ್ಕರ ಶ್ರೀರಾಮಚಂದ್ರ ತನ್ನ ಮುತ್ತಿನಂತಹ ಹೆಂಡತಿಯನ್ನು ಪತಿವ್ರತೆಯಾದ ಸೀತೆಯನ್ನು ಕಾಡಿಗೆ ಕಳಿಸಿದ. ಇದನ್ನೆಲ್ಲಾ ಓದಿ ನೋಡಿ ತಿಳಿದುಕೊಂಡೂ ಹೀಗೆ ಮಾಡುವುದೇ? ಇದೂ ಒಂದು ಸಂಸ್ಕೃತಿಯೇ ಹಿಂದೊಮ್ಮೆ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೆ. ೭೦-20 ವರ್ಷಗಳ ಹಿಂದೆ ಒಬ್ಬ ಗೌಡರು ಹರಿಕಥೆ ಕೇಳುವುದಕ್ಕೆ ಹೋದರು. ಅವತ್ತು ಸೀತೆಯ ಅಗ್ನಿಪರೀಕ್ಷೆ ಕಾಲ. ಅದನು ಗೌಡರು ಕೇಳಿದರು. ಅಯ್ಯೊ ಬೆಂಕಿಯೊಳಗೆ ಆ ಹೆಂಗಸು ಹೋದರೂ ಕೂಡ ಅಗ್ನಿದೇವ ಪ್ರತ್ಯಕ್ಷನಾಗಿ ಈಚೆಗೆ ತಂದುಬಿಟ್ಟನಲ್ಲ, ಎಂತಹ ಪತಿವ್ರತೆ ಎಂದುಕೊಂಡು ಸೀದ ಮನೆಗೆ ಬಂದ. ಹೆಂಡತಿಯನ್ನು ಕೂಗಿ ಬಾಗಿಲು ತಟ್ಟಿದ. ಆಗ ರಾತ್ರಿ ಎರಡು ಗಂಟೆಯಾಗಿತ್ತು. ಆಗ ಹೆಂಡತಿ ಬಂದು ಏಕೆ ಹೀಗೆ ಜೋರಾಗಿ ಕೂಗುತ್ತೀರಿ ನಿಧಾನವಾಗಿ ಕೂಗುವುದಕ್ಕೆ ಆಗುವುದಿಲ್ಲವೇ ಎಂದು ಕೇಳಿದಳು. ಆಗ ಗೌಡರು ಅಲ್ಲ ಕಣೆ, ನಾನು ಈಗ ಹೋಗಿ ಹರಿಕಥೆ ಕೇಳಿಕೊಂಡು ಬಂದೆ, ಸೀತಾದೇವಿ ಎಂತಹ ಪತಿವ್ರತೆ ಎಷ್ಟರಮಟ್ಟಿಗೆ ಇದ್ದಳು, ಬೆಂಕಿಗೆ ಬಿದ್ದರೂ ಕೂಡ ಅಗ್ನಿದೇವ ಪ್ರತ್ಯಕ್ಷನಾಗಿ ಆಯಮ್ಮನನ್ನು ಈಚೆಗೆ ತಂದುಕೊಟ್ಟ, ನೀನೂ ಹಾಗೆ ಆಗಬಾರದ ಎಂದು ಕೇಳಿದ. ಆಗ ಹೆಂಡತಿ, ನಿನಗೆ ನಾಚಿಕೆ ಆಗುವುದಿಲ್ಲವೇ, ದಿನಾ ರಾತ್ರಿಹೊತ್ತು ಮೂರು ಗಂಟೆಗೆ ಬರುತ್ತೀಯ ಎಲ್ಲೆಲ್ಲಿ ಹೋಗಿರುತ್ತೀಯೊ, ಏನೇನು ಮಾಡಿಕೊಂಡು ಬಂದಿರುತ್ತೀಯೊ

ರಾಮಚಂದ್ರ ಎಂತಹ ಏಕಪತ್ನಿವ್ರತಸ್ಥ, ಎಂತಹ ದೃಢಕಾಯ, ಎಂತಹ ಧರ್ಮಾಸ್ತಿಕ, ನೀನು ಮೊದಲು ರಾಮಚಂದ್ರ ಆಗು ನಂತರ ನಾನು ಸೀತೆ ಆಗುತ್ತೇನೆ ಎಂದು ಹೇಳಿದಳಂತೆ ನಾನು ಇದನ್ನು ಕೇಳಿದಾಗಲೆಲ್ಲ ನೆನೆಸಿಕೊಳ್ಳುತ್ತಾ ಇರುತ್ತೇನೆ, ರಾಜಕಾರಣಿಗಳಿಗೆ ಪದೇ ಪದೇ ಹೇಳುತ್ತಾ ಇರುತ್ತೇನೆ. ನಾವು ಇನ್ನೊಬ್ಬರ ಬಗ್ಗೆ ನಿರೀಕ್ಷೆ ಮಾಡುವಾಗ ನಾವು ಸರಿಯಾಗಿ ನಡೆದುಕೊಳ್ಳಬಾರದ. ನಾವು ನ್ಯಾಯ ನೀತಿಯ ಬಗ್ಗೆ ಎಷ್ಟು ಮಾತನಾಡುತ್ತಾ ಇರುತ್ತೇವೆ ಎಷ್ಟು ವಚನಭ್ರಷ್ಟರಾಗುತ್ತೇವೆ ಆತ್ಮವಿರುದ್ಧವಾಗಿ ಎಷ್ಟು ಕೆಲಸಕಾರ್ಯಗಳನ್ನು ಮಾಡುತ್ತೇವೆ. ಇದು ಯಾರಿಗೂ ಶೋಭೆ ತರತಕ್ಕದ್ದಲ್ಲ, ಯಾರಿಗೂ ಶ್ರೇಯಸ್ಸು ತಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ಅವರು ನಿಜವಾಗಿ ಇದನ್ನು ಮಾಡದೇ ಇದ್ದರಂತೂ ನಿಜವಾಗಿ ನಾನು ಅವರಿಗೆ ಥ್ಯಾಂಕ್ಸ್ ಹೇಳುತ್ತೇನೆ. ಸತ್ಯವಂತರು, ನಿಜವಾಗಿ ನಡೆದುಕೊಂಡಿದ್ದಾರೆಂದು ಹೇಳುತ್ತೇನೆ. ಇದರಲ್ಲಿ ಕಿಂಚಿತ್ ಏನಾದರೂ ಅವರು ಪಾಲುದಾರರಾಗಿ ಇನ್‌ಸ್ಟ್ರಕ್ಷನ್ಸ್ ಕೊಟ್ಟು, ಏನಾದರೂ ಅಪರಾಧ ಆಗಿದ್ದರೆ, ಅಪರಾಧ ಆಗಿಲ್ಲ ಎಂದು ನಡೆದುಕೊಂಡರೆ ನಾನು ಖಂಡಿತ ಹೇಳುತ್ತೇನೆ, ದೇವರೂ ಕ್ಷಮಿಸುವುದಿಲ್ಲ ಜನರೂ ಕ್ಷಮಿಸುವುದಿಲ್ಲ, ಎಲ್ಲಕ್ಕಿಂತ ಹೆಚ್ಚಾಗಿ ಅವರ ಕಾನ್‌ಷಿಯಸ್ ಅವರನ್ನು ಕ್ಷಮಿಸುವುದಿಲ್ಲ ಎಂದು ಹೇಳುತ್ತೇನೆ. ಮುಂದೆ ಇಂತಹ ಪ್ರಕರಣಗಳು ನಡೆಯಬಾರದು, ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮನ್ನು ಒತ್ತಾಯಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

† ಪ್ರೊ ಎಂ ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಣ).— ಸನ್ಮಾನ್ಯ ಸಭಾಧ್ಯಕ್ಷರೆ, ಮಾತುಕತೆ ಕೇಳುತ್ತಾ ಕೇಳುತ್ತಾ ಯಾರೂ ಅಪರಾಧಿಗಳು ನಮ್ಮ ಕೈಗೆ ಸಿಗುವ ರೀತಿ ಕಾಣುತ್ತಾ ಇಲ್ಲ. ಏಕೆಂದರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಕಮಿಟಿ ಆನ್ ಸಬಾರ್ಡಿನೇಟ್ ಲೆಜಿಸ್ಲೇಷನ್ ಅವರ ವರದಿಯ ೧೯ನೇ ಪುಟದಲ್ಲಿರುವ ಒಂದು ಪ್ಯಾರಗ್ರಾಫ್ ಓದಿದರು. ನಮ್ಮ ಮುಖ್ಯ ಕಾರ್ಯದರ್ಶಿಗಳು ಆ ಸಮಿತಿಗೆ ಬರೆದಂಥ ಪತ್ರದ ಒಂದು ಪ್ಯಾರಗ್ರಾಫ್ ಅದು. ಅದಕ್ಕೆ ಮಾನ್ಯ ರಾಮಕೃಷ್ಣ ಹೆಗಡೆಯವರು ಆ ಪೂರ್ತಿ ಪತ್ರ ದಾಖಲು ಮಾಡಬೇಕು, ವರದಿಗಳಲ್ಲಿ ಔಟ್ ಆಫ್ ಕಂಟೆಸ್ಟ್. ಯಾವುದೋ ಒಂದು ಪ್ಯಾರಗ್ರಾಫ್‌ನ್ನು ಹಾಕಿದರೆ ಅದು ಯಾವುದೇ ಸಮಿತಿಯಾಗಿರಲಿ ಅದು ಖಂಡನಾರ್ಹ ಎಂದು ಹೇಳಿದರು, ಅದು ನಿಜ. ಆ ಮೇಲೆ ಮತ್ತೆ ಚರ್ಚೆ ನಡುವೆ ಕೇಳಿದ ಮಾತು, ಆ ಪೂರ್ತಿ ಪತ್ರವೇ ಮಂಡಿಸಿದ್ದು ಅಲ್ಲ ವಿರೋಧಪಕ್ಷದ ನಾಯಕರು, ಇದು ೧೯೬೨ನೇ ಇಸವಿಯಿಂದಲೂ ನಡೆಯುತ್ತಾ ಇದೆ ಎನ್ನುವಂಥ ಮಾತು ಬಂತು, ಅದನ್ನು ನಾನು ಒಪ್ಪುತ್ತೇನೆ. ೧೯೬೨ನೇ ಇಸವಿಯಿಂದಲೂ ನಮ್ಮ ಟೆಲಿಫೋನ್‌ಗಳು ಟ್ಯಾಪ್ ಆಗುತ್ತಿವೆ. ೧೯೬೨ನೇ ಇಸವಿಯಿಂದ ಇರುವಂಥ ಸರ್ಕಾರಗಳು ಒಂದೇ ಸಂಸ್ಕೃತಿಗೆ ಸೇರಿದವು. ಇದನ್ನು ನಾನು ಒಪ್ಪುತ್ತೇನೆ. ಇದು ನನ್ನ ಅನುಭವಕ್ಕೂ ಬಂದಿರುವಂಥ ವಿಚಾರ. ಆದರೆ ಈ ಪತ್ರದಲ್ಲಿ ಮಾನ್ಯ ಖರ್ಗೆಯವರು ಓದಿದಂಥ ಪ್ಯಾರಾಗ್ರಾಫ್‌ನಲ್ಲಿ ಏನು ಹೇಳುತ್ತದೆ ಎನ್ನುವುದನ್ನು ಹೇಳುತ್ತೇನೆ. ಇದನ್ನು ಏಕೆ ಓದಿ ಹೇಳುತ್ತಾ ಇದ್ದೇನೆ ಅಂದರೆ, ಇಲ್ಲಿ ನಮ್ಮ ಮುಖ್ಯ ಕಾರ್ಯದರ್ಶಿಯವರು ರಾಜ್ಯ ಸಭಾಸಮಿತಿಗೆ ಯಾವ ಪ್ರೊಸೀಜರನ್ನು ರಾಜ್ಯ ಸರ್ಕಾರ ಫಾಲೋಮಾಡುತ್ತಿದೆ ಎನ್ನುವುದನ್ನು ಹೇಳಿದ್ದಾರೆಯೋ ಹೊರತು ಯಾರು ಮಾಡಿದರು ಎಂದು ಹೇಳಲಿಲ್ಲ. ರಾಮಕೃಷ್ಣಹೆಗಡೆಯವರನ್ನು ಇಲ್ಲಿ ಇಂಡಿಕ್ಟ್ ಮಾಡಿಲ್ಲ ಎನ್ನುವ ಮಾತನ್ನು ಆಡುತ್ತಾ ಇದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಆದರೆ ಇಲ್ಲಿ ಏನು ಹೇಳುತ್ತದೆ, ಪ್ರೊಸೀಜರ್ ಎಂತಲೇ ತೆಗೆದುಕೊಳ್ಳೋಣ.

What the Chief Secretary has deposed before the Committee on Sub-ordinate Legislation I concede that he has pronounced the procedure that was followed by the State Government. ಅದರಲ್ಲಿ ಏನು ಹೇಳಿದೆ ಅಂದರೆ, The numbers were deleted or added by the authorised Officer in consultation and with prior permission of the Chief Minister. No other functionary was kept advised of the list'. ಇದನ್ನು ಒಪ್ಪುತ್ತೇನೆ. ಇದೇ ಪ್ರೊಸೀಜರ್‌ನ್ನು ೧೯೬೨ನೇ ಇಸವಿಯಿಂದ ಫಾಲೋ ಮಾಡಿಕೊಂಡು ಬಂದಿದ್ದಾರೆ. ಆದರೆ, ೧೯೮೮ನೇ ಇಸವಿಯಲ್ಲಿ ಏನೊಂದು ಲಿಸ್ಟ್ ಪಬ್ಲಿಷ್ ಆಯಿತಲ್ಲ numbers and the list of names of the telephone owners whose telephones were tapped. ಆ ಲಿಸ್ಟ್ ಪ್ರವೇಶ ಆದದ್ದು ಯಾವಾಗ, ಅದು ೧೯೬೨ರ ಲಿಸ್ಟೇ. I Know some of those people who were not at all in public life in 1962, their names also included in the list. The names which you find in that

list which was published in 1988, ೧೯೮೮ರಲ್ಲಿ ಇದ್ದ ಸರ್ಕಾರ ಇದೇ ಪ್ರೊಸೀಜರ್ ಫಾಲೋ ಮಾಡಿದ್ದಾರೆ. ಏನೆಂದರೆ......deletion and also addition with the prior permission of the Chief Minister. This procedure was followed in 1988 also and it is very clear that list of names that was published are the names which were included in the list were with the prior permission of the Chief Minister. ಆದ್ದರಿಂದ ಈ ಒಂದು ವಾದ ಏನಿದೆ, ೧೯೬೨ ರಿಂದ ಈ ಸುತ್ತೋಲೆ ಜಾರಿಯಲ್ಲಿದೆ ಇದನ್ನು ಯಾರೋ ಅಧಿಕಾರಿಗಳು ಮಾಮೂಲಿ ಕೆಲಸ ಎನ್ನುವ ರೀತಿಯಲ್ಲಿ ಮಾಡುತ್ತಿದ್ದಾರೆ .....ಈ ಚರ್ಚೆಯಿಂದ ಇನ್ನೊಂದು ಲಾಭವಾಗಿದ್ದು ಏನೆಂದರೆ. ವಿಕೇಂದ್ರೀಕರಣದ ಬಗ್ಗೆ ನಾನು ಬಹಳ ಹಳೇ ವಿದ್ಯಾರ್ಥಿ. I knew about economic decentralisation, political decentralisation, technological decentralisation ಆದರೆ, ಕದ್ದಾಲಿಕೆ ಡೀಸೆಂಟ್ರಲೈಜೇಷನ್ ಸಿದ್ಧಾಂತ ಇವತ್ತು ಗೊತ್ತಾಯಿತು. ಈ ಸಿದ್ಧಾಂತದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ, we all know that. We know that we are functioning under the principle of collective responsibility. ಯಾವ ಅಧಿಕಾರಿ ಮೇಲೂ ತಪ್ಪು ಹೊರಿಸುವುದಕ್ಕಾಗುವುದಿಲ್ಲ. ಆಗ ಯಾರ ಸರ್ಕಾರ ಇತ್ತು ಅವರೇ ಆ ಜವಾಬ್ದಾರಿ ಹೊರಲೇಬೇಕು, ಆ ಅಪರಾಧಿಗಳನ್ನು ನಾವು ಗುರುತಿಸಲೇಬೇಕು, ಅವರಿಗೆ ಶಿಕ್ಷೆ ಆಗಲೇಬೇಕು. ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ—This Committee on Subordinate Legislation itself has stated at another place. Page 18. ನಲ್ಲಿದೆ ನನ್ನ ಇಡೀ ಆತಂಕ ಇರುವುದು ಇಲ್ಲಿ. I am not bothered about ಯಾರು ಮಾಡಿದರು, ಯಾರಿಗೆ ಶಿಕ್ಷೆಯಾಗಬೇಕು. ಏಕೆಂದರೆ, We are all temporary creatures. I am not very sure whether I will be here tomorrow but the fact remains that we have to set right our house and then die. That is my intention.

> 'The Committee is of the view that the general provision in Section 5 of the Act is not specific and least scope for being misused and arbitrary exercise of executive authority .....'

ಟೆಲಿಗ್ರಾಫ್ ಆಕ್ಟ್‌ನಲ್ಲಿ ನಾವು ತಿದ್ದುಪಡಿ ಮಾಡಬೇಕಾಗಿರುವಂಥ ಒಂದು ಕೆಲಸವೂ ಇದೆ. ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನ್ನ ಆಶೆ ಇದೇ. ನಾನು ಇನ್ನೇನೂ ಹೆಚ್ಚಿಗೆ ಹೇಳುವುದಿಲ್ಲ, ನಮಸ್ಕಾರ.

† ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಸನ್ಮಾನ್ಯ ಅಧ್ಯಕ್ಷರೆ, ೭೮ರ ನಿಯಮದ ಮೇರೆಗೆ ಬಂದಿರತಕ್ಕ ಸೂಚನೆಯನ್ನು ಬೆಳಗಿನಿಂದಲೂ ಚರ್ಚೆ ಮಾಡುತ್ತಿದ್ದೇವೆ. ನಾನಾದರೂ ಕೂಡ ಇದರ ಬಗ್ಗೆ ಹೆಚ್ಚಿಗೆ ವಿಶ್ಲೇಷಣೆ ಮಾಡದೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮಾತನಾಡತಕ್ಕ ಸಂದರ್ಭದಲ್ಲಿ ಆಡಳಿತ ವಿಕೇಂದ್ರೀಕರಣದ ಬಗ್ಗೆ ಒಂದು ಮಾತು ಹೇಳಿದರು. ಅಂಡರ್ ಸೆಕ್ರೆಟರಿಯಾಗಲೀ, ಚೀಫ್ ಸೆಕ್ರೆಟರಿಯಾಗಲೀ, ಅವರಿಗೆ ಅವರದೇ ಆದಂತಹ ಅಧಿಕಾರ ಇರುತ್ತದೆ, ಸಹಿ ಮಾಡತಕ್ಕ ಅಧಿಕಾರ ಇರುತ್ತದೆ, ಅವರು ಆ ರೀತಿ ಮಾಡಿದ್ದಾರೆ, ಅವರು ಮಾಡಿದ್ದಕ್ಕೆಲ್ಲ ಮುಖ್ಯಮಂತ್ರಿಗಳು ಜವಾಬ್ದಾರರಲ್ಲ ಎನ್ನುವ ಮಾತನ್ನು ಹೇಳಿದರು. ಆಡಳಿತದ ವಿಕೇಂದ್ರೀಕರಣವನ್ನು ತಾವು ರಾಜಕೀಯದಲ್ಲಿ ಬೋಧನೆ ಮಾಡಿದಂತಹವರು, ಇದನ್ನು ಮಾಡಬೇಕಾದರೆ, ಇದರ ತತ್ವ ಏನಿದೆ, ಎನ್ನುವುದನ್ನು ತಾವು ಮರೆಯಬಾರದು ಮುಖ್ಯಮಂತ್ರಿಗಳು ಆರ್ಡರ್ ಮಾಡಿದ ಮೇಲೆ, ಅಂಡರ್ ಸೆಕ್ರೆಟರಿಯವರಿಂದ ಒಂದು ಆರ್ಡರ್ ಬಂದಂಥ ಸಂದರ್ಭದಲ್ಲಿ ಅದು ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದಿದೆ ಎನ್ನುವ ಅರ್ಥವನ್ನು ಕೊಡುತ್ತದೆ. ಆ ತತ್ವ ಯಾವಾಗಲೂ ಹಿನ್ನೆಲೆಯಾಗಿರತಕ್ಕದ್ದು ಈ ತತ್ವವನ್ನು ಮರೆಯಬಾರದು. ಮತ್ತು ಇದೊಂದು ಬಹಳ ಮಹತ್ವದ ವಿಷಯ ಕೂಡ ಇದೆ. ಏಕೆಂದರೆ ಮೌಲ್ಯಾಧಾರಿತ ರಾಜಕಾರಣವನ್ನು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಭೋದನೆ ಮಾಡಿದಂತಹ ತಾವು ಇವತ್ತು ಯೋಜನಾ ಆಯೋಗದ ಉಪಾಧ್ಯಕ್ಷರೂ ಕೂಡ ಆಗಿದ್ದೀರಿ. ಇವತ್ತು ನಿಮ್ಮ ಮೇಲೆ ಒಂದು ಕಳಂಕ ಬಂದಿದೆ. ಫೋನು ಕದ್ದಾಲಿಕೆ ಮಾಡಿದಂಥ ಸಂದರ್ಭದಲ್ಲಿ ತಾವು ಮುಖ್ಯಮಂತ್ರಿಗಿರಿಗೆ ರಾಜೀನಾಮೆ ಕೊಟ್ಟು ಹೊರ ಬಂದಿದ್ದೀರಿ. ಇದು ಏನಾದರೂ ಸಾಬೀತಾದರೆ ರಾಜಕೀಯ ಜೀವನದಿಂದಲೇ ನಿವೃತ್ತಿಯಾಗುತ್ತೇನೆಂದು ಅಂದು ಕೂಡ ಹೇಳಿದ್ದೀರಿ, ಇಂದು ಬೆಳಿಗ್ಗೆ ಕೂಡ ಸಭೆಯಲ್ಲಿ ಮತ್ತೊಮ್ಮೆ ತಿಳಿಸಿದ್ದೀರಿ.

ಈಗ ಪ್ರಶ್ನೆ ಇರತಕ್ಕಂಥಾದು ಏನೆಂದರೆ, ಈಗ ತಾವು ದೂರವಾಣಿ ಕದ್ದಾಲಿಕೆ ಮಾಡಿದ್ದೀರೋ ಇಲ್ಲವೇ ಎನ್ನುವ ಪ್ರಶ್ನೆ ಇರತಕ್ಕಂಥಾದು. ನಾನಾದರೂ ಅಭಿಪ್ರಾಯ ಪಡತಕ್ಕಂಥಾದು ಇಷ್ಟೆ, ಇವೊತ್ತು ನಾನು ಜವಾಬ್ದಾರನಲ್ಲ ಎನ್ನುವ ಮಾತನ್ನು ಇವರು ಹೇಳುವುದಾದರೆ, ಚೀಫ್ ಸೆಕ್ರೆಟರಿಯವರು ಬರೆದಂಥ ಕಾಗದದ ಬಗ್ಗೆ ಉಲ್ಲೇಖವನ್ನು ಈಗಾಗಲೇ ಮಾನ್ಯ ಖರ್ಗೆಯವರು ಸಭೆಯ ಮುಂದೆ ಮಂಡಿಸಿದ್ದಾರೆ. ಇವೊತ್ತು ಮಾನ್ಯ ದೇವೇಗೌಡರು, ಮಾನ್ಯ ಬಂಗಾರಪ್ಪನವರು, ಮಾನ್ಯ ವೀರಪ್ಪಮೊಯಿಲಿಯವರ ಟೆಲಿಫೋನ್ ಕದ್ದು ಕೇಳತಕ್ಕಂಥಾದ್ದು ಸತೀಶ್‌ಚಂದ್ರನ್ ಅವರಿಗೆ ಏನು ಸಂಬಂಧ ಈಸಂಬಂಧ ಇರತಕ್ಕಂಥಾದ್ದು. ರಾಜಕೀಯದಲ್ಲಿ ಇರತಕ್ಕಂಥ, ರಾಜಕೀಯ ಧುರೀಣರಾಗಿರತಕ್ಕಂಥ ರಾಜ್ಯದ ಮುಖ್ಯ ಮಂತ್ರಿಗಳವರ ಹೇಳಿಕೆಯ ಮೇಲೆ ಮಾಡಿರತಕ್ಕಂಥಾದ್ದು. ಇವೊತ್ತು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯಮುಂದೆ ಅವರು ಹೇಳಿಕೆಯನ್ನು ಕೊಡಬೇಕಾದರೆ, ಆವೊತ್ತು ಒಂದು ಜವಾಬ್ದಾರಿಯಾಗಿ ಒಬ್ಬ ಚೀಫ್ ಸೆಕ್ರೆಟರಿಯಾಗಿ, ಇವೊತ್ತು ಕರ್ನಾಟಕ ರಾಜ್ಯದ ಸರ್ಕಾರದ ಬಹಳಮುಖ್ಯಸ್ಥರಾಗಿ ಒಂದು ಹೇಳಿಕೆಯನ್ನು ಕೊಡಬೇಕಾದರೆ ಅದು ರೈಟಿಂಗ್‌ನಲ್ಲಿ ಕೊಡಲಿ ಅಥವಾ ಓರಲ್ ಆಗಿ ಕೊಡಲಿ ಅದು ಒಂದು ಜವಾಬ್ದಾರಿ ಸ್ಟೇಟ್‌ಮೆಂಟ್ ಆಗುತ್ತದೆ, ಅದು ಒಂದು ಪಬ್ಲಿಕ್ ಡಾಕ್ಯುಮೆಂಟ್ ಆಗುತ್ತದೆ. ಅದನ್ನು ನಂಬಬೇಕಾಗುತ್ತದೆ. ಬಹುಶ: ಇದರ ಹಿನ್ನೆಲೆಯಾಗಿ ಪ್ರೋಬ್ ಮಾಡತಕ್ಕ ಅವಶ್ಯಕತೆ ಇಲ್ಲ ಎಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ನೀವು ಸಾರ್ವಜನಿಕ ಜೀವನದಲ್ಲಿ ಎಸೆದಿರತಕ್ಕ ದೊಡ್ಡ ಸವಾಲು ಇದೆ. ಪ್ರೂವ್ ಮಾಡಿದರೆ ರಾಜಕೀಯದಿಂದ ನಿವೃತ್ತಿಯಾಗುತ್ತೇನೆ, ಎನ್ನುವಂತಹ ಮಾತನ್ನೂ ತಾವು ಹೇಳಿದ್ದಿರಿ. ಸಭೆಯಲ್ಲಿ ಬೇರೆ ಬೇರೆ ಚರ್ಚೆಮಾಡಿ ಅವರು ಮಾಡಿದ್ದಾರೆಂದು ಮೇಲ್ನೋಟಕ್ಕೆ ಹೇಳುವಂಥಾದಲ್ಲ. ನಾವು ಸಾಬೀತು ಮಾಡಬೇಕಾದರೆ, ನಾನಾದರೂ ಒಂದು ಸಲಹೆ ಕೊಡತಕ್ಕದ್ದು ಇಷ್ಟೆ. ಈ ಸದನದ ಒಂದು ಸಮಿತಿಯನ್ನು ಮಾಡಿ. ಇವೊತ್ತು ಬೆಳಿಗ್ಗೆ ಮುಖ್ಯ ಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಇದರಲ್ಲಿ ಪ್ರಿವಿಲೇಜ್ ಪ್ರಶ್ನೆ ಬರಬಹುದು ಎನ್ನತಕ್ಕ ಭಯದಿಂದ ನಾವು ಮೇಲ್ಮನೆಗೆ ಒಂದು ವರ್ತಮಾನವನ್ನು ಕೊಟ್ಟಿದ್ದೇವೆ. ತಾವು ಕೇಳಿದರೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚು ಕಡಿಮೆ ಸರ್ಕಾರದ ನಿಲುವು ಏನು ಎಂದು ಕೂಡ ಪ್ರತಿಪಾದನೆ ಮಾಡಿರುವುದರಿಂದ ಸದನದ ಒಂದು ಸಮಿತಿಮಾಡಿ ಆ ಸಮಿತಿಯ ಮುಂದೆ ಕಡತಗಳನ್ನು ತರಿಸಿ ಮೇಲ್ನೋಟಕ್ಕೆ ದೂರವಾಣಿ ಕದ್ದಾಲಿಕೆಯ ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಇಲ್ಲವೇ ಎನ್ನುವುದನ್ನು ಇವೊತ್ತು ಪರೀಕ್ಷೆ ಮಾಡಬೇಕು, ಈ ಸಲಹೆ ನನ್ನಿಂದ ಅಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರೇ ಮುಂದೆ ಬಂದರೆ ಒಳ್ಳೆಯದು ಎಂದು ನಾನಾದರೂ ಅಭಿಪ್ರಾಯ ಪಡುತ್ತೇನೆ, ಏಕೆಂದರೆ ಅವರು ರಾಜ್ಯದ ಮಾಜಿ ಮುಖ್ಯ ಮಂತ್ರಿಯಾಗಿ, ಇವೊತ್ತು ಪ್ಲಾನಿಂಗ್ ಕಮಿಷನ್‌ಗೆ ಡೆಪ್ಯುಟಿ ಚೇರ್‌ಮನ್ ಆಗಿರುವುದರಿಂದ, ತಮ್ಮ ಹೇಳಿಕೆಯ ಬಗ್ಗೆ ಇಡೀ ರಾಜ್ಯವಲ್ಲ ಇಡೀರಾಷ್ಟ್ರ ಎದುರು ನೋಡುತ್ತಿದೆ ಎನ್ನುವುದನ್ನು ತಾವು ಅರಿಯಬೇಕು. ಮತ್ತು ಇವೊತ್ತು ರಾಜಕೀಯ ಜೀವನದಲ್ಲಿ ತಮ್ಮ ಮೌಲ್ಯವನ್ನು ಪ್ರತಿಪಾದನೆ ಮಾಡುವುದಾದರೆ, ತಾವು ಇದಕ್ಕೆ ಒಪ್ಪಿ, ಸತ್ಯಾಂಶ ಏನಿದೆ, ಅದನ್ನು ಹೊರಬೀಳಿಸಬೇಕು, ಇದು ಅಂತಿಮವಾಗಿ ಇತ್ಯರ್ಥವಾಗಬೇಕು ಎಂದು ನಾನಾದರೂ ಅಭಿಪ್ರಾಯಪಡುತ್ತೇನೆ. ಆದರಿಂದ, ಇದಕ್ಕೆ ಒಂದು ಸದನದ ಸಮಿತಿಯನ್ನು ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರ ಮೊದಲನೇ ದಿವಸ ಪ್ರಸಪ್ತಪಕ್ಕೆ ಬಂದಾಗಲೂ ಸಹ ನಾನು ಹೇಳಿದ್ದೇನೆ. ಇದು ಒಂದು ಪ್ರಾಮುಖ್ಯವಾದಂಥ ವಿಚಾರ, ರಾಜ್ಯಾಂಗದತ್ತವಾಗಿ ನಮಗೆ ಬಂದಿರತಕ್ಕಂಥ ಹಕ್ಕು, ಅಭಿಪ್ರಾಯ ಸ್ವಾತಂತ್ರ್ಯ ರಾಜ್ಯಾಂಗ ದತ್ತವಾಗಿ ಬಂದಿರತಕ್ಕಂಥ ಹಕ್ಕು, ಇದನ್ನು ಯಾರೇ ಆಗಲಿ, ಯಾವುದೇ ರೀತಿಯಲ್ಲಾಗಲಿ ಹರಣ ಮಾಡತಕ್ಕಂಥ ಹಕ್ಕು ಯಾರಿಗೂ ಕೂಡ ಇಲ್ಲ. ಇಲ್ಲಿ ನಡೆದಿರತಕ್ಕಂಥ ಘಟನೆಗಳು, ಅದು ಯಾರೇ ಆಗಿರಲಿ ಒಂದು ದೊಡ್ಡ ಪಟ್ಟಿ ಇದೆ. ಸುಮಾರು ೩೦–೩೫ ಜನರ ಪಟ್ಟಿ ಇದೆ. ಈ ಪಟ್ಟಿಯಲ್ಲಿ ಕೆಲವರಂತು ಇರಬಹುದು. ಅವರ ಟೆಲಿಫೋನ್ ಕೆಲವು ಕಾರಣಗಳಿಂದ ರೆಕಾರ್ಡ್ ಮಾಡಲಿಕ್ಕೆ ಕಾರಣ ಇರಬಹುದು. ಆದರೆ ಕೆಲವರ ಟೆಲಿಫೋನ್ ರಿಕಾರ್ಡ್‌ಮಾಡುವುದಕಂತೂ ಕಾರಣವೇ ಇಲ್ಲ. ಅದರಲ್ಲೂ ಕೂಡ ಅಂದಿನ ಸಚಿವ ಸಂಪುಟದ ಸದಸ್ಯರಾಗಿದ್ದ ಮಾನ್ಯ ರಘುಪತಿಯವರು ಮತ್ತು ಮಾನ್ಯ ಹೆಚ್. ಡಿ. ದೇವೇಗೌಡರು ಇದ್ದಾರೆ. ಇವೊತ್ತು ಟೆಲಿಗ್ರಾಫ್ ಆಕ್ಟ್‌ನಲ್ಲಿರತಕಂಥಾದು ಏನೆಂದರೆ, ಯಾರು ರಾಷ್ಟ್ರವಿರೋಧಿ ಕೃತ್ಯದಲ್ಲಿ ತೊಡಗಿರುತ್ತಾರೆ. ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗಿರುತ್ತಾರೆ. ಅಂತಹವರ ಟೆಲಿಫೋನ್ ಇಂಟರ್‌ಸೆಪ್ಟ್ ಮಾಡತಕ್ಕಂಥಾದಕ್ಕೆ ಅವಕಾಶ ಇದೆ. ಅದನ್ನು ಯಾರು ಕೂಡ ಅಡ್ಡಿಪಡಿಸುವ ಹಾಗೆ ಇಲ್ಲ. ಆದಕ್ಕೆ ಬದಲಾಗಿ, ಸಂಪುಟದ ಸದಸ್ಯರಾಗಿರತಕ್ಕಂಥ

ಇಬ್ಬರು ಅಂದರೆ, ಮಾನ್ಯ ರಘುಪತಿಯವರು ಮತ್ತು ಮಾನ್ಯ ಹೆಚ್. ಡಿ. ದೇವೇಗೌಡರು, ಇವರೇನು ಯಾವ ರಾಷ್ಟ್ರದ ವಿರೋಧಿ ಕೃತ್ಯಗಳನ್ನು ಎಸಗಿದ್ದಾರೆ.

ಯಾವ ಸಮಾಜ ವಿರೋಧಿ ಕೃತ್ಯಗಳನ್ನು ಎಸಗಿದ್ದಾರೆ ಅನ್ನತಕ್ಕಂಥಾದ್ದು ಇವತ್ತು ಮುಖ್ಯವಾದದ್ದು. ಅದೇ ರೀತಿ ಇವತ್ತು ಆ ಕಡೆ ಕುಳಿತಿರತಕ್ಕಂತಹ ಸದಸ್ಯರು ಕೂಡ ಇದ್ದಾರೆ ಮತ್ತು ಈ ಕಡೆ ಇರತಕ್ಕಂತಹ ಸದಸ್ಯರೂ ಕೂಡ ಇಲ್ಲಿ ಇದ್ದಾರೆ. ಅಂದು ವಿರೋಧ ಪಕ್ಷದ ನಾಯಕರಾಗಿದ್ದಂತಹ ಶ್ರೀಮಂತಿ ನಾಗರತ್ನಮ್ಮನವರು, ಬಂಗಾರಪ್ಪನವರು ಮಾನ್ಯ ವೀರಪ್ಪ ಮೊಯಿಲಿಯವರೂ ಮತ್ತು ಇನ್ನೂ ಅನೇಕರು ಅಂದರೆ ಸಂಸತ್ ಸದಸ್ಯರಾಗಿರತಕ್ಕಂತದವರ ಪೈಕಿ ಕೆಲವರ ಹೆಸರು ಕೂಡ ಆ ಪಟ್ಟಿಯಲ್ಲಿ ಇದೆ. ಇವರು ನಮ್ಮ ರಾಷ್ಟ್ರವಿರೋಧಿ ಕೃತ್ಯಗಳನ್ನು ಮಾಡುತ್ತಿದ್ದರೇ, ಏನು ಮಾಡುತ್ತಿದ್ದರು ಏನು ಕೆಲಸ ಮಾಡುತ್ತಿದ್ದರು, ಏನು ಮಾಡಿದ್ದಾರೆ, ಅವರು ಮಾಡಿದಂತಹ ಅಕ್ರಮ ಏನು ಎನ್ನುವುದು ಕೂಡ ಬೆಳಕಿಗೆ ಬರಬೇಕಾಗಿದೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಆಗ್ರಹ ಪೂರ್ವಕವಾಗಿ ಹೇಳಿದರು. ರಾಜ್ಯ ಸಭೆಗೆ ಒದಗಿಸಿರತಕ್ಕಂತಹ ವರದಿಯ ಬಗ್ಗೆ ಒಂದೆರಡು ಮಾತನ್ನು ಹೇಳಿದರು. ಅದು ಕಡತಕ್ಕೆ ಹೋಗಿದೆ ಅದು ಎಷ್ಟರ ಮಟ್ಟಿಗೆ ಸೂಕ್ತವೆಂದು ನಾನು ಹೇಳಲಾರೆ. ಅದರ ಜವಾಬ್ದಾರಿಯನ್ನು ತಾವು ಹೊರಬೇಕು. ಕಾರಣವೇನೆಂದರೆ ಇವರು ಕಳಿಸಿರತಕ್ಕಂತಹ ಪತ್ರದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ. ಉಳಿದಿರತಕ್ಕಂತಹ ಪತ್ರದ ಪೂರ್ತಿಯಾದ ಭಾಗವನ್ನು ವರದಿಯಲ್ಲಿ ಉಲ್ಲೇಖ ಮಾಡಿಲ್ಲ ಅನ್ನತಕ್ಕಂತಹ ಮಾತುಕೂಡ ಇವತ್ತಿನ ದಿವಸ ಕಡತಕ್ಕೆ ಹೋಗಿದೆ. ಏಕೆಂದರೆ ಆ ವರದಿ ರಾಜ್ಯ ಸಭೆಯ ವರದಿಯಾಗಿರುವುದರಿಂದ ಆ ವರದಿಯ ಬಗ್ಗೆ ನಾವು ಇಲ್ಲಿ ಅದು ವಿಕೃತವಾದಂಥಾ ವರದಿ ಅಥವಾ ಅವರಿಗೆ ಬೇಕಾಗಿರತಕ್ಕಂಥಾದನ್ನು ಆ ವರದಿಯಲ್ಲಿ ಸೇರಿಸಿದ್ದಾರೆ ಅನ್ನತಕ್ಕಂತಹ ವಾದವನ್ನು ಮಾಡುವುದಾದರೆ ಆ ವರದಿಯ ಮೇಲೆ ಮಾತನಾಡಿದ ಹಾಗಾಗುತ್ತದೆ. ಆ ವರದಿಯ ಮೇಲೆ ಅಸ್ಪರೆಷನ್ ಕ್ಯಾಸ್ಟ್ ಮಾಡಿದ ಹಾಗಾಗುತ್ತದೆ, ಅದು ಸೂಕ್ತವಲ್ಲ. ಕಡತಕ್ಕೆ ಏನು ಹೋಗಿದೆ ಅನ್ನತಕ್ಕಂಥಾದನ್ನು ತಾವು ತರಿಸಿನೋಡಿ ಅದು ಆಕ್ಷೇಪಾರ್ಹವಾಗಿದ್ದರೆ ಆ ವರದಿಯ ಬಗ್ಗೆ ಆಡಿರತಕಂತಹ ಮಾತನ್ನು ಕಡತದಿಂದ ತೆಗೆಯಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಪತ್ರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಹೇಳುತ್ತಿದ್ದರು, ಅದನ್ನು ನಾನು ತಮ್ಮಿಂದ ತರಿಸಿದ್ದೇನೆ. ಆದರಲ್ಲಿ ಏನು ಇದೆ ಎನ್ನುವುದನು ತಮ್ಮ ಗಮನಕ್ಕೆ ತರಬೇಕಾದದ್ದು ಅವಶ್ಯಕವೆಂದು ನಾನು ಅಂದುಕೊಂಡಿದ್ದೇನೆ. ಇದರಲ್ಲಿ ಮೊದಲಿನಿಂದ ಓದುವುದಕ್ಕೆ ಬದಲಾಗಿ ಕೊನೆಯಲ್ಲಿ ಕ್ವಶ್ಚನ್ 'ಇ' ಬಗ್ಗೆ ತಮ್ಮ ಗಮನವನ್ನು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

> "Question E. what action had been taken against any officer who had misused this power ?

ಅನ್ನತಕ್ಕಂಥಾದ್ದಕ್ಕೆ ಉತ್ತರವಾಗಿ,
ಇಲ್ಲಿ ಸ್ವಲ್ಪ ಚಿತ್ತಾಗಿದೆ.

> "In the line of answer to question, the question of action against any officer does not arise since the Chief Minister has authorised it"

ಅನ್ನತಕ್ಕಂಥಾದ್ದು ಇದೆ. ತಮಗೆ ಒದಗಿಸಿರತಕ್ಕಂತಹ ಪತ್ರದಲ್ಲಿ,

> "Taking action against any officer does not arise since the Chief Minister has authorised it".

ಅನ್ನತಕ್ಕಂಥಾದ್ದು ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಒದಗಿಸಿರತಕ್ಕಂತಹ ಪತ್ರ ಸರಿಯಾಗಿದ್ದರೆ ಇದು ಕೈ ಬರವಣಿಗೆಯಲ್ಲಿ ಇದೆ ಮ್ಯಾನ್‌ಸಕ್ರಿಪ್ಟ್‌ನಲ್ಲಿ ಇದೆ. ಉಳಿದಿರತಕ್ಕಥಾದ್ದೆಲ್ಲ ಟೈಪ್ ಆಗಿವೆ. ಟೆಲಿಫೋನ್ ಟ್ಯಾಪ್ ಮಾಡಿರತಕ್ಕಂತಹ ಕೃತ್ಯ ಏನು ಇದೆ. ಅದಕ್ಕಿಂತ ಹೀನಾಯವಾದ ಕೆಲಸ ಇಲ್ಲಿ ನಡೆದಿದೆ, ಇದು ನಿಜ ಆಗಿದ್ದರೆ, ಆಮೇಲೆ ಇದನ್ನು ಯಾರಾದರೂ ಇನ್ಸರ್ಟ್ ಮಾಡಿದರೆ ಸರ್ಕಾರದ ಕಡತ ಏನು ಇರುತ್ತದೆ ಆ ಕಡತಗಳನ್ನು ವಿಕೃತಗೊಳಿಸತಕ್ಕಂತಹ ಕೆಲಸಕೂಡ ನಡೆದಿದೆ. ಆದ್ದರಿಂದ ಇದು ಬಹಳ ತೀವ್ರವಾಗಿರತಕ್ಕಂಥಾದ್ದು ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡಿರತಕ್ಕಂಥಾದ್ದು ಒಂದು. ಮತ್ತೊಂದು ಅಧಿಕೃತ ದಾಖಲೆಗಳನ್ನು ತಿದ್ದಿರತಕ್ಕಂಥಾದ್ದು. ಈ ಎರಡೂ ಮೂಲ ಭೂತವಾದಂತಹ ಪ್ರಶ್ನೆಗಳು ಇದರಲ್ಲಿ ಅಡಗಿವೆ.

ಇದು ಇಷ್ಟೇ ಅಲ್ಲ. ಇದು ಕೇವಲ ಇಷ್ಟೇ ವ್ಯಕ್ತಿಗಳಿಗೆ ಸೀಮಿತವಾಗಿರಲಿಲ್ಲ, ಹಿಂದೆ ಇದೇ ಸದನದಲ್ಲಿ ಒಂದು ಪ್ರಕರಣ ಪ್ರಸ್ತಾಪವಾಯಿತು. ಟೆಲಿಫೋನ್‌ನಲ್ಲಿ ನಡೆದಂಥ ಕಾನ್‌ವರ್ಸೇಷನ್ ಕೂಡ ಈ ಸದನದ ಚರ್ಚೆಯ ವಸ್ತುವಾಗಿದ್ದು ಅದು ಇವತ್ತು ಈ ಸದನದ ಆಸ್ತಿಯಾಗಿದೆ. ಹಿಂದೆ ಇದ್ದಂಥ ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರು, ಆವತ್ತಿನ ದಿವಸ ವಿರೋಧಪಕ್ಷದಲ್ಲಿ ಇದ್ದಂಥ ಮತ್ತು ಇವತ್ತು ಮಂತ್ರಿಗಳಾಗಿರತಕ್ಕ ಮಾನ್ಯ ಬಂಗಾರಪ್ಪನವರ ಬಗ್ಗೆ ಮಾನ್ಯ ಶಿವಮೂರ್ತಿಯವರ ಬಗ್ಗೆ ಎ.ಐ.ಸಿ.ಸಿ. ಅಧ್ಯಕ್ಷರಾಗಿದಂಥ ಮಾನ್ಯ ಮೂಪನಾರ್ ಹಾಗೂ ಮಾನ್ಯ ಬಂಗಾರಪ್ಪನವರ ಬಗ್ಗೆ ನಡೆದಂಥ ಟೆಲಿಫೋನ್ ಸಂಭಾಷಣೆ ಕೂಡ ಈ ಸದನದ ಸ್ವತ್ತಾಗಿದೆ. ರಾಜ್ಯಾಂಗದತ್ತವಾದ ನಮ್ಮ ಹಕ್ಕು ಏನಿದೆ ಆ ಹಕ್ಕಿಗೆ ಚ್ಯುತಿ ತರತಕ್ಕ ಕೆಲಸ ಸತತವಾಗಿ ನಡೆದಿದೆ. ಆದ್ದರಿಂದ ಇದನ್ನು ಅತಿ ತೀವ್ರವಾಗಿ ಪರಿಗಣಿಸಬೇಕಾಗಿದೆ.

ಮಾನ್ಯ ಸಭಾಧ್ಯಕ್ಷರೆ, ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಮೇರಿಕಾ ದೇಶದಲ್ಲಿ ವಾಟರ್‌ಗೇಟ್ ಸ್ಕ್ಯಾಂಡಲ್ ನಡೆದದ್ದೂ ಕೂಡ ಇದೇ ರೀತಿ. ಅಮೇರಿಕದ ವಾಟರ್‌ಗೇಟ್ ಸ್ಕ್ಯಾಂಡಲ್‌ಗೂ, ಇದಕ್ಕೂ ಸಾಮ್ಯ ಇದೆ. ವಾಟರ್‌ಗೇಟ್ ಸ್ಕ್ಯಾಂಡಲ್‌ನಲ್ಲಿ ಮಾನ್ಯ ನಿಕ್ಸನ್‌ರವರು ರಾಜೀನಾಮೆಯನ್ನು ಕೊಟ್ಟು, ರಾಜಕೀಯ ಸನ್ಯಾಸತ್ವವನ್ನು ತೆಗೆದುಕೊಳ್ಳತಕ್ಕ ಪರಿಸ್ಥಿತಿ ಬಂತು.........

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಏನು ಮಾಡಬೇಕೆಂದು ಹೇಳುತ್ತೀರಿ ?

ಶ್ರೀ ಸಿ. ಬೈರೇಗೌಡ.—ಅದನ್ನು ಕೊನೆಯಲ್ಲಿ ಹೇಳುತ್ತೇನೆ. ಅಂದಿನಿಂದ ನಿಕ್ಸನ್‌ರವರು ತಮ್ಮ ರಾಜಕೀಯ ಜೀವನದಿಂದಲೇ ದೂರ ಉಳಿದಿದ್ದಾರೆ. ಕೊನೆಗೆ ಅವರು ಮುಂದುವರಿಯುವುದಕ್ಕೆ ಸಾಧ್ಯವಾಗಲಿಲ್ಲ ಅವತ್ತು ಇಡೀ ಪ್ರಪಂಚದ ಕಣ್ಣು ತೆರೆಸುವ ಘಟನೆ ಏನು ನಡೆದಿತ್ತು, ಅಂಥಾದ್ದೇ ಘಟನೆ ಇಲ್ಲೂ ಕೂಡ ನಡೆದಿದೆ. ಇದು ಸಾಮಾನ್ಯ ವಿಚಾರವೇನೂ ಅಲ್ಲ. ಇದು ಅತ್ಯಂತ ಗಹನವಾದ ವಿಚಾರ. ಇದನ್ನು ನಾವು ಮಾಡಿಲ್ಲ ಎಂದು ಇವರು ಹೇಳುತ್ತಿದ್ದಾರೆ. ಇದಕ್ಕೆ ಯಾರು ಜವಾಬ್ದಾರರಾಗಿದ್ದಾರೋ ಅವರೇ ಇದು ನನ್ನ ಅನುಮತಿಯಿಂದ ಆಗಿಲ್ಲ ಅಂತ ಹೇಳಿದ್ದಾರೆ. ಆದರೆ ಅವರು ಇಲ್ಲ ಹೇಳುತ್ತಿರುವುದಕ್ಕೆ ಪುರಾವೆ ಇಲ್ಲ. ಆದ್ದರಿಂದ ನಾನು ಒಂದೇ ಒಂದು ಪ್ಯಾರಾವನ್ನು ತಮ್ಮ ಅಪ್ಪಣೆ ಪಡೆದು ಓದಬಯಸುತ್ತೇನೆ......

ಅಧ್ಯಕ್ಷರು.—ಯಾವುದು ?

ಶ್ರೀ ಸಿ. ಬೈರೇಗೌಡ.—ರಾಜ್ಯ ಸಭೆಯಲ್ಲಿ ಕೊಟ್ಟಿರತಕ್ಕ ವರದಿಯಲ್ಲಿರತಕ್ಕ ಒಂದು ಪತ್ರ. ಅಂದರೆ ಮುಖ್ಯ ಕಾರ್ಯದರ್ಶಿಯವರ ಪತ್ರ ಏನಿದೆ ಅದನ್ನು ಓದುತ್ತಿದ್ದೇನೆ. ಅದು ಈ ರೀತಿ ಇದೆ.

"question B. How was the list drawn up, who drawn up the list, who was kept advised and how ?

ಅಧ್ಯಕ್ಷರು.—ಅವರು ಇದನ್ನು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ಅವರು ಅದನ್ನು ಪೂರ್ತಿ ಓದಲಿಲ್ಲ ನಾನು ಗಮನಿಸಿದ್ದೇನೆ. ಆದ್ದರಿಂದ ಹೇಳುತ್ತಿದ್ದೇನೆ.

"Answer—The list of numbers to be intercepted and the orders thereon were laid by the officers who are authorised to exercise powers under sub-section 2 of section 5 of the Indian Telegraphy Act. The numbers were added or deleted by the authorised officers in consultation with the prior permission of the Chief Minister. No other functionary was kept advised of this list".

ಶ್ರೀ ಎಸ್. ಬಂಗಾರಪ್ಪ.—ಯಾವ ಮಿನಿಸ್ಟರ್ ?

ಶ್ರೀ ಸಿ. ಬೈರೇಗೌಡ.—ಚೀಫ್ ಮಿನಿಸ್ಟರ್.

ಶ್ರೀ ಎಸ್. ಬಂಗಾರಪ್ಪ.—ಅದನ್ನೇ ಹೇಳಿ ಎಂದು ನಾನು ಹೇಳುತ್ತಿರುವುದು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಇದು ಒಂದು ಹೀನಾಯವಾದ ಕೃತ್ಯ. ಈ ರೀತಿಯ ಕೃತ್ಯ ನಮ್ಮ ರಾಜ್ಯದಲ್ಲಿ ಮೊದಲನೇ ಸಾರಿ ಏನೂ ನಡೆದಿಲ್ಲ. ಹಿಂದೆ 2 ಸಾರಿ ನಡೆದಿದೆ. ಪ್ರೈವೇಟ್ ಕಾನ್‌ವರ್ಸೇಷನ್ ನಡೆಯುವಾಗ ಟೆಲಿಫೋನ್ ಟ್ಯಾಪಿಂಗ್ ಮಾಡತಕ್ಕದ್ದು ಅವ್ಯಾಹತವಾಗಿ ನಡೆಯುತ್ತಾ ಬಂದಿದೆ ಅವರಲ್ಲೂ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಆಗಿರುವವರು, ದಿನ ಬೆಳಗಾದರೆ ರೌಡಿ ಲಿಸ್ಟ್‌ನಲ್ಲಿರತಕ್ಕವರು ಅಥವಾ ಸಮಾಜ ಘಾತುಕ ಶಕ್ತಿಗಳ ಟೆಲಿಫೋನ್ ಟ್ಯಾಪ್ ಮಾಡುವುದಾದರೆ ಅದಕ್ಕೆ ನನ್ನ ಸಮ್ಮತಿ ಇದೆ. ಆದರೆ ಇಲ್ಲಿ ಆ ರೀತಿ ಆಗಿಲ್ಲ. ಇಲ್ಲಿ ಸಚಿವ ಸಂಪುಟದಲ್ಲಿ ಇದ್ದಂಥ ಇಬ್ಬರು ಸಚಿವರ ಟೆಲಿಫೋನ್ ಟ್ಯಾಪ್ ಆಗಿದೆ. ಅವರೇನಾದರೂ ಸಮಾಜ ಘಾತುಕ ಶಕ್ತಿಗಳಾಗಿದ್ದರೆ, ಮಾನ್ಯ ರಘುಪತಿಯವರು ಸಮಾಜ ಘಾತುಕ ಶಕ್ತಿಗಳಾಗಿದ್ದರೆ, ಮಾನ್ಯ ದೇವೇಗೌಡರು ಸಮಾಜಘಾತುಕ ಶಕ್ತಿಗಳಾಗಿದ್ದರೆ, ಅವರು ಏನಾದರೂ ರಾಷ್ಟ್ರ ವಿರೋಧಿ ಕೃತ್ಯಗಳಲ್ಲಿ ತೊಡಗಿದ್ದರೆ ಅವರು ಮಂತ್ರಿಗಳಾಗಿ ಯಾವ ರೀತಿ ಆ ಸಚಿವ ಸಂಪುಟದಲ್ಲಿದ್ದರು ? ಅವರನ್ನು ಯಾವರೀತಿ ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳಲಾಯಿತು, ಅವರನ್ನು ಸೇರಿಸಿಕೊಳ್ಳುವುದಕ್ಕೆ ಕಾರಣವೇನು ? ಯಾರ ನಡತೆ ಬಗ್ಗೆ ಅನುಮಾನ ಇದೆಯೋ ಅವರನ್ನು ಯಾವ ಕಾರಣದಿಂದ ಸಚಿವ ಸಂಪುಟದಲ್ಲಿ ಇಟ್ಟುಕೊಂಡಿದ್ದರು ಅವರು ರಾಷ್ಟ್ರ ವಿರೋಧಿ, ಸಮಾಜ ವಿರೋಧಿ ಕೃತ್ಯಗಳನ್ನು ನಡಸಿದ್ದರೆ, ಅವರನಡತೆ ಬಗ್ಗೆ ಅನುಮಾನಿಸಿ ತಕ್ಷಣ ಏಕೆ ಅವರನ್ನು ಮಂತ್ರಿಮಂಡಲದಿಂದ ಹೊರಗಡೆ ಇಡಲಿಲ್ಲವೆಂಬುದು ಪ್ರಶ್ನೆ. ಆದ್ದರಿಂದ ಇಲ್ಲಿ ಸಾಮಾನ್ಯವಾದ ವಿಚಾರಗಳು ಅಡಕವಾಗಿಲ್ಲ. ಬಹಳ ಮಹತ್ತರವಾದ ವಿಚಾರಗಳು ಇವೆ. ಆದ್ದರಿಂದ ಇದರ ಬಗ್ಗೆ ಸರಿಯಾಗಿ ವಿಚಾರಣೆ ಆಗಬೇಕಾಗಿದೆ. ನೀವು ಅಷ್ಟು ಸುಲಭವಾಗಿ ಮಾಡಿಲ್ಲ, ಮುಖ್ಯ ಕಾರ್ಯದರ್ಶಿಗಳು ಮಾಡಿರಬಹುದು, ಅವರಿಗೆ ಆ್ಯಕ್ಟ್ ಪ್ರಕಾರ ಆಥರೈಸ್ ಮಾಡುವವರು ಇದ್ದಾರೆಂಬ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಅಂಥ ನಿಲುವನ್ನು ತೆಗೆದುಕೊಂಡಿರತಕ್ಕದ್ದನ್ನು ನಾವು ಗಮನಿಸಿದ್ದೇವೆ ಹಾಗಾದರೆ ಇವತ್ತಿನ ದಿವಸ ಮುಖ್ಯ ಕಾರ್ಯದರ್ಶಿಗಳನ್ನು ಈ ಸಭೆಗೆ ಕರೆಯಬೇಕಾಗುತ್ತದೆ. ಈ ಸಭೆಯಲ್ಲಿ ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳಬೇಕಾಗುತ್ತದೆ. ಆದರೆ ಅವರು ಬರುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇಲ್ಲ. ಈ ಸಭಾ ನಿಯಮಗಳ ಪ್ರಕಾರ ಮುಖ್ಯ ಕಾರ್ಯದರ್ಶಿಗಳಾಗಲಿ ಅಥವಾ ಸಂಬಂಧಪಟ್ಟ ಅಧಿಕಾರಿಗಳಾಗಲಿ ಯಾವ ಸಂದರ್ಭದಲ್ಲಿ ಈ ರೀತಿ ಪತ್ರವನ್ನು ಬರೆದರು ಎಂಬುದನ್ನು ಹೇಳುವುದಕ್ಕೆ ಅವಕಾಶ ಇಲ್ಲ. ಆ ಅವಕಾಶ ಇಲ್ಲದಿರುವ ಕಾರಣದಿಂದ ಈ ಸದನದ ಸಮಿತಿಯನ್ನು ಮಾಡಬೇಕು. ಈ ಸದನದ ಸಮಿತಿ ಮಾಡಿ ಕೂಲಂಕುಷವಾದ ವಿಚಾರಣೆ ಆಗಬೇಕಾಗಿದೆ. ಅದಕ್ಕೆ ಮೊದಲು ತಮ್ಮ ಗಮನಕ್ಕೆ ತರುವುದೇನೆಂದರೆ, ಈ ವಿಚಾರ ಚರ್ಚೆಯಾಗುವಾಗ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಇದಕ್ಕೆ ಸಂಬಂಧಪಟ್ಟ ಕಡತಗಳನ್ನು ಸಭೆಯ ಮುಂದಿಡಬೇಕೆಂದು ಆಗ್ರಹಪಡಿಸಿದ್ದೆ. ಇವತ್ತು ನಾನು ಹೇಳಿರತಕ್ಕದ್ದರಲ್ಲಿ ವಿಷ್ಟು ನಿಜ, ಎಷ್ಟು ನಿಜ ಅಲ್ಲ ಎಂಬ ಸಂಶಯ ನನಗೇ ಬಂದಿದೆ. ಇಲ್ಲಿ ಏನೊ ಒಂದು ಪತ್ರ ಸಿಕ್ಕಿತು ಅದರ ಆಧಾರದ ಮೇಲೆ ಒಂದೆರಡು ಮಾತುಗಳನ್ನು ಹೇಳಿದ್ದೇನೆ. ಅದೇ ರೀತಿ ಸಂಪೂರ್ಣವಾದ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದರೆ ಹೆಚ್ಚಿನ ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಇವತ್ತಿನ ದಿವಸ ಅವಕ್ಕೆ ಅವಕಾಶ ಇಲ್ಲ. ಇಲ್ಲಿ ಏನಾಗಿದೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ನನಗೂ ಕೂಡ ಅನುಮಾನ ಇದೆ. ಇವರೂ ಕೂಡ ಸತ್ಯವನ್ನು ಬಚ್ಚಿಡತಕ್ಕ ಪ್ರಯತ್ನ ನಡೆಸಿದ್ದಾರೆ, ಕಾರಣ, ಆ ಕಡತವನ್ನು ಇವತ್ತಿನ ದಿವಸ ಸದನದ ಮುಂದೆ ಇಡುವುದಕ್ಕೆ ಅವರು ತಯಾರಿಲ್ಲ. ನನಗೆ ಇವರ ಬಗ್ಗೆಯೂ ಸಂಶಯ ಇದೆ.

ಶ್ರೀ ಟಿ. ಎಂ. ಮಂಜುನಾಥ್.—ನೀವು ಸಂಶಯದ ಪ್ರಪಂಚದಲ್ಲಿದ್ದೀರಿ ಎಂದು ಕಾಣುತ್ತದೆ. ಮುಖ್ಯ ಮಂತ್ರಿಗಳು ಸತ್ಯವನ್ನು ಬಚ್ಚಿಡತಕ್ಕ ಪ್ರಮೇಯ ಏನಿದೆ ?

ಶ್ರೀ ಸಿ. ಬೈರೇಗೌಡ.—ನನಗೆ ಗೊತ್ತಿಲ್ಲ. ಆಮೇಲೆ ಅವರ ಹತ್ತಿರ ಹೋಗಿ ಏನು ಪ್ರಮೇಯ ಎಂದು ಕೇಳಿಕೊಳ್ಳಿ. ಇವತ್ತಿನ ದಿವಸ ಆ ಸಂಶಯ ಇದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರೂ ಕೂಡ ಅವರ ಕ್ಯಾಬಿನೆಟ್‌ನಲ್ಲಿದ್ದವರು. ಅವರು ಮುಖ್ಯಮಂತ್ರಿಗಳ ಬಗ್ಗೆ ಸಂಶಯ ವ್ಯಕ್ತ ಮಾಡತಕ್ಕ ಅಗತ್ಯ ಇಲ್ಲ ಎನ್ನುವುದು ನಮ್ಮ ಅನಿಸಿಕೆ.

ಶ್ರೀ ಸಿ. ಬೈರೇಗೌಡ.—ಒಂದು ಕಾಲದಲ್ಲಿ ಇವರು ಜನತಾ ವಿಜಯ ಆಗಿದ್ದವರು.

ಅಧ್ಯಕ್ಷರು.—ಬೈರೇಗೌಡರೆ. ಅದೆಲ್ಲ ಈಗ ಅಪ್ರಕೃತ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಸಿ. ಬೈರೇಗೌಡ.—ಆದರೆ ಆ ಸಂಬಂಧ ಇಲ್ಲಿಯವರೆಗೂ ಹೋಗಿಲ್ಲ. ಈಗಿನ ಮಾನ್ಯ ಮುಖ್ಯಮಂತ್ರಿಗಳು ಮಾಜಿ ಮುಖ್ಯಮಂತ್ರಿಗಳನ್ನು ಷೀಲ್ಡ್ ಮಾಡತಕ್ಕ ಪ್ರಯತ್ನ ಇಲ್ಲಿ ನಡೆಸಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ.—ನಾನು ಆಕ್ಷೇಪಣೆ ಮಾಡುತ್ತೇನೆ. ಷೀಲ್ಡ್ ಮಾಡುತ್ತಾರೆಂಬುದು ಸರಿಯಲ್ಲ

ಶ್ರೀ ಟಿ. ಎಂ. ಮಂಜುನಾಥ.—ಇವರ ವಾದ ಯಾವ ದಿಕ್ಕಿನಲ್ಲಿ ಹೋಗುತ್ತಾ ಇದ ಎನ್ನುವುದಂ ಗೊತ್ತಾಗುತ್ತಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಬೈರೇಗೌಡರು ಏನು ಹೇಳಿದರು ಎಂದರೆ ಈಗಿನ ಮುಖ್ಯ ಮಂತ್ರಿಗಳು ಹಿಂದಿನ ಮುಖ್ಯಮಂತ್ರಿಗಳನ್ನು ಷೀಲ್ಡ್ ಮಾಡುತ್ತಿದ್ದಾರೆ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ಬೈರೇಗೌಡರೆ, ನೀವು ಆ ರೀತಿ ಮಾತನಾಡಬೇಡಿ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಕಡತದ ವಿಚಾರದಲ್ಲಿ ಅಧ್ಯಕ್ಷರು ಆರ್ಡರ್ ಮಾಡಿದರೆ ನಾವು ಇಡುತ್ತೇವೆಂದು ಹೇಳುತ್ತಿದ್ದಾರೆ. ಅವರ ಮೇಲೆ ಏಕೆ ಇವರು ವಿನಾಕಾರಣ ಅನಾವಶ್ಯಕವಾಗಿ ಆರೋಪ ಮಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ.

ಶ್ರೀ ವೀರೇಂದ್ರಪಾಟೀಲ್.—ಬಹುಶ; ಮಾನ್ಯ ಸದಸ್ಯರು ನನ್ನ ಮೇಲೆ ಒಂದು ನೇರವಾದ ಆರೋಪವನ್ನು ಮಾಡಿದ್ದಾರೆ. ಅದಕ್ಕೆ ಆಧಾರ ಏನು ಎಂಬುದು ಬಹುಶ: ನನಗೆ ಗೊತ್ತಿಲ್ಲ. ಆಧಾರ ಏನು ಎಂದು ನಾನು ಏನೂ ಕೇಳಲಿಕ್ಕೂ ಹೋಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ನೀವು ಫೈಲ್ ಇಡದೇ ಇರುವುದೆ ಆಧಾರ.

ಶ್ರೀ ವೀರೇಂದ್ರ ಪಾಟೀಲ್.—ನಾನು ಅದರ ಬಗ್ಗೆ ಏನೂ ಹೇಳಲಿಲ್ಲ. ನಾನು ಬೆಳಿಗ್ಗೆ ಕಡತ ಇಡಬೇಕು. ಕಡತ ಇಡಬೇಕು ಎಂದು ಅವರು ಹೇಳಿದ್ದನ್ನು ಪ್ರಸ್ತಾಪ ಮಾಡಿದ್ದೇನೆಯೆ ಹೊರತಾಗಿ ಕಡತ ಇಡುವುದರ ಬಗ್ಗೆ ನನ್ನ ನೀತಿ ಏನು, ನನ್ನ ಧೋರಣೆ ಏನು, ನನ್ನ ಆಟಿಟ್ಯೂಡ್ ಏನು ಎನ್ನುವುದನ್ನು ನಾನು ಇಲ್ಲಿಯವರೆಗೂ ಹೇಳಿಲ್ಲ. ಏಕೆಂದರೆ, ನನಗೆ ಮಾತನಾಡುವ ಅವಕಾಶ ಸಿಕ್ಕಿಲ್ಲ. ಆದರೆ ಒಮ್ಮೆಂದೊಮ್ಮೆ ಎದ್ದು ಶ್ರೀಮಾನ್ ಬೈರೇಗೌಡರು, ಬಹುಶಃ ಶ್ರೀಮಾನ್ ಹೆಗಡೆಯವರು; ಮತ್ತು ಇವರು ಬಹಳ ಸಮೀಪದವರಿದ್ದರು, ಅದರ ಸಲುವಾಗಿ ಅವರನ್ನು ಡಿಫೆಂಡ್ ಮಾಡುವುದಕ್ಕೆ ಅಥವಾ ಯಾವುದೋ ಒಂದು ಪದ ಅಂದರೆ ಶೀಲ್ಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಇವತ್ತು ಸೋಷಿಯಲ್ ರಿಲೇಷನ್ ಬೇರೆ, ಪೊಲಿಟಿಕಲ್ ಅಫಿಲಿಯೇಷನ್ ಬೇರೆ, ಇದನ್ನು ನಾವು ತಿಳಿದುಕೊಳ್ಳಬೇಕು. ಅದಕ್ಕಾಗಿಯೇ ಇವತ್ತು ಶ್ರೀಮಾನ್ ಹೆಗಡೆಯವರು ಜನತಾದಳದ ಸದಸ್ಯರಾಗಿದ್ದಾರೆ. ಕೇಂದ್ರದಲ್ಲಿ ಪ್ಲಾನಿಂಗ್ ಕಮಿಷನ್‌ನಲ್ಲಿ ಡೆಪ್ಯುಟಿ ಚೇರ್ಮನ್‌ರಾಗಿದ್ದಾರೆ. ನಾನು ಕಾಂಗ್ರೆಸ್‌ನಲ್ಲಿ ಇದ್ದೇನೆ, ಮುಖ್ಯಮಂತ್ರಿಯಾಗಿದ್ದೇನೆ. ನಮ್ಮಿಬ್ಬರಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಸ್ನೇಹ ಮತ್ತೊಂದರ ಬಗ್ಗೆ ಈ ಮನೆಯಲ್ಲಿ ಪ್ರಸ್ತಾಪ ಮಾಡಬೇಕಾಗಿಲ್ಲ, ಬಹುಶಃ ಆ ಸ್ನೇಹ ಇಲ್ಲಿ ಹೇಳಿದರೆ ನಿಮ್ಮ ಗುರುಗಳ ಟೆಲಿಫೋನ್‌ನ್ನು ಏನು ಕದ್ದು ಕೇಳಿದ್ದಾರೆ. ಅವರನ್ನು ನನ್ನ ಗರಡಿಯಲ್ಲಿ ತಯಾರು ಮಾಡಿ ಇಟ್ಟಿದ್ದೇನೆ ಅದು ಎಲ್ಲರಿಗೂ ಗೊತ್ತಿದೆ. ಅವರ ಬಗ್ಗೆ ನನಗೆ ಅನುಕಂಪವಿದೆ. ಆದರೆ ಮುಖ್ಯಮಂತ್ರಿಯಾಗಿ ಮಾಡುವಂಥ ನಾನು ಕರ್ತವ್ಯವನ್ನು ಮಾಡುತ್ತೇನೆಯೇ ಹೊರತಾಗಿ ಅದರಲ್ಲಿ ಯಾವ ರೀತಿಯ ಪರ್ಸನಲ್ ರಿಲೇಷನ್ ಶಿಪ್, ಫ್ರೆಂಡ್‌ಶಿಪ್, ಇಂಟಿಮೆಸಿ ಯಾವುದೂ ಅಡ್ಡ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇವತ್ತು ಸಂಶಯಕ್ಕೆ ಎಡೆ ಕೊಟ್ಟಿರುವುದಕ್ಕೆ ಯಾವ ಕಾರಣವೆಂದು ನಾನು ಹೇಳಿದ್ದೇನೆ. ಇವತ್ತು ನಾನು ಮಾಡಿಲ್ಲವೆನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಆದರೆ ಕಡತದಲ್ಲಿ ಏನಿದೆ? ನಾನು ಎರಡನ್ನೂ ಉದ್ಧರಿಸಿದ್ದೇನೆ. Since the C.M has approved. ಎಂದು ಒಂದು ಕಡೆ ಇದೆ. ಮತ್ತೊಂದು ಕಡೆ ಆಗಾಗ ಇದು ಮುಖ್ಯಮಂತ್ರಿಗಳ ಅಪ್ಪಣೆ ಪಡೆದು ಆಥರೈಸ್ಡ್ ಆಫೀಸರ್ ಆಗಿರತಕ್ಕವರು ಟೆಲಿಫೋನ್ನನ್ನು ಟ್ಯಾಪ್ ಮಾಡುತ್ತಾ ಇದ್ದರು ಎನ್ನತಕ್ಕದ್ದು ನಮಗೆ ಸಿಕ್ಕಿದೆ. ಅದು ಈ ವರದಿಯಲ್ಲಿ ಇರತಕ್ಕದ್ದು. ರಾಜ್ಯಸಭೆಗೆ ಕೊಟ್ಟಿರತಕ್ಕ ವರದಿಯಲ್ಲಿ ಇರತಕ್ಕ ಬಗ್ಗೆ ನಾನು ಹೇಳುತ್ತಿದ್ದೇನೆ. ಈ ಎರಡು ಆಧಾರದ ಮೇಲೆ ನಾನು ಹೇಳುತ್ತಿದ್ದೇನೆಯೇ ವಿನಹ ಬೇರೆ ಇಲ್ಲ. ನನಗೆ ಏನು ಸಂಶಯ ಇದೆ, ಈ ಸಂಶಯವನ್ನು ನಿವಾರಣೆ ಮಾಡುವುದು ತಮ್ಮ ಕರ್ತವ್ಯ ತಾವು ನಿವಾರಣೆ ಮಾಡಿದ್ದರೆ, ನಾನು ಈ ಮಾತನ್ನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ಇದಕ್ಕೆ ಸಂಬಂಧಪಟ್ಟ ಪೂರ್ಣವಾದ ಕಡತವನ್ನು ಇಟ್ಟಿದ್ದರೆ, ನಾನು ಈ ಮಾತನ್ನು ಹೇಳುತ್ತಿರಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಸಂಶಯ ನಿವಾರಣೆ ಮಾಡುವ ಪ್ರಶ್ನೆ, ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಅನೇಕ ಪ್ರಶ್ನೆಗಳನ್ನು ಎತ್ತಿದ ನಂತರ ಆ ಚರ್ಚೆಗೆ ಉತ್ತರ ಕೊಡುವಾಗ ಉದ್ಭವ ವಾಗುತ್ತದೆ. ನಾನು ಇನ್ನೂ ಉತ್ತರ ಕೊಟ್ಟಿಲ್ಲ. ಈ ಒಂದು ಸಮಸ್ಯೆಯನ್ನು ಚರ್ಚೆ ಮಾಡುತ್ತಿದ್ದೀರಿ

ನಾನು ಇದರ ಬಗ್ಗೆ ಒಂದು ಮಾತನ್ನೂ ಪ್ರಸ್ತಾಪ ಮಾಡಿಲ್ಲ ಏಕೆಂದರೆ, ನನಗೂ ಚಾನ್ಸ್ ಸಿಗುತ್ತದೆ. ನನಗೂ ಅವಕಾಶ ಸಿಗುತ್ತದೆ. ಇಡೀ ಚರ್ಚೆಯಾದ ಮೇಲೆ ನಾನು ಉತ್ತರ ನೀಡುತ್ತೇನೆ. ಆ ವೇಳೆಯಲ್ಲಿ ನನ್ನ ಉತ್ತರದಿಂದ ಸಮಾಧಾನ ಆಗಲಿಲ್ಲ, ಅದಕ್ಕಾಗಿಯೇ ಇವರು ಹೆಗಡೆಯವರಿಗೆ ಆಶ್ರಯ ಕೊಡುವುದಕ್ಕೆ ಅಥವಾ ಶೆಲ್ಟರ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಎಂಬ ದೋಷಾರೋಪಣೆಯನ್ನು ಮಾಡಿದ್ದರೆ ಯಾಗಿದರೂ ಅರ್ಥವಾಗುತ್ತದೆ. ನನ್ನ ಭಾಷಣವನ್ನೇ ಕೇಳಿಲ್ಲ. ನನ್ನ ಉತ್ತರವನ್ನು ಕೇಳಿಲ್ಲ ನಾನು ಉತ್ತರ ಕೊಡುವುದಕ್ಕೆ ಇನ್ನೂ ಅವಕಾಶವಿಲ್ಲ. ಆದರೆ ಆಗಲೇ ಊಹಾಪೋಹ ಮಾಡಿ ತಾವು ಭಾಷಣದಲ್ಲಿ ಹೇಳುತ್ತಿದ್ದೀರಿ. ನಾವು ಅವರು ಸ್ನೇಹಿತರಿದ್ದೇವೆ ಅದಕ್ಕಾಗಿಯೇ, ವೀರೇಂದ್ರ ಪಾಟೀಲರು ಆದಷ್ಟು ಅವರನ್ನು ಡಿಫೆಂಡ್ ಮಾಡಲು ಹೊರಟಿದ್ದಾರೆ ಅಂದರೆ ತಾವೇ ವಿಚಾರ ಮಾಡಬೇಕಾಗುತ್ತದೆ: ತಾವು ಜವಾಬ್ದಾರಿಯಾದ ಒಬ್ಬ ಸದಸ್ಯರಾಗಿ, ಇವತ್ತು ನೀವು ಏನು ಮಾತನಾಡುತ್ತೀರಿ ಅದು ನಾಳೆ ಪತ್ರಿಕೆಗಳಲ್ಲಿ ಬಂದರೆ ಅದಕ್ಕೂ ಒಂದು ಬೆಲೆ ಇರಬೇಕಾಗುತ್ತದೆ: ಹೇಳುವುದಕ್ಕೂ ಒಂದು ಆಧಾರ ಇರಬೇಕಾಗುತ್ತದೆ. ದೋಷಾರೋಪಣೆಗೆ ಯಾವ ಒಂದು ಆಧಾರ ಇಲ್ಲದೆ, ಇನ್ನೂ ನನ್ನ ವಿಚಾರಗಳನ್ನೇ ಕೇಳಿಲ್ಲ. ಆದರೆ ಆಗಲೇ ತಾವು ಒಂದು ನಿರ್ಣಯಕ್ಕೆ ಬಂದು ಬಿಟ್ಟಿದ್ದೀರಿ. ಇದು ನಿಜಕ್ಕೂ ದುರಾದೃಷ್ಟಕರ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬೈರೇಗೌಡರು ನನಗೆ ಅತಿ ಹತ್ತಿರದ ಸ್ನೇಹಿತರಾಗಿದ್ದರು ಬಹಳ ಪ್ರೀತಿಯ ಸ್ನೇಹಿತರಾಗಿದ್ದರು. ಇವತ್ತು ಅವರ ಆ್ಯಟಿಟ್ಯೂಡ್ ಎಂಬುದು ನೋಡಿದರೆ ನಮ್ಮ ಸಂಬಂಧದಲ್ಲಿ ಈ ವಿಚಾರ ಬರುವುದಿಲ್ಲವೆಂದು ಗೊತ್ತಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಇದಕ್ಕೆಲ್ಲಾ ಕಾರಣ ಏನೆಂದರೆ, ನಾನು ಮೊದಲೇ ಇದಕ್ಕೆ ಸಂಬಂಧಪಟ್ಟ ಕಡತ ಇರಬೇಕೆಂದು ಹೇಳಿದ್ದೆ. ಅದು ಯಾವುದೂ ನನ್ನ ಎದುರಿಗೆ ಇಲ್ಲದೇ ಇರುವುದರಿಂದ ಈ ತೀರ್ಮಾನಕ್ಕೆ ನಾನು ಬಂದಿದ್ದೇನೆಯೇ ವಿನಾ ಮತ್ತೆ ಬೇರೆ ಯಾವ ಕಾರಣದಿಂದಲೂ ಅಲ್ಲ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಬಯಸುತ್ತೇನೆ.

ಶ್ರೀ ಎಂ. ಮಹದೇವ್.—ರಾಮಕೃಷ್ಣ ಹೆಗಡೆಯವರ ಹತ್ತಿರ ಇವರು ಮಂತ್ರಿಗಳಾಗಿದ್ದಾಗ ಆ ಅವಧಿಯಲ್ಲಿ ಸಂಶಯದಿಂದ ಕೆಲಸ ಮಾಡುತ್ತಿದ್ದರೋ ಅಥವಾ ಈಗ ತಾನೇ ಸಂಶಯ ಬಂದಿದೆಯೋ.

ಶ್ರೀ ಸಿ. ಬೈರೇಗೌಡ.—ಇದೆಲ್ಲಾ ನಿವಾರಣೆ ಆಗಬೇಕಾದರೆ, ನಿಜಾಂಶ ಹೊರಗಡೆ ಬರಬೇಕಾದರೆ ಈಗಿನ ಮುಖ್ಯಮಂತ್ರಿಗಳು ಹೇಳತಕ್ಕದ್ದು ಸರಿಯೋ ಅಥವಾ ಹಿಂದಿನ ಮುಖ್ಯಮಂತ್ರಿಗಳು ಹೇಳಿರತಕ್ಕದ್ದು ಸರಿಯೋ ಇದರಲ್ಲಿ ನಿಜಾಂಶ ಏನು ಎನ್ನುವುದು ಜನತೆಗೆ ತಿಳಿಯಬೇಕಾಗಿದೆ. ಮತ್ತು ಈ ದೇಶದಲ್ಲಿ ಹಾಗೂ ಪ್ರಪಂಚದಾದ್ಯಂತ ಈ ವಾಕ್ ಸ್ವಾತಂತ್ರ್ಯಕ್ಕೋಸ್ಕರ ಹೋರಾಟಗಳು ನಡೆದಿವೆ. ಬಹಳಷ್ಟು ಜನ ಪ್ರಾಣಾರ್ಪಣೆ ಕೂಡ ಮಾಡಿದ್ದಾರೆ, ಅವರಿಗೆಲ್ಲಾ ನಾವು ಮನ್ನಣೆ ಕೊಡಬೇಕಾದರೆ ಸತ್ಯಾಂಶ ಹೊರಗಡೆ ಬರಬೇಕಾಗಿದೆ. ಸತ್ಯಾಂಶ ಹೊರಗಡೆ ಬರಬೇಕಾದರೆ ಇದರ ಬಗ್ಗೆ ಸದನದ ಒಂದು ಸಮಿತಿ ಆಗಬೇಕಾಗಿದೆ. ಕೂಲಂಕುಷವಾದಂಥ ವಿಚಾರಣೆ ಆಗಬೇಕಾಗಿದೆ. ಸತ್ಯಾಂಶ ಹೊರಗಡೆ ಬರದೆ ಇಲ್ಲಿ ರಾಮಕೃಷ್ಣ ಹೆಗಡೆಯವರ ಬಗ್ಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಅದೇ ರೀತಿ ಮುಖ್ಯಮಂತ್ರಿಗಳ ಬಗ್ಗೆ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಯಾರು ಈ ಪಾಪಕೃತ್ಯ ಮಾಡಿದ್ದಾರೆ ಎಂಬುದು ಜನತೆಗೆ ತಿಳಿಯಬೇಕಾಗಿದೆ. ಆದ್ದರಿಂದ ಸದನದ ಸಮಿತಿ ರಚನೆ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಅಧ್ಯಕ್ಷರೆ, ಈ ಚರ್ಚೆ ಇಂದು ಮುಗಿಯುತ್ತದೋ ಅಥವಾ ನಾಳೆಯೂ ಮುಂದುವರೆಯುತ್ತದೋ ?

MR. SPEAKER.—I have just received a communication from the Chief Minister. Some hon'ble members mentioned about the importance of certain communication which has been sent by the Chief Minister, Government of Karnataka, to the Rajya Sabha Secretariat and they were very keen that letter, a copy of that communication should be placed on the table of the House so that the debate could be more meaningful and if I remember right the Leader of the Opposition was very particular, and very vocal that at least that letter must be placed on the table of the House. Now the Chief Minister in his communication has conveyed to me that he i

enclosing a lettter which has been addressed to the Rajya Sabha Committee on Subordinate Legislation. He has also further stated that the same has been made available to the other house on 16th itself. Today, it is 25th. So, I am placing this letter an authenticated letter on the table of the House.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕಮ್ಯೂನಿಕೇಷನ್ ಸನ್ಮಾನ್ಯ ಮುಖ್ಯ ಮಂತ್ರಿಗಳು ಸದನದ ಮುಂದೆ ಏನು ಇಟ್ಟಿದ್ದಾರೆ that can be treated as an authenticated document under rule 326 ಮಾನ್ಯ ವಿರೋಧಪಕ್ಷದ ನಾಯಕರು ಏನು ಡಾಕ್ಯುಮೆಂಟನ್ನು ಪ್ರೆಸೆಂಟ್ ಮಾಡಿದ್ದಾರೆ. Under Rule 327 that has not been an authenticated. ಏಕೆಂದರೆ, sometime it is tikely to be misquoted.

ಶ್ರೀ ಡಿ. ಬಿ. ಚಂದ್ರೇಗೌಡ.—ಈಗ ೬ ಗಂಟೆಯಾಗಿದೆ. ಸ್ವಲ್ಪ ಹೊತ್ತು ಕುಳಿತುಕೊಳ್ಳಬೇಕ ಎಂದರೆ ಕುಳಿತುಕೊಳ್ಳೋಣ.

ಶ್ರೀ ಪಾಟೀಲ್ ನಾಗರಾಜ್.—ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಮಾನ್ಯ ಸಭಾ ನಾಯಕರು ಏನು ಹೇಳುತ್ತಾರೆ ಕೇಳೋಣ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ನಾನು ಹೇಳುವುದು ಏನೆಂದರೆ, ಇವತ್ತು ಆರೂವರೆ ಗಂಟೆವರೆಗೂ ಕುಳಿತುಕೊಂಡು ನಾಳೆ ಬೆಳಿಗ್ಗೆ ೯-೩೦ರಿಂದ ೧೧ ಗಂಟೆವರೆಗೆ ಈ ವಿಷಯವನ್ನು ಮುಗಿಸುವುದು ಉತ್ತಮ ಎಂದು ಅನ್ನಿಸುತ್ತದೆ. ತಾವೆಲ್ಲರೂ ಒಪ್ಪಿಕೊಂಡರೆ ಆ ರೀತಿ ಮಾಡಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾಳೆ ಪ್ರಾರಂಭ ಮಾಡಬಹುದು ಅಂತ ಹೇಳಿದರೆ ನಾಳೆಯೇ ಪ್ರಾರಂಭ ಮಾಡಿಬಿಡಬಹುದು.

ಅಧ್ಯಕ್ಷರು.—ಮಾತನಾಡಿ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೆ, ನನಗೆ ಒಂದು ಮಾತು ನೆನಪು ಬರುತ್ತದೆ. "ಸಾಲಗಾರ ಬಿಟ್ಟರೂ ಸಾಕ್ಷಿದಾರ ಬಿಡ" ಅಂತ ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಇದೆ. ಹಾಗೆ ಈ ಚರ್ಚೆ, ಮೂಲತಃ ಇದರ ಪರಿಣಾಮಗಳು ಇದರ ಲಾಭ ನಷ್ಟಗಳನ್ನು ವಿಮರ್ಶೆ ಮಾಡಿದ್ದು ಆಗಿದೆ. ಆದರೂ ಈ ಚರ್ಚೆ ಈ ಸದನದಲ್ಲಿ ಮತ್ತೆ ಮತ್ತೆ ಆಗುತ್ತಿದೆ. ತಾವು ಅನುಮತಿ ಕೊಟ್ಟಿದ್ದೀರಿ ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಟ್ಟಾರೆ ಚರ್ಚೆ ಏನು ಇದೆ ಈ ಪ್ರಿಮೈಸಸ್ ಅನ್ನು ನೋಡಿದರೆ ಎಲ್ಲರ ಮನಸ್ಸಿನಲ್ಲೂ ಏನೋ ಒಂದು ಅಪರಾಧವಾಗಿದೆ ಅಂತ ಇದೆ ನಾನು ಮಹಾಭಾರತ ನೋಡುತ್ತಿದ್ದೆ. "ಅಶ್ವತ್ಥಾಮೊ" ಹತಃಕುಂಜರ ಏನು ಅಂದರೆ ದ್ರೋಣಾಚಾರ್ಯರನ್ನು ಕೊಲ್ಲುವುದು ಸಾಧ್ಯವೇ ಇಲ್ಲ ಅಂತ ಕಂಡಾಗ ಅಶ್ವತ್ಥಾಮ ಹತನಾದ ಅಂತ ಹೇಳಿದರೆ ದ್ರೋಣಾಚಾರ್ಯ ಶಸ್ತ್ರ ಕೆಳಗೆ ಇಟ್ಟುಬಿಡುತ್ತಾನೆ. ಆದ್ದರಿಂದ ಈ ಸುದ್ದಿಯನ್ನು ಹಬ್ಬಿಸಬೇಕು ಅಂತ ಅಶ್ವತ್ಥಾಮೋ ಹತಃ ಕುಂಜರಃ ಕೊನೆಗೆ ಕುಂಜರಃ ಎಂಬುದು ಅವರಿಗೆ ಕೇಳಬಾರದು ಎಂದು ಹೇಳಲಾಯಿತು. ಪಾಪ, ದ್ರೋಣಾಚಾರ್ಯ ಅಶ್ವತ್ಥಾಮ ಸತ್ತ ಅಂತ ಹೇಳಿ ಶಸ್ತ್ರ ಕೆಳಗೆ ಇಟ್ಟುಬಿಡುತ್ತಾನೆ ಆಗ ಶಂಖ ಊದಿಬಿಡುವುದು ಆಗ ದ್ರೋಣಾಚಾರ್ಯರ ಕತ್ತು ಕತ್ತರಿಸಬೇಕು ಎನ್ನುವ ಹಾಗೆ ಇದೆ. ಈ ಚರ್ಚೆ ಚರ್ಚೆಯಲ್ಲಿ ಅಂತಿಮವಾಗಿ ಆನೆ ಸಾಯಿತೋ ? ಅಶ್ವತ್ಥಾಮ ಸತ್ತನೋ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಂದರೆ ವಿರೋಧಪಕ್ಷದ ನಾಯಕರ ಅರ್ಥದಲ್ಲಿ ತಮ್ಮದು ಕೌರವರ ಪಾಳೆಯ ಅಂತ ಆಯಿತು.

ಶ್ರೀ ಡಿ. ಬಿ. ಚಂದ್ರೇಗೌಡ.—ಆ ಒಂದು ದೃಷ್ಟಿಯಿಂದ ಕೌರವರ ಪಾಳಯವೆ, ಏನೂ ತೊಂದರೆಯಿಲ್ಲ. ಆದ್ದರಿಂದ ನಾನು ಏನು ಚರ್ಚೆ ನಡೆಯುತ್ತಿದೆ ಎಂದು ನೋಡುತ್ತಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ.—ಶಕುನಿ ಪಾತ್ರ ಯಾರು?

ಶ್ರೀ ಡಿ. ಬಿ. ಚಂದ್ರೇಗೌಡ.—ನೀವೇ ಈ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರ ಯಾರಿಗೆ ಹೇಳಲಿ. ಬೇರೆ ಯಾರಾದರು ಕೇಳಿದ್ದಿದ್ದರೆ ಉತ್ತರ ಹೇಳುತ್ತಿದ್ದೆ. ನೀವೇ ಕೇಳಬೇಡಿ.

ಶ್ರೀ ಎಸ್. ಬಂಗಾರಪ್ಪ.—ಕೌರವರ ಪಾಳೆಯ ನಮ್ಮದೆ ಅಂತ ನೀವೇ ಒಪ್ಪಿಕೊಂಡ ಮೇಲೆ ಶಕುನಿ ನಿಮ್ಮ ಕಡೆಯೇ ಇರಬೇಕಲ್ಲ. ಆದ್ದರಿಂದ ಅವರು ಯಾರು ಎಂದು ಮಾನ್ಯ ಸದಸ್ಯರು ಕೇಳಿದರು ಅಷ್ಟೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಇನ್ನೂ ಎಷ್ಟು ಜನ ಶಕುನಿಗಳು ಇದ್ದಾರೆಂದು ತಿಳಿದುಕೊಳ್ಳುವುದಕ್ಕೆ ಬಹಳ ದಿವಸಗಳು ಬೇಕು ನಮ್ಮ ಕಡೆಯ ಶಕುನಿಗಳನ್ನು ಏಕೆ ಹುಡುಕುತ್ತಿದ್ದೀರಿ? ನಿಮ್ಮ ಕಡೆಯೇ ಹುಡುಕಿಕೊಳ್ಳಿ. ನಿಮ್ಮ ಸಂಖ್ಯೆ ಕೌರವರ ಸಂಖ್ಯೆಗೆ ಹತ್ತತ್ರ ತಲುಪಿದೆ. ನಮ್ಮದು ಪಾಂಡವರ ಸಂಖ್ಯೆಯ ಮಟ್ಟಕ್ಕೆ ಇಳಿದಿದೆ.

ಅಧ್ಯಕ್ಷರು.—ಶಕುನಿ ಮುಂಬೈಯಿಯಲ್ಲಿ ಮುಂದೆ ಯಾವುದಾದರು ಪಾತ್ರಕ್ಕೆ ಹುಡುಕುತ್ತಿರಬೇಕು

(ನಗು)

ಶ್ರೀ ಡಿ. ಬಿ. ಚಂದ್ರೇಗೌಡ.—ಆಧುನಿಕ ಶಕುನಿ. ಒಟ್ಟಾರೆ ಪ್ರಿಮೈಸ್ ಆಫ್ ದಿ ಆರ್ಗ್ಯುಮೆಂಟ್‌ನ್ನು ನೋಡುವಾಗ ಶ್ರೀಮಾನ್ ಖರ್ಗೆಯವರು ಹಾಗೂ ಗೌರವಾನ್ವಿತ ಅನೇಕ ಸದಸ್ಯರು ಮಾತನಾಡುವಾಗ ಒಂದು ನಿರ್ಧಾರಕ್ಕೆ ಬಂದುಬಿಟ್ಟಿದ್ದಾರೆ ಆನೆ ಸತ್ತಿದೆ ಎಂದಲ್ಲ, ಅಶ್ವತ್ಥಾಮನೇ ಸತ್ತಿದ್ದಾನೆ ಎಂದು. ಇದೇ ಸಮಯ ದ್ರೋಣಾಚಾರ್ಯರ ತಲೆ ತೆಗೆಯಬೇಕು. ಇಲ್ಲದಿದ್ದರೆ ಅವರನ್ನು ಸೋಲಿಸುವುದಕ್ಕೆ ಆಗುವುದಿಲ್ಲ ಇದು ದುರಂತ. ನಾವು ಒಟ್ಟಾರೆ ಈ ಚರ್ಚೆಗೆ ಆಯಾಮವನ್ನು, ವಿವರಣೆಯನ್ನು ಕೊಡುವಾಗ ಉಳಿದ ಎಲ್ಲಾ ವಿಚಾರಗಳನ್ನು ನಾನು ಒಪ್ಪುತ್ತೇನೆ. 'telephone tapping is heinous crime' ಅಕ್ಷಮ್ಯ ಅಪರಾಧ ಎಂದು ಏನು ಪದವನ್ನು ಬಳಸಿದ್ದಾರೆ, ಶಬ್ದ ಭಂಡಾರದಲ್ಲಿರತಕ್ಕ ಪದಗಳನ್ನೆಲ್ಲ ಬಳಸಿದ್ದಾರೆ, ಆ ಎಲ್ಲವನ್ನೂ ನಾನು ಒಪ್ಪುತ್ತೇನೆ. ಆದರೆ ಇದು ಆಗಿದೆಯೇ ಎನ್ನುವ ತೀರ್ಮಾನಕ್ಕೆ ಬಂದರೆ, ಈ ಅಪರಾಧವನ್ನು ಯಾರು ಮಾಡಿದ್ದಾರೋ ಅವರಿಗೆ ಶಿಕ್ಷೆ ವಿಧಿಸಬೇಕು. ಅಪರಾಧಿ ಯಾರು ಅಂತ ಗೊತ್ತಿಲ್ಲದೆ ದ್ರೋಣಾಚಾರ್ಯರಿಗೆ ಶಿಕ್ಷೆ ವಿಧಿಸಿದ ಹಾಗೆ ಶಿಕ್ಷೆಯನ್ನು ವಿಧಿಸುವುದು ಬೇಡ. ಇದು ತಮ್ಮಲ್ಲಿ ನನ್ನ ಮೊದಲನೆಯ ಮನವಿ. ಮಾನ್ಯ ಅಧ್ಯಕ್ಷರೆ ಈ ಶಾಸನ ಏನು ಇದೆ, ಟೆಲಿಗ್ರಾಫಿಕ್ ಆಕ್ಟ್ 1985 it has stood the test of time of 105 years. ಇದು ೧೦೫ ವರ್ಷಗಳ ಕಾಲ ಶಾಸನವಾಗಿ ಈ ರಾಷ್ಟ್ರದಲ್ಲಿ ಕೆಲಸ ಮಾಡಿಕೊಂಡು ಬಂದಿದೆ. ಇಷ್ಟು ವರ್ಷಗಳ ಕಾಲ ಈ ದೇಶದಲ್ಲಿ ಬ್ರಿಟೀಷರು ಇದ್ದರು. ಅವರ ನಂತರ ಸ್ವಾತಂತ್ರ್ಯ ಬಂದು ೪೦ ವರ್ಷಗಳಿಂದ ಭಾರತೀಯರಾದ ನಾವುಗಳು ಈ ಶಾಸನ ಏಕೆ ಇರಬೇಕು ಅಂತ ಆಲೋಚನೆ ಮಾಡಿದ್ದು ಬಹಳ ಮುಖ್ಯವಾದ ಎರಡು ಕಾರಣಗಳಿಗಾಗಿ. ಅದನ್ನು ಹೇಳುತ್ತೇನೆ, ಒಂದು ಅದರಲ್ಲಿರತಕ್ಕ ಪ್ರಾವಿಜನ್‌ನಲ್ಲಿ ಮ್ಯಾಂಡೇಟರಿ ಇದೆ. ಇದನ್ನು ಮಾಡಲೇಬೇಕು. the world is 'shall' ಇವತ್ತು ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿ ಕರ್ನಾಟಕ ರಾಜ್ಯದಲ್ಲಿ ಟೆಲಿಫೋನ್ ಟ್ಯಾಪ್ ಮಾಡುವುದಿಲ್ಲ ಅಂತ ಹೇಳಿದರೆ he is committing a national crime under this Act. He is bound to do it.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಅವರಿಗೆ ಹೇಳುತ್ತಿದ್ದೇನೆ. ನಾನು ನಿಮಗೆ ಹೇಳಿದ್ದು ಅಲ್ಲ ನಾನು ಈಗ ನಿಮಗೆ ಹೇಳುವುದಕ್ಕೆ ಹೋಗುವುದಿಲ್ಲ. The other aspect of it is, what shall be done is one thing and what shall not be done is the other thing. ಯಾವುದನ್ನು ಮಾಡಬಾರದು, ಯಾವುದನ್ನು ಮಾಡಲೇಬೇಕು. ಇದನ್ನು ಹೇಳುವಾಗ ಯಾವುದನ್ನು ಮಾಡಬೇಕೆಂದು ಶಾಸನದಲ್ಲಿ ಹೇಳಿದ್ದಾರೆ, ಹಾಗೇ, let us not forget the fact that it is a Central Act. ನಾವು ಇಲ್ಲಿ ತೌಡು ಕುಟ್ಟುತ್ತಿದ್ದೇವೆ. ಯಾರು ಮಾಡಬೇಕು ಅಮೆಂಡ್‌ಮೆಂಟ್? ಸಂಸತ್ತಿನ ಉಭಯ ಸದನಗಳು ಮಾಡಬೇಕು. ಈ ಶಾಸನ ಬೇಡ ಎಂದು ನಾವು ಹೇಳುತ್ತೇವೆ, ನೀವೂ ಹೇಳುತ್ತಿದ್ದೀರಿ. ಆದರೆ ಹೇಳುತ್ತೇವೆಯೇ ಹೊರತು ಈ ಶಾಸನದ ಬದಲಾವಣೆಯ ಅಧಿಕಾರದ ವ್ಯಾಪ್ತಿ ನಮಗೆ ಇಲ್ಲ. If being a Central Act, we are only the administering agency. As administering agency, what are our powers and who is authorised to do it under the Act. ಆಥರೈಸೇಷನ್ ಯಾರು ಮಾಡಬೇಕೆನ್ನುವುದು ಇದರಲ್ಲಿ ಹೇಳುತ್ತದೆ, ಒಂದು ಪದವನ್ನು ಬಳಸಿದ್ದಾರೆ, Public order, for preventing incitement, commission of offence so and so, shall not be intercepted or shall be intercepted. Therefore, you

have no option, you shall intercept certain telephones and you shall not by obligation. ಇದು ಇಲ್ಲಿ ಮುಖ್ಯ ಇರತಕ್ಕದ್ದು. ನಾನು ಅದಕ್ಕೆ ಹೇಳೀದೆ. ಬಹಳ ಹಿಂದೆ ಅಂದರೆ ಅಕ್ಟೋಬರ್ 8ನೇ ತಾರೀಖಿನ ಚರ್ಚೆಯಲ್ಲಿ ಏನು ನಡೆದಿದೆ ಅದನ್ನು ಪ್ರತಿಯೊಂದು ಅಕ್ಷರ ಬಿಡದೆ ಓದಿದ್ದೇನೆ. ಅವತ್ತು ಶ್ರೀಮಾನ್ ಖರ್ಗೆಯವರು ಏನು ಹೇಳಿದ್ದಾರೆ ಮತ್ತು ಇವತ್ತು ಏನು ಹೇಳಿದ್ದಾರೆ ಇವೆರಡನ್ನೂ ಸಾಮ್ಯ ಮಾಡುತ್ತಿದ್ದೇನೆ. ಆದರೆ ಅವತ್ತು ಅವರ ವಾದದಲ್ಲಿ ಸರಣಿಬೇರೆ ಇತ್ತು. ಏಕೆಂದರೆ, ಅವತ್ತು ಅವರು ಇಲ್ಲಿ ಇದ್ದರು. ಇವತ್ತು ಅವರ ವಾದದಲ್ಲಿ ಟೋನ ಅದೇ ಇದೆ ಚರ್ಚೆ ಅವರೇ ಪ್ರಾರಂಭ ಮಾಡಿದ್ದಾರೆ ಏಕೆ ಮಾಡಿದ್ದಾರೆ ಎಂಬುದರ ಬಗ್ಗೆ ಕೊನೆಗೆ ಬರೋಣ. ಈಗ ಅವರ ಭಾಷೆ ಬಹಳ ಲಿಮಿಟ್ ಆಗಿದೆ. ಏನನ್ನು ಕೇಳಬೇಕೋ ಅದನ್ನು ಕೇಳಿದ್ದಾರೆ. I will now come back to the relevant documents that the Govt. has placed before the House. Whether this document conclusively prove that 'X' is the criminal ? If that is the case, an individual has already accepted the moral responsibility and as Chief Minister of Karnataka, the elected among the elected posts, suo moto tendered resignation to the post. That is the record in the history of democratic set-up of our country. Probably, no other Chief Minister has resigned owring moral responsibality except...ಕಾಶ್ಮೀರದಲ್ಲಿ ಒಂದು ರೈಲು ಅಪಘಾತ ಆಯಿತು ಎಂದು ಮಾರಲ್ ಜವಾಬ್ದಾರಿ ಹೊತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರು ರಾಜೀನಾಮೆ ಕೊಟ್ಟ ಒಂದು ಪ್ರಸಂಗ ಬಿಟ್ಟರೆ ಈ ದೇಶದಲ್ಲಿ ಮತ್ತೊಂದು ಪ್ರಸಂಗ ನನಗೆ ನೆನಪು ಇಲ್ಲ. ಇವತ್ತು ನಾವು ಚರ್ಚೆ ಮಾಡುವಾಗ ಯಾವ ದೊಣ್ಣೆಯಾದರೂ ಸರಿ ರಾಮಕೃಷ್ಣಹೆಗ್ಡೆಯವರಿಗೆ ಹೊಡೆಯಬೇಕೆಂದು ತೀರ್ಮಾನಕ್ಕೆ ಬಂದಿದ್ದರೆ ಹೊಡೆ. ಯಾವ ದೊಣ್ಣೆ ಸಿಕ್ಕಿದರೂ ಹೊಡೆಯಬಹುದು. ಇದು ಅಲ್ಲ. ವಸ್ತುನಿಷ್ಟವಾಗಿ ಚರ್ಚೆ ಮಾಡುವಾಗ ಸತ್ಯದ ಶೋಧನೆ ಮಾಡುವಾಗ ನಾವು ನಿರ್ಮಲ ಮನಸ್ಸಿನಿಂದ. ವಿಶಾಲವಾದ ದೃಷ್ಟಿಯನ್ನು ಇಟ್ಟುಕೊಂಡು ಚರ್ಚೆ ಮಾಡೋಣ. ಕನ್‌ಕ್ಲೂಸಿವ್ ಆಗಿ ಇದು ಪ್ರೂವ್ ಆಗಿದೆ ಎನ್ನುವ ನಿರ್ಧಾರ. ನಿರ್ವಿವಾದ ಎಂದು ನೀವು ಯಾರೂ ಹೇಳುವುದು ಬೇಡ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ಮಾನ್ಯ ರಾಮಕೃಷ್ಣಹೆಗ್ಡೆಯವರು ತಾನಾಗೇ ರಾಜೀನಾಮೆ ಕೊಡುತ್ತಾರೆ. ಅವರು ಅದನ್ನು ಹೇಳಲಿ. ನಾವು ಇವತ್ತು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. He is closer in access to the documents and that is what he has said. ಆದುದರಿಂದ ಈ ಚರ್ಚೆ ಇಲ್ಲಿ ನಡೆಯುವಾಗ ಯಾರು ಹೇಳಬಹುದು ಸತ್ಯವನ್ನು? ಸತ್ಯವನ್ನು ಹೇಳುವುದಕ್ಕೆ ಸಾಧ್ಯವಿರುವುದು ಈ ಸದನದ ನಾಯಕರಿಗೆ, ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಸಾಧ್ಯವಿದೆ. ಈ ದಾಖಲೆಗಳು ಅದನ್ನು ಹೇಳುವುದಿಲ್ಲ. ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಈ ದಾಖಲೆಗಳ ಬಗ್ಗೆ ಮಾನ್ಯ ಖರ್ಗೆಯವರು 2-3 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯ ಸಭಾ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ವರದಿಯ ಕೆಲವು ಭಾಗವನ್ನು ಅವರು ಕ್ವೋಟ್ ಮಾಡಿದ್ದಾರೆ. ನಾನು ಕೇಳುತ್ತೇನೆ, ನಾನು ರಾಜ್ಯಸಭೆಯ ಸದಸ್ಯನಾಗಿ, ಲೋಕಸಭೆಯ ಸದಸ್ಯನಾಗಿ, ಸುದೈವದಿಂದ ಇಲ್ಲಿಯೂ ಎರಡೂ ಮನೆಯ ಸದಸ್ಯನಾಗಿ ಅಲ್ಲೂ ಇಲ್ಲೂ ಕೆಲಸ ಮಾಡಿರುವುದರಿಂದ, ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯ ಇತಿಮಿತಿಗಳೇನು. ವ್ಯಾಪ್ತಿಯೇನು, ಕೆಲಸವೇನು ? ಅದಕ್ಕೊಂದು ಆಕ್ಟ್ ಇದೆ. ಒಂದು ಆಕ್ಟ್ ಮಾಡಿದಮೇಲೆ ಅನೇಕಸಾರಿ ಅಂತಹ ಆಕ್ಟನ್ನು ನಾವು ರೂಲ್ಸ್ ಮಾಡುವುದೇ ಇಲ್ಲ. ಸರ್ಕಾರಕ್ಕೆ ಅನುಕೂಲವಾದರೆ ಮಾಡುತ್ತಾರೆ, ಅನಾನುಕೂಲವಾದರೆ ಬಿಟ್ಟುಬಿಡುತ್ತಾರೆ. ಹತ್ತುತ್ತು ವರ್ಷಗಳ ಕಾಲ ಒಂದೊಂದು ಶಾಸನಕ್ಕೆ ರೂಲ್ಸ್ ಆಗುವುದಿಲ್ಲ. ಆಗ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ಬಗ್ಗೆ ಇಲ್ಲ ಒಂದು ಸಾರಿ ಚರ್ಚೆಗೆ ಬಂದಿತ್ತು. I cannot lay my hands on the discussion or debate ಏತಕ್ಕೆ ರೂಲ್ಸ್ ಮಾಡಲಿಲ್ಲ? ಇತ್ತೀಚಿನ ಥಿಂಕಿಂಗ್‌ಗೆ ನಾವು ಎಷ್ಟು ದೂರಕ್ಕೆ ಹೋಗಿದ್ದೇವೆ ಅಂದರೆ, ಒಂದು ಆರ್ಡಿನೆನ್ಸ್ ಹೊರಡಿಸಬೇಕಾದರೂ ಕೂಡ ಸಬಾರ್ಡಿನೇಟ್ ಲೆಜಿಸ್‌ಲೇಷನ್ ಕಮಿಟಿಯ ಅಭಿಪ್ರಾಯವನ್ನು ಪಡೆದು ಹೋಗಬೇಕೆನ್ನುವವರೆಗೆ ಚರ್ಚೆ ನಡೆದಿದೆ. ಆದ್ದರಿಂದ ಇಲ್ಲಿ ಸಬಾರ್ಡಿನೇಟ್ ಲೆಜಿಸ್‌ಲೇಷನ್ ಕಮಿಟಿಯ ಕೆಲಸವೇನು ? ಮೇಲಿನದೆ ಇರಲಿ, ಇಲ್ಲಿನದೆ ಇರಲಿ, ಇದರ ಕೆಲಸವೇನು ? to look into whether the rules have been framed, under the Act, Id the rules have not been framed the reason thereof and if the rules have been framed, whethe

they are in consonance with law laid down or is it detrimental to the public interest. ಆ ದೃಷ್ಟಿಯಿಂದ ಇವತ್ತು ಆ ಸಮಿತಿ ಏನು ಚರ್ಚೆ ಮಾಡಿದೆ ? ೧೦೫ ವರ್ಷಗಳ ಕಾಲ ಇಂತಹ ಒಂದು ಕರಾಳ ಶಾಸನ ಈ ದೇಶದಲ್ಲಿದೆ, ಇದಕ್ಕೆ ಒಂದು ರೂಲ್ಸ್ ಮಾಡಿಲ್ಲ, ಮಾಡದೆ ಇರತಕ್ಕದ್ದು ಸರಿಯಲ್ಲವೆನ್ನುವ ಅಭಿಪ್ರಾಯವನ್ನು ಕೇಳುವುದಕ್ಕಾಗಿ ಸಮಿತಿಯನ್ನು ಮಾಡಿದ್ದಾರೆ. ಇದರಲ್ಲಿ ಕರ್ನಾಟಕವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. I am not attributing any motive. ಆದ್ದರಿಂದ ಇಲ್ಲಿ ಚೀಫ್ ಸೆಕ್ರೆಟರಿಯವರು ಉತ್ತರ ಹೇಳ ಬೇಕಾಗುತ್ತದೆ ಬೇರೆಯದನ್ನು ಆಯ್ಕೆ ಮಾಡಿಕೊಂಡಿದ್ದರೆ ಉತ್ತರ ಹೇಳಬೇಕಾದ ಅಗತ್ಯವಿರಲಿಲ್ಲ. ಇಲ್ಲಿ ಮೋಟಿವ್ ಏನಿದೆ? ಕರ್ನಾಟಕವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

SRI M. VEERAPPAMOILY.—Sir, I rise to a point of order. I think we are transgressing our limit. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಅದನ್ನು ಕ್ವೋಟ್ ಮಾಡಬಹುದು, ಕ್ವೋಟ್ ಮಾಡುವುದಕ್ಕೆ ನಮ್ಮದೇನು ಅಡ್ಡಿಯಿಲ್ಲ. ಆದರೆ ಇವತ್ತು ರಾಜ್ಯಸಭೆಯ ಸಬಾರ್ಡಿನೇಟ್ ಲೇಜಿಸ್‌ಲೇಷನ್ ಕಮಿಟಿಯ ವ್ಯಾಪ್ತಿ ಮತ್ತು ಈ ವಿಷಯಕ್ಕನುಗುಣವಾಗಿ ವ್ಯಾಪ್ತಿಯನು ? ಮೀರಿದ್ದಾರೆ, ಆ ವಿಷಯವನ್ನು ಏತಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ ? ಅದರ ಉದ್ದೇಶವೇನು The Hon. Leader of the Opposition is attributing motive to that Committee.

SRI D. B. CHANDREGOWDA.—Please straighten the records.

MR. SPEAKER.—I will look into the proceedings.

SRI D. B. CHANDREGOWDA.—The Parliamentary Affairs and the Law clubbed together, the Hon. Minister owes a duty to this House and to me and to the Chair also.

SRI M. VEERAPPA MOILY.—To everyone.

ಶ್ರೀ ಡಿ ಬಿ. ಚಂದ್ರೇಗೌಡ.—ಏತಕ್ಕೆ ಅವಸರ ಮಾಡುತ್ತೀರಿ ? ನಾನು ಏನ್ನು ಹೇಳಿದ್ದೇನೆ ಅಂದರೆ, ಸಬಾರ್ಡಿನೇಟ್ ಲೆಜಿಸ್‌ಲೇಷನ್ ಕಮಿಟಿಯ ವ್ಯಾಪ್ತಿ ಇಲ್ಲಿ ಬೇರೆಯಲ್ಲ, ಅಲ್ಲಿ ಬೇರೆಯಲ್ಲ. ಇಲ್ಲಿ ಸಬಾರ್ಡಿನೇಟ್ ಲೇಜಿಸ್‌ಲೇಷನ್ ಕಮಿಟಿ ಏನಿದೆ ಅದೇ ಅನುಭವದ ಆಧಾರದ ಮೇಲೆ ತಿಳಿದು ಕೊಂಡಿದ್ದೇನೆ. ರಾಜ್ಯಸಭಾ ಸಮಿತಿ ಕೂಡ ಇದೇ ಕೆಲಸವನ್ನು ಮಾಡುತ್ತದೆ. ಅವರು ಕರ್ನಾಟಕವನ್ನು ಆಯ್ಕೆ ಮಾಡಿಕೊಂಡರು. ಆ ಕಾರಣಕಾಗಿ Chief Secretary of Karnataka came to the picture ಅದರ ಭಾಗವನ್ನು ಇಲ್ಲಿ ಹೇಳಿದ್ದಾರೆ. ಅಷ್ಟನ್ನು ಹೇಳಬಹುದಾ ? ಇಲ್ಲಿ ಏನು ಪ್ರಶ್ನೆ ಇತ್ತು ?

SRI M VEERAPPA MOILY.—It castes reflection on the functioning of the committee.

SRI D. B. CHANDREGOWDA.—If any aspertions are cast on the Committee, certainly you are wel come to expunge it Sir and please save me from that burden. Normally, I do not do that ತಮಗೆ ಹೇಳುತ್ತೇನೆ, ಸಮಿತಿಯ ವರದಿಯಲ್ಲಿ ಇದೆ ಒಂದು ಮೂಲಭೂತವಾದ ಪ್ರಶ್ನೆಯನ್ನು ಕೇಳುತ್ತೇನೆ.

> "To a pointed question during the course of the evidence, the Chief Secretary of Karnataka was asked whether there had been any misuse of authority in the Telephone tapping incident of 1958"

What is the reply ? The reply is not here. So, therefore, quoting the papers of the Chief Secretary's letter. The reply is here. Sir, to that pointed question, the reply is: "No instances of misuse has come to the notice of the Government." This is the reply. "No instance of misuse has come to the notice of the Government." Whom do you want to hang ! ಯಾರನ್ನು ಹ್ಯಾಂಗ್ ಮಾಡ

ಮಾಡಬೇಕು ? ನಾನು ಅದರಲ್ಲಿ ನಿಮ್ಮ ಹಾಗೆ, ನಿಮಗೆ ಅನುಕೂಲವಾಗುವ ಹಾಗೆ ಮಾತ್ರ ಓದುವುದಿಲ್ಲ. ಎಲ್ಲಾ ಓದುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮ್ಮ ಪ್ರಕಾರ ಸೆಕ್ರೆಟರಿಯವರು ಏನು ಹೇಳುತ್ತಾರೆ ?

ಶ್ರೀ ಡಿ.ಬಿ. ಚಂದ್ರೇಗೌಡ.—'ಗವರ್ನಮೆಂಟ್' ಎಂದರೆ ನನ್ನ ಕಾರಿನ ಮೇಲೂ 'ಗವರ್ನಮೆಂಟ್ ಕಾರ್' ಅಂತ ಬರೆದಿದೆ. ಅದನ್ನು ಚೀಫ್ ಮಿನಿಸ್ಟರ್ ಅಂತ ನಾನು ಅರ್ಥ ಮಾಡಿಕೊಳ್ಳುವುದಿಲ್ಲ. ಅದು ಗವರ್ನಮೆಂಟ್ ಆಫ್ ಕರ್ನಾಟಕ ಅಂತಿದೆ. I will come to that. Sir, here the question is: Who had been authorised to exercise the powers under Section 5 of the Indian Telegraph Act? So, the reply of the Chief Secretary is, the following officers had been authorised by the Government of Karnataka to exercise the powers under Section 5 of the Indian Telegraph Act. 6–12–1962: DIG, CID and Railways, Bangalore; 10–7–1975: Deputy Inspector General of Police, Inteilignce, Bangalore ; 26–5–86: Deputy Inspector General of Police, Intelligence, Bangalore ; and 31–12–86: Deputy Inspector General of Police, Intelligence. Bangalore. These are the persons authorised at various times from 1962 down to 1986. ಇದರ ಒಂದು ಪಟ್ಟಿಯನ್ನು ಕೊಡುತ್ತಾರೆ. ಇದನ್ನು ಆಥರೈಸ್ ಮಾಡುವಾಗ ಯಾರು ಮಾಡಬೇಕು ? ಅವರು ಸ್ಟೇಟ್ ಗವರ್ನಮೆಂಟ್ ಇದನ್ನು ಮಾಡಬೇಕು ಎಂದು ಹೇಳುತ್ತಾರೆ. The Act itself says... ನಿಮಗೆ ಈ ಪ್ರಶ್ನೆ ಏಕೆ ಬಂತು ? ಆಥರೈಸೇಷನ್ ಪ್ರಶ್ನೆ ಏಕೆ ಬರುತ್ತದೆ ?
If I quote certain deliberations of the 5th October Debates... ಇಲ್ಲದಿದ್ದರೆ ಪೂರ್ತಿ ಅದಕ್ಕೆ ಹೋಗಬೇಕಾಗುತ್ತದೆ. ಆಗಿನ ಮುಖ್ಯ ಮಂತ್ರಿಗಳು ಆ ಸದನದಲ್ಲಿ ೧೩–೧೦–೮೮ ರಲ್ಲಿ ಉತ್ತರ ಕೊಡುತ್ತಾ ಇದನ್ನು ಸ್ಪಷ್ಟೀಕರಿಸುತ್ತಾರೆ "ಮೊದಲು ನಮ್ಮ ರಾಜ್ಯದಲ್ಲಿ ಟೇಲಿಫೋನ್ ಟ್ಯಾಪಿಂಗ್ ಏನಿದೆ, ಇದು ೬೨ ರಲ್ಲಿ ಕೂಡ ಮಾಡಿದ್ದಾರೆ" ಇದನ್ನೇ ಮುಖ್ಯ ಕಾರ್ಯದರ್ಶಿಯವರು ಹೇಳುತ್ತಾರೆ. ನಂತರ ೭೫ ರಲ್ಲಿ ಮಾಡಿದ್ದಾರೆ. ಇವತ್ತು ನನಗೆ ಗೊತ್ತಿದ್ದಮಟ್ಟಿಗೆ ೧೧–೭–೭೫ ರಲ್ಲಿ ಆಗಿದೆ ಇದನ್ನೇ ೧೦–೭–೭೫ ಅನ್ನುತ್ತಾರೆ. ಇವರು ಹೇಳಿದ ಪ್ರಕಾರ ೧೧–೭–೭೫ ರಲ್ಲಿ ಆಗಿದೆ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿ ಈ ಒಂದು ಕಾನೂನು ಕೆಳಗಡೆ ಸರ್ವೆ ಸಾಮಾನ್ಯವಾದ ಒಂದು ಸರ್ಕಾರಿ ಆಜ್ಞೆ ಮಾಡಿದ್ದಾರೆ. ಏಕೆ ಮಾಡಿದಿರಿ ಈ ಆಜ್ಞೆಯನ್ನು ? ಅವರು ಹೇಳುತ್ತಾರೆ, "ಇದಕ್ಕೂ ಹಿಂದೆ ೧೯೬೨ ರಲ್ಲೇ ಮೊದಲ ಆಜ್ಞೆ ಇದೆ. ಇದನ್ನು ಬದಲಾವಣೆ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಆದರೆ ಪೋಸ್ಟ್ ಅಂಡ್ ಟೆಲಿಗ್ರಾಫ್ಸ್‌ನ ಜನರಲ್ ಮ್ಯಾನೇಜರ್ ಬೆಂಗಳೂರು, ಇವರು ಸರ್ಕಾರಕ್ಕೆ ಒಂದು ಪತ್ರ ಬರೆಯುತ್ತಾರೆ... which reads like this. I quote; "The General Manager, Bangalore Telephones, has asked that the order in respect of the telephone tapping is old and a fresh authorisation by the present Government is necessary for extending the facility beyond 31st March 1984." ಈ ಕಾರಣದಿಂದ ಮಾಡುತ್ತಾರೆ. ಮುಖ್ಯ ಮಂತ್ರಿಗಳು ಹೇಳಿದರು ಎಂದು ಅಲ್ಲ. ಅದಕ್ಕೂ ಮುಂಚೆ ಫೆಬ್ರವರಿ ೨೨, ೧೯೮೪ ರಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮುಖ್ಯ ಕಾರ್ಯದರ್ಶಿಯವರು ಕ್ಯಾಬಿನೆಟ್ ಮಿನಿಸ್ಟರ್ ಶ್ರೀ ದೇವೇಗೌಡರ ಟೆಲಿಫೋನ್ ಟ್ಯಾಪ್ ಮಾಡಬಹುದು ಎಂದು ಕೊಡಬಹುದೇ Is it possible for a Government Servant *i.e.* The Chief Secretary: can he direct; can he issue an order to tap the telephone of two Cabinet Ministers without the permission of the Chief Minister ? Is it possible ?

SRI D.B. CHANDRE GOWDA.— Here is the mistake. Once the State Government appoints the authority under the Act, Section 5 (2) ... the appointing authority gets delinked totally.

SRI M. MALLIKARJUN KHARGE.— You are a good lawyer but you arguing are very bad case.

SRI AZIZ SAIT.— What is the authority that the Chief Secretary has to ask to tap Devegowda's telepone, Bangarappa's telephone, Veerappe Moily's phone ? There is a political will and that will come from the Chief Minister and not the Chief Secretary.

SRI D. B. CHANDRE GOWDA.—I was also a Cabinet Minister, Sir, with due apologies. I was also a Cabinet Minister.

SRI AZIZ SAIT.— Let us have a comparisaon of our Ministry. What power the Chief Minister has got, which the Ministers do not have. A Minister of a Cabinet rank even if he has passed an order which appears to the Secretary to be not correct and he discusses it with the Minister. The Minister still holds his views and has guts to say, "This is my order, you carry out." The Secretary feels that the Minister's order is not correct. Then he puts his noting and forwards it to the Chief Minister and not to the Chief Secretary, whereas the Chief Minister's order has to be carried out by the Chief Secretary. A Minister's order cannot be carried out by the Chief Secretary. I think you know that functioning of the Ministry.

SRI D. B. CHANDRE GOWDA.— Mr. Aziz Sait Sab, please hear me for two minutes. The question here is, the moment the authority is named, what you call the Deputy Inspector General or Special Inspector General of police (Intelligence) the moment that order, came the Chief Secretary gets delinked. The Chief Secretary is not the authority to say what transpires between the Chief Minister and the Intelligence Officer. Therefore, that is exactly my point.

SRI AZIZ SAIT.— There you are correct. I have not opened my mouth. Now I am opening because I am only surprised...

SRI D. B. CHANDRE GOWDA.—You can open but at least take permission.

SRI AZIZ SAIT.—A seasoned politician like Chandre Gowda, and an Advocate, I want to know. from him some clarification. The Chief Minister orders the Chief Secretary, to direct so and so officer to do the job. After that the Chief Secretary is out of the picture. The DIG Intelligence will go and report to the Chief Minister and what they talk nobody knows. There is not a single paper, there is not a single statement in writing or even oral. That is the duty of the Intelligence Officer to brief the Chief Minister. He does not even brief the Chief Secretary. If it is the Chief Secretary's order, then the DIG ought to have given replies to the Chief Secretary and not the Chief Minister. If you feel that the Chief Secretary is the Government, unfortunately you are wrong. Fortunately, the Chief Minister is the Government and the Intelligence Officer is answerable to him and not to the Chief Secretary.

SRI D. B. CHANDRE GOWDA.—I thank Mr. Aziz Sait, the senior Member of the House. I would only say, you have argued my case. Thanks to you. You said, the moment the authority is fixed by the Chief Minister himself or by the Chief Secretary or by the Government.

SRI AZIZ SAIT.—Why do you mix up the two ? Chief Minister is different and Chief Secretary is different....

SRI D. B. CHANDRE GOWDA.—This is a very very delicate demarcation. That is the reason why I am trying to couvince you. No. One. The Act empowers the State and the Central Governments to appoint a competent authority to intercept the telophones under Section 5, Clause 2 (b) or something like that. Once the appointing authority has appointed, the appointing authority gets delinked. The only persons who come into picture are the Chief Minister and the Officer of the Intelligence, whoever is named. Now, we do not know what does the Special Intelligence D. I. G. says about this. Who else can say ? Nobody also can say Therefore, even stretching the argument to that extent that the Chief Secretary has adduced evidence in this case, that evidence has no meaning. That has no relevance so far as this discussion is concerned. Even then basing on the evidence adduced by the Chief Secretary, whatever argument that the hon. friend has based, even there he says there is no misuse in 1988. Further Sir, this reply to 'B' which he relevantly quotes and takes credit for quoting, is directly linked with the reply to question 'A' Unfortunately ಈ ಕೇಸ್‌ನಲ್ಲಿ ಏನಾಗಿದೆ ಎಂದರೆ, ಒಬ್ಬರು ಚೀಫ್ ಸೆಕ್ರೆಟರಿ ಓರಲ್‌ರಿಪ್ಲೈ ಕೊಟ್ಟಿದ್ದಾರೆ. ಇನ್ನೊಬ್ಬರು ಚೀಫ್ ಸೆಕ್ರೆಟರಿ ಅದನ್ನು ಬರವಣಿಗೆ ಮೂಲಕ ಕೊಟ್ಟಿದ್ದಾರೆ. ಇವರಿಬ್ಬರನ್ನು ಬಿಟ್ಟು/ಮೂರನೆಯ ಚೀಫ್ ಸೆಕ್ರೆಟರಿ who was the Chief Secretary at the relevant time. ಇದರಲ್ಲಿ ಚೀಫ್ ಸೆಕ್ರೆಟರಿಗಳು ಮೂರು ಜನ ಬರುತ್ತಾರೆ. ಯಾರು ಯಾವ ಯಾವ ಪೀರಿಯಡ್‌ನಲ್ಲಿ ಏನು ನಡೆದಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ If it is the only one order right from 1962, till 1986, I would concede that his argument of the general policies laid down, I would concede. But it changes in 1975, and in 1976. How do we know what the procedure is followed ? I don't know what is the procedure Shri Veerendra Patilji followed in this case. Let him spell out. Therefore, my submission is ನಾವು ಏನು ಇಲ್ಲಿ ಈ ಒಂದು ಪೇಪರ್ ಮೇಲೆ ರಿಲೈ ಮಾಡಿಕೊಂಡು ಆರ್ಗ್ಯುಮೆಂಟ್ ಮಾಡುತ್ತಾ ಇದ್ದೇವೆ. This argument has no basis. If there is any basis, if you want to believe it, please believe the full text of it and say "The numbers were altered and deletted by the authorities of the officers in consultaiion or with prior permission of the Chief Minister". To what relevant period does it speak of ? If it speaks right from 1962 to 1986, does he speak the prevailing situation right from 1962 to 1986 ? This is what he has replied. I am quoting the reply. He says, ೬.೧.೬೨ರಲ್ಲಿ ಒಂದು ಆರ್ಡರ್ ಆಗಿತ್ತು. ೧೮.೭.೭೫ರಲ್ಲಿ ಒಂದು ಆರ್ಡರ್ ಆಗಿತ್ತು, ೨೬.೬.೭೬ರಲ್ಲಿ ಒಂದು ಆರ್ಡರ್ ಆಗಿತ್ತು, ೩೧-೬-೧೯೮೬ರಲ್ಲಿ ಒಂದು ಆರ್ಡರ್ ಆಗಿತ್ತು, ಎಂದು ಹೇಳಿದ್ದಾರೆ. To which relevant period he speaks and Sir, let me tell you, for a short period of time the

Chief Secretary, who had no knowledge as to what transpired, ೧೯೮೬ ರಲ್ಲಿ ಆದೇಶ ಆಗಿತ್ತು. ಅದು ಹೀಗೇ ಆಗಿತ್ತು ಎಂದು ಯಾರು ಹೇಳುವುದು. It was Sathishchandran, the then Chief Secretary. Let us be fair to the case Another most important aspect of this is, ಶ್ರೀ ದೇವೇಗೌಡರ ಫೋನ್ ಟ್ಯಾಪ್ ಆಗಿತ್ತು. ಮತ್ತೊಬ್ಬರ ಫೋನ್ ಟ್ಯಾಪ್ ಆಗಿತ್ತು. ಯಾವ ಕಾಲದಲ್ಲಿ ಆಗಿತ್ತು. ೬೨ ರಿಂದ ಆಗಿತ್ತೋ ಮಾನ್ಯ ದೇವೇಗೌಡರು ೬೨ ರಿಂದ ಸದಸ್ಯರಾಗಿದ್ದರು. ೧೯೮೧–೮೨ರಲ್ಲಿ ಆಯಿತೋ ೧೯೮೬ರಲ್ಲಿ ಆಯಿತೋ, ಯಾವ ಕಾಲದಲ್ಲಿ ಆರ್ಡರ್ ಆಗಿತ್ತು. Please produce the document. What does the Minister say in the Lok Sabha? The then Communication Minister says in the Lok Sabha to a pointed question of the Leader of Opposition Mr. Madhu Dandavate. Let me quote, After all this is not my case. "August 9, 1988 Lok Sabha Debates Question No. 198–Tapping of the Tele phones. Prof. Madhu Dandavate and Shri Madhava Reddy." 'Whether the Government have seen recent press reports regarding tapping of the telephone talks held between political leaders? If so, the facts thereof. Whether such taluks are tapped by the Telephone Department and if so, under whose instructions. If not, whether the Government propose to get this investigated through on independent agency as to why the talks were tapped and at whose instence?'

The then Communications Minister, Veerabhadra Singh replied to the Lok Sabha of the relevant period. The Hon. Chief Minister was also a Member of the House. "Yes. The Government must have seen the Report in the Indian Express dated 10th July 1988 regarding tapping of telephone conversation between Shri Ajit Singh and Shri Deve Gowda. PIC Telephone No. 73835, 77611, 77171 at Bangalore stood in the names of Shri Deve Gowda, then a Minister in the Government of Karnataka by an order in the Government of Karnataka dated 30th August 1985. The DIG of Police, Intelligence, Government of Karnataka, directed the telephone messages passing through the telephone Nos. so and so should be intercepted."

SRI M. MALLIKARJUN KHARGE.—He has acted under the instructions of the then Chief Minister.

ಶ್ರೀ ಅಜೀಜ್ ಸೇಠ್.—ತಪ್ಪು ಏನು ಇದೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಏತಕ್ಕೆ ಹೇಳುತ್ತಿದ್ದೇನೆ, ದಯಮಾಡಿ ಕೇಳಬೇಕು ತಾವು ಏನು ಹೇಳಿದಿರಿ. ಅಫಿಷಿಯಲ್ ಸೀಕ್ರೇಟ್ ಆಕ್ಟ್ ಅನ್ನು ಏನಾದರೂ ನಾವು ಡಿಸ್‌ಪೋಜ್ ಮಾಡಿದರೆ ನಮ್ಮ ತಲೆಗೆ ಬರುತ್ತದೆ. ಲೋಕಸಭೆಯಲ್ಲಿ ನಮ್ಮ ಸರ್ಕಾರದ ಆಜ್ಞೆಯನ್ನು ಕೋಟ್ ಮಾಡಿದ್ದಾರೆ. ಆ ಆಜ್ಞೆಯನ್ನು ಇಡಿ. ಆ ಆಜ್ಞೆಯನ್ನು ನೋಡೋಣ. ಆಗ ಯಾರ ಮೇಲೆ ಬರುತ್ತದೆ, ಎನ್ನುವುದು ಗೊತ್ತಾಗುತ್ತದೆ.

SRI M. MALLIKARJUN KHARGE.—The Chief Secretary has clearly written a letter.

SRI AZIZ SAIT.—You are confused.

SRI D. B. CHANDRE GOWDA.—You have no views. I have views, I am confused.

SRI AZIZ SAIT.—You are a confused man today. A very confused man. I am sorry. My sympathy with you.

ಶ್ರೀ ಡಿ. ಬಿ. ಚಂದ್ರೇಗೌಡ.—ನಮ್ಮ ಸೇಠ್ ಸಾಹೇಬರಿಗೆ ಈಗ ಫ್ಯೂಜ್ ಹತ್ತಿಕೊಂಡಿದ್ದು ನನಗೆ ಬಹಳ ಆಶ್ಚರ್ಯವಾಗುತ್ತದೆ. ಅವರು ಕನ್‌ಫ್ಯೂಜ್ ಮಾಡಿಕೊಂಡು ಹೇಳುತ್ತಿದ್ದಾರೆ. ಇನ್ನು ಅರ್ಧ ಗಂಟೆ ಮೇಲೆ ಅವರ ಫ್ಯೂಜ್ ಆಫ್ ಆಗುತ್ತದೆ, ಅವರು ನನ್ನನ್ನು ಕನ್‌ಫ್ಯೂಜ್ ಮಾಡಿಕೊಂಡಿದ್ದೇನೆಂದು ಹೇಳುತ್ತಿದ್ದಾರೆ. ನಾನು ಕನ್‌ಫ್ಯೂಜ್ ಆಗಿಲ್ಲ. ಈ ಆಜ್ಞೆ ಬಂದಿದ್ದು ಮಾನ್ಯ ಮುಖ್ಯ ಮಂತ್ರಿಗಳ ಆದೇಶದಿಂದ ಅಲ್ಲ. ಕೇಂದ್ರ ಸರ್ಕಾರದವರು ಒಂದು ಹೊಸ ಆರ್ಡರ್ ಮಾಡಿ ಎಂದು ಹೇಳಿದರು ಮತ್ತು ಟೆಲಿ-ಕಮ್ಯುನಿಕೇಶನ್ ಇಲಾಖೆಯವರು ಹೊಸ ಆರ್ಡರ್ ಮಾಡಿ ಎಂದು ಹೇಳಿದರು, ಇವೆರಡರ ಮಧ್ಯೆ ಈ ಒತ್ತಾಯಕ್ಕೆ ಮಣಿದು ಹೊಸ ಆಜ್ಞೆ ಬಂತು. ಆ ಆಜ್ಞೆಯನ್ನು ನಾವು ಇಂಟಲಿಜನ್ಸಿ ಸ್ಪೆಷಲ್ ಡಿ. ಐ. ಜಿ.ಯವರನ್ನು ಅಪಾಯಿಂಟ್ ಮಾಡಿ ಅವರಿಗೆ ಈ ಆಜ್ಞೆ ಮಾಡಿದ್ದೇವೆ. ಯಾವ ಯಾವ ಟೆಲಿಫೋನ್‌ಗಳನ್ನು ಟ್ಯಾಪ್ ಮಾಡಬೇಕೆಂದು ಆಜ್ಞೆ ಮಾಡಿದ್ದಾರೆ ಅದರ ಆರ್ಡರ್ ಏನು? ರೂಲಿಂಗ್ ಪಾರ್ಟಿಯಲ್ಲಿ ......

ಶ್ರೀ ಎ. ಕೆ. ಅನಂತ ಕೃಷ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಕೇಂದ್ರ ಸರ್ಕಾರ ಹೇಳಿದಂತೆ ಆಯಿತು ಎಂದು ಹೇಳುತ್ತಿದ್ದಾರೆ. ಇಲ್ಲಿ ಕೇಂದ್ರ ಸರ್ಕಾರ ಎಲ್ಲಿ ಬಂತು?

ಶ್ರೀ ಅಜೀಜ್ ಸೇಠ್.—ತಮ್ಮ ಕೈಯಲ್ಲಿ ವಿಚಾರ ಇದೆ. ತಾವು ಸರಿಯಾಗಿ ಓದಿ.

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಬಹಳ ತೊಂದರೆಯಲ್ಲಿ ಇದ್ದೀರಿ. In fact I feel pity for him. That is all.

SRI AZIZ SAIT.—You are confused. Really I sympathise.

ಶ್ರೀ ವಾಟಾಳ್ ನಾಗರಾಜ್.—ಅವರು ಇದುವರೆಗೂ ಬಾಯಿ ಬಿಟ್ಟಿಲ್ಲ. ಈಗ ಬಾಯಿ ಬಿಟ್ಟಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಇದನ್ನು ಲಂಬಿಸಿಕೊಂಡು ಹೋಗುವುದಿಲ್ಲ. ಪೂರ್ಣ ಪ್ರಮಾಣದ ಉತ್ತರವನ್ನು ನೋಡಿದರೆ ಯಾವ ಪ್ರಶ್ನೆಯನ್ನು ಆ ಸಂದರ್ಭಕ್ಕೆ ಇವರು ಕೊಟ್ಟರು ಎಂದು ಹೇಳಿ. ಅವರು ಕ್ವೆಶ್ಚನ್ 'ಬಿ'ಯನ್ನು ಏನು ಪ್ರಸ್ತಾಪ ಮಾಡುತ್ತಾರೆ ? ಇದು ಅಷ್ಟಕ್ಕೇ ಸೀಮಿತವಾದರೆ ಇದರ ಅರ್ಥ ಬೇರೆಯಾಗುತ್ತದೆ. ಫುಲ್ ಕಾಂಟೆಕ್ಸ್ಟನಲ್ಲಿ ಓದಿದರೆ ಪರಿಪೂರ್ಣವಾದ ೮೮ರ ಅಥವಾ ೮೬ರ ಆಜ್ಞೆ, ಆಜ್ಞೆ ೮೮ರ ಪ್ರಕಾರ ಟೆಲಿಫೋನ್ ಮಿಸ್‌ಯೂಸ್ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತದೆ. ಮೇಲಾಗಿ ಕ್ವೆಶ್ಚನ್ 'ಎ'ಯನ್ನು ಬಿಟ್ಟು 'ಬಿ'ಯನ್ನು ಓದಿದರೆ ಶ್ರೀಮಾನ್ ಖರ್ಗೆಯವರು ಓದಿದ ಹಾಗೆ ಇದು ಆ ಪೀರಿಯಡ್‌ಗೆ ಸಂಬಂಧ ಎಂದು ಹೇಳುತ್ತದೆ. ಇದು ಹಾಗಿಲ್ಲ. ೬೫, ೭೫, ೮೬ ರಲ್ಲಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೫ ಬಗ್ಗೆ ರೆಲೆವೆಂಟ್ ಆಗಿ ಕೇಳಿದ್ದುದು.

ಶ್ರೀ ಡಿ. ಬಿ. ಚಂದ್ರೇಗೌಡ.—ಯು ಆರ್ ರೈಟ್. ನಾವು ೮೮ರಲ್ಲಿ ಟೆಲಿಫೋನ್ ಮಿಸ್‌ಯೂಸ್ ಆಗಿದೆ ಎನ್ನುವ ಪ್ರಶ್ನೆಗೆ ಅವರ ಉತ್ತರ ಏನು? "No instance of misuse had come to the notice of the Government." That is relevant.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಂದೆ ಓದಿ. ೩೦ನೇ ತಾರೀಖು ಲೆಟರ್ ಓದಿ.

SRI D. B. CHANDRE GOWDA.—"What action had been taken against any officer who had misused this power?" In the light of the answer to question (d). the question of taking action against any officer does not arise."

ಮುಂದೆ ಖಾಲಿ. ನೀವು ಏನಾದರೂ ಬರೆಯುತ್ತೀರಾ? ಬರೆಯುವ ಹಾಗಿದ್ದರೆ ಬರೆಯಿರಿ.

ಅಧ್ಯಕ್ಷರು.—ಇನ್ನೂ ಟೈಮ್ ಬೇಕೇ? ಅಥವಾ ಮುಗಿಸುತ್ತೀರೋ ?

ಶ್ರೀ ಡಿ. ಬಿ. ಚಂದ್ರೇಗೌಡ.—ಇನ್ನೂ ಸಮಯ ಬೇಕು.

MR. SPEAKER.—You can resume your speech tomorrow.

ಈಗ ಸಭೆಯು ಮುಂದುವರಿದು ನಾಳೆ ಪ್ರಾತ:ಕಾಲ ಒಂಭತ್ತೂವರೆ ಗಂಟೆಗೆ ಮತ್ತೆ ಸಮಾವೇಶ ಗೊಳ್ಳುತ್ತದೆ.

(ಸದನವು ೭ ಗಂಟೆ ೪೨ ನಿಮಿಷಕ್ಕೆ ಮುಕ್ತಾಯವಾಯಿತು)